
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಫೆಬ್ರವರಿ 29, 2012 ಪುಟ 20 ರೂ. 14/-



ಪಠ್ಯಪುಸ್ತಕಗಳ ಕೇಸರೀಕರಣ



ಅಥಣಿ ಬ್ಲೂ ಫಿಲಂ 'ಅಭಿಮಾನಿ'ಗಳ ರ‍್ಯಾಲಿ



ಧರ್ಮರಾಜಕಾರಣದ ನಾಜೂಕಯ್ಯ

BBMP : ಇಂದು ಕೆ.ಆರ್. ಮಾರ್ಕೆಟ್ ಒತ್ತೆ, ನಾಳೆ ಕಬ್ಬನ್ ಪಾರ್ಕ್?



ಬೇಸ್ತುಬಿದ್ದ ಬೆಂಗಳೂರು ಪೊಲೀಸ್

ಕಿಡ್ನ್ಯಾಪ್ ಆದವನು ನಕಲಿ ಡಾಕ್ಟರ್




ಭದ್ರಾವತಿ: MPMಗೆ ಆರಗನೆಂಬ ಗೆದ್ದಲು

ವಿಶ್ವಹಿಂದೂ ಪರಿಷತ್‌ನ ಕೀಚಕರು


ಪಠ್ಯಪುಸ್ತಕಗಳ ಕೇಸರೀಕರಣ

ಭಾಗ 2

ಶಿವಸುಂದರ್ — ಚಾರ್ವಾಕ



ಪಠ್ಯ ಪುಸ್ತಕ ರಚನೆಗೆ ವೃತ್ತಿ ಮತ್ತು ಕೌಶಲ್ಯ ಬಲ್ಲ ಇತಿಹಾಸಕಾರರನ್ನು ಪಠ್ಯ ರಚಿಸಲು ಮತ್ತು ಪರಿಶೀಲಿಸಲು ನೇಮಕ ಮಾಡಿಕೊಳ್ಳುವಂತೆ ಒತ್ತಾಯಿಸಬೇಕಿದೆ ಹಾಗೂ ಸಂಘಪರಿವಾರದ ಇತಿಹಾಸ ದಾಖಲಾಗುವುದನ್ನು ಖಾತರಿಪಡಿಸಿಕೊಳ್ಳಲು ರಚಿಸಲಾಗಿರುವ ಮುಡಿಂಬಡಿತ್ತಾಯರವರ ಮುಖ್ಯ ಸಂಯೋಜಕ ಹುದ್ದೆಯೂ ರದ್ದಾಗಬೇಕೆಂದೂ, ಅದರ ಬದಲಿಗೆ ಪರಿಣಿತರ ಪರಿಶೀಲನೆ ಮತ್ತು ಸಾರ್ವಜನಿಕ ಚರ್ಚೆಯ ನಂತರವೇ ಪಠ್ಯವನ್ನು ಜಾರಿಗೆ ತರಬೇಕೆಂದೂ ಆಗ್ರಹಿಸಬೇಕಿದೆ. ಏಕೆಂದರೆ ವಿಕೃತ ಇತಿಹಾಸದ ಬುನಾದಿಯ ಮೇಲೆ ಆರೋಗ್ಯಕರ ಭವಿಷ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ.



ಕಳೆದ ಸಂಚಿಕೆಯಲ್ಲಿ ಗಮನಿಸಿದಂತೆ ಪ್ರಾಥಮಿಕ ಶಿಕ್ಷಣದಲ್ಲಿ ಸೌಹಾರ್ದ ಬದುಕು, ವೈಜ್ಞಾನಿಕ ಮನೋಭಾವ, ಸಂವಿಧಾನದಲ್ಲಿ ಘೋಷಿಸಲ್ಪಟ್ಟಿರುವ ಸಾಮಾಜಿಕ ನ್ಯಾಯ-ಸಮಾನತೆ, ಇನ್ನಿತ್ಯಾದಿ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ 2005ರಲ್ಲಿ "ನ್ಯಾಷನಲ್ ಕರಿಕುಲಮ್ ಫ್ರೇಮ್‌ವರ್ಕ್" ಅನ್ನು ತಯಾರಿಸಲಾಗಿತ್ತು. ಅದನ್ನು ಆಧರಿಸಿಯೇ ಎಲ್ಲಾ ರಾಜ್ಯಗಳು ತಮ್ಮ ತಮ್ಮ ರಾಜ್ಯದಲ್ಲಿ ಸಿಲಬಸ್ ಮತ್ತು ಪಠ್ಯಗಳನ್ನು ರೂಪಿಸಿಕೊಳ್ಳಬೇಕಿತ್ತು. ಅದಕ್ಕೆ ತಕ್ಕಂತೆ ರಾಜ್ಯದ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಸಹ ಅದಕ್ಕೆ ತಕ್ಕಂತೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿತ್ತು. ಇವೆರಡನ್ನು ಆಧರಿಸಿ ಪಠ್ಯ ಪುಸ್ತಕ ರಚನಾ ಸಮಿತಿಗಳು ನೇಮಕಗೊಂಡು ಪಠ್ಯಗಳು ಸಿದ್ಧವಾಗಬೇಕಿತ್ತು.

ಆದರೆ ಕರ್ನಾಟಕದಲ್ಲಿ ಈ ಪ್ರಕ್ರಿಯೆ ಪ್ರಾರಂಭಗೊಳ್ಳುವ ವೇಳೆಗೆ ಸಮ್ಮಿಶ್ರ ಸರ್ಕಾರವೆಂಬ ಅರೆಚಡ್ಡಿ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಅದು ಮುಗಿಯುವ ವೇಳೆಗೆ ಸಂಪೂರ್ಣ ಚಡ್ಡಿ ಸರ್ಕಾರವೇ ಅಧಿಕಾರದಲ್ಲಿದೆ. ಹಿಂದಿನ ಸಂಚಿಕೆಯಲ್ಲಿ ವಿವರಿಸಿದಂತೆ ಬಿಜೆಪಿ ಸರ್ಕಾರ ಪಠ್ಯಪುಸ್ತಕ ರಚನಾ ಸಮಿತಿಯ ಹಿಂದಿನ ಕೆಲ ಸದಸ್ಯರನ್ನು ಮಾತ್ರವೇ ಉಳಿಸಿ ಕೊಂಡು, ಸಮಿತಿಗಳ ಅಧ್ಯಕ್ಷರ ಜೊತೆ ಚರ್ಚೆಯನ್ನೂ ಮಾಡದೆ, ಸಮಿತಿಯ ತುಂಬಾ ಸಂಪೂರ್ಣ ಸಂಘಪರಿವಾರದ ಮಂದಿಯನ್ನೇ ತುಂಬಿಬಿಟ್ಟಿತು. ಸಾಮಾನ್ಯವಾಗಿ ಪಠ್ಯ ರಚನಾ ಸಮಿತಿಗಳು ನೇಮಕಗೊಳ್ಳುವಾಗ ಪಠ್ಯ ರಚನಾ ಸಮಿತಿ, ಅದರ ಪರಿಶೀಲಕರ ಸಮಿತಿಗಳು ಹಾಗೂ ಸಂಪಾದಕೀಯ ಮಂಡಳಿಯನ್ನು ರಚಿಸಲಾಗುತ್ತದೆ. ಆದರೆ ಬಿಜೆಪಿ ಸರ್ಕಾರ ಮಾತ್ರ ಇದೆಲ್ಲದರ ಜೊತೆಗೆ ಮುಖ್ಯ ಸಂಯೋಜಕ ಎಂಬ ಮತ್ತೊಂದು ಹುದ್ದೆಯನ್ನು ಸೃಷ್ಟಿಸಿ ಅದಕ್ಕೆ ಪ್ರೊ. ಮುಡಿಂಬಡಿತ್ತಾಯ ಎಂಬ ಪರಮ ಆರೆಸ್ಸೆಸ್ ಮಹಾಶಯರನ್ನು ಕೂಡಿಸಿದೆ. ಯಾರು ಏನೇ ಕರಡು ಬರೆದರೂ, ಏನೇ ಪರಿಶೀಲಿಸಿದರೂ ಅದರ ಅಂತಿಮ ಪರಿಶೀಲನೆ ಮಾತ್ರ ಈ ಸಂಘಪರಿವಾರದ ಬೌದ್ಧಿಕ ಪ್ರಮುಖನದೇ. ಇತ್ತೀಚೆಗೆ 5 ನೇ ತರಗತಿಯ ಇತಿಹಾಸ ಪುಸ್ತಕದ ವಿರುದ್ಧ ವ್ಯಕ್ತವಾದ ಪ್ರತಿರೋಧಕ್ಕೆ ಸರ್ಕಾರದ ಪತಿಯಿಂದ ಮತ್ತು ಶಿಕ್ಷಣ ಇಲಾಖೆಯ ಪರವಾಗಿ ಸಮಜಾಯಿಷಿಗಳನ್ನು ಕೊಟ್ಟದ್ದು ಈ ಮಹಾಶಯರೇ ಎಂದರೆ ಪಠ್ಯಪುಸ್ತಕ ಸಮಿತಿಯಲ್ಲಿ ಸಂಘಪರಿವಾರಕ್ಕಿರುವ ಸ್ಥಾನಮಾನವೇನೆಂಬುದು ಅರ್ಥವಾಗುತ್ತದೆ.

5 ಮತ್ತು 8 ನೇ ತರಗತಿಯ ಪಠ್ಯಗಳ ಕೇಸರೀಕರಣದ ವಿರುದ್ಧ ರಾಜ್ಯಾದ್ಯಂತ ಪ್ರತಿರೋಧದ ಧ್ವನಿಗಳು ಏಳುತ್ತಿದ್ದಂತೆ ಸರ್ಕಾರ ಆ ಪಠ್ಯಗಳಿಗೆ ಒಂದೆರಡು ಕಾಸ್ಮೆಟಿಕ್ ಬದಲಾವಣೆ ಮಾಡಿ ಆಕ್ಷೇಪಣೆಗಳಿಗೆ ಓಗೊಟ್ಟ ನಾಟಕವಾಡುತ್ತಿದೆ. ಸಾಂಸ್ಕೃತಿಕ ಭಾರತದ ಹೆಸರಲ್ಲಿದ್ದ ಹಿಂದೂ ಧರ್ಮ ವಿಜಯದ ಹೆಗ್ಗಳಿಕೆಯನ್ನು ಬಿತ್ತರಿಸುತ್ತಿದ್ದ ಭೂಪಟವನ್ನು ಕೈಬಿಡುವುದು, ಹಿಂದೂಯೇತರ ಧರ್ಮಗಳ ಬಗ್ಗೆ ಇನ್ನೆರಡು ಸಾಲುಗಳನ್ನು ಸೇರಿಸುವುದು, ಇಂತಹ ಕೆಲವು ತೋರಿಕೆಯ ಬದಲಾವಣೆಗಳನ್ನು ಮಾಡಲು ಸರ್ಕಾರದ ಪರವಾಗಿ ಮುಡಿಂಬಡಿತ್ತಾಯರವರು ಒಪ್ಪಿಕೊಂಡಿದ್ದಾರೆ.

ಆದರೆ ಈ ಪಠ್ಯಗಳಲ್ಲಿ - ಅದರಲ್ಲೂ 5ನೇ ತರಗತಿಯ ಇತಿಹಾಸ ಪಠ್ಯದ ಧಾರೆಯಲ್ಲಿ ಮತ್ತು ಧೋರಣೆಯಲ್ಲಿ - ಸಂಘಪರಿವಾರದ ಇತಿಹಾಸ ದರ್ಶನವಿದೆಯೇ ವಿನಃ ವೈಜ್ಞಾನಿಕವಾದ ಇತಿಹಾಸ ಗ್ರಹಿಕೆಯ ಬುನಾದಿ ಇಲ್ಲ. ಅಷ್ಟು ಮಾತ್ರವಲ್ಲ, ಅದು "ನ್ಯಾಷನಲ್ ಕರಿಕುಲಮ್ ಫ್ರೇಂವರ್ಕ್" ಸಲಹೆ ಮಾಡಿದ ಸಾಮಾಜಿಕ ನ್ಯಾಯ, ತುಳಿತಕ್ಕೊಳಗಾದವರ ಇತಿಹಾಸದ ಬಗೆಗಿನ ಒತ್ತು, ಡಿಎಸ್‌ಇಆರ್‌ಟಿ ನಿರ್ದೇಶಿಸಿರುವಂತೆ ವಿವಿಧ ಸಂಸ್ಕೃತಿಗಳ ಸಮ್ಮಿಲನದಿಂದ ಕನ್ನಡ ಭಾಷೆ ಮತ್ತು ಕರ್ನಾಟಕ ರೂಪುಗೊಂಡ ಬಗ್ಗೆಯಾಗಲೀ ಇಲ್ಲವೇ ಇಲ್ಲ. ಬದಲಾಗಿ ಅವೆಲ್ಲವುದಕ್ಕೆ ತದ್ವಿರುದ್ಧವಾದ ದೃಷ್ಟಿಕೋನವನ್ನು ಮಕ್ಕಳು ರೂಪಿಸಿಕೊಳ್ಳುವಂತ ಪಠ್ಯಗಳನ್ನು, ಇತಿಹಾಸ ನಿರೂಪಣೆಯನ್ನೂ ಹೊಂದಿದೆ. ಆದ್ದರಿಂದಲೇ ಮುಡಿಬಂಡಿತ್ತಾಯರವರು ಅಂಥ ಮೂಲ ಧೋರಣೆಗಳನ್ನು ಪ್ರಶ್ನಿಸದ ಸಲಹೆಯನ್ನು ಒಪ್ಪಿಕೊಂಡಂತೆ ಮಾಡಿ ಸಾರಾಂಶದಲ್ಲಿ ಸಂಘಪರಿವಾರದ ಹಿಂದೂ ರಾಷ್ಟ್ರೀಯವಾದಿ ಇತಿಹಾಸವನ್ನು ಮಕ್ಕಳ ತಲೆಗ ತುರುಕಲು ಮುಂದಾಗಿದ್ದಾರೆ.

ಐದನೆ ತರಗತಿಯ ಇತಿಹಾಸ ಪಠ್ಯವನ್ನು ಸಮಗ್ರವಾಗಿ ಅವಲೋಕಿಸಿದಾಗ ಬಿಜೆಪಿ ಸರ್ಕಾರ ಹಿಂದೂ ರಾಷ್ಟ್ರೀಯವಾದಿ ಇತಿಹಾಸವನ್ನು ತುರುಕಲು ಪಠ್ಯ ರಚನೆಯಲ್ಲಿ ಮೂರು ಬಗೆಯ ಕಸರತ್ತುಗಳನ್ನು ಮಾಡಿದೆಯೆಂದು ಹೇಳಬಹುದು:

1. ಈವರೆಗೆ ಇಲ್ಲದ ಹಿಂದೂತ್ವವಾದಿ ಇತಿಹಾಸ ವ್ಯಾಖ್ಯಾನವನ್ನು ನೇರವಾಗಿಯೇ ಸೇರಿಸಿರುವುದು.
2. ರಾಷ್ಟ್ರೀಯವಾದಿ ಇತಿಹಾಸ ರಚನೆಯಲ್ಲಿ ಈ ಹಿಂದೆಯೂ ಇದ್ದ ಮೃದು ಹಿಂದೂ ರಾಷ್ಟ್ರೀಯವಾದಿ ವ್ಯಾಖ್ಯಾನವನ್ನು ಬಳಸಿಕೊಂಡು ಪರೋಕ್ಷವಾಗಿ ಮತ್ತಷ್ಟು ಹಿಂದೂವಾದಿ ದೃಷ್ಟಿಕೋನವನ್ನು ಬೆರೆಸಿರುವುದು.
3. ನಮ್ಮ ಇತಿಹಾಸದ ಬಗ್ಗೆ ಹೆಮ್ಮೆಯನ್ನು ಮೂಡಿಸಬೇಕು ಎಂಬ ಉದ್ದೇಶದ ಮರೆಯಲ್ಲಿ ಹಲವು ಅರ್ಧಸತ್ಯಗಳನ್ನು ಮತ್ತು ಹಸಿಸುಳ್ಳುಗಳನ್ನು ಇತಿಹಾಸದೊಡನೆ ಬೆರೆಸಿ ಉಣಬಡಿಸುವುದು.

ಹಿಂದೂತ್ವವಾದಿ ಇತಿಹಾಸವೆಂದರೆ ಕೇವಲ ಮುಸ್ಲಿಮ್ ವಿರೋಧಿ ಮತ್ತು ಕ್ರಿಶ್ಚಿಯನ್ ವಿರೋಧಿ ಮಾತ್ರವಲ್ಲ, ಬದಲಿಗೆ ಅದು ರಾಷ್ಟ್ರೀಯವಾದದ ಮುಸುಕಿನಲ್ಲಿ ದಮನಿತ ಸಮುದಾಯಗಳ ಇತಿಹಾಸವನ್ನು ಮರೆಮಾಚಿ ಬ್ರಾಹ್ಮಣಶಾಹಿ ಇತಿಹಾಸವನ್ನು ಬಿತ್ತರಿಸುತ್ತದೆ. ಹೀಗೆ ಅದು ಆಂತರಿಕವಾಗಿಯೇ ಹಿಂದೂ ಎಂದು ಅವರು ಕರೆಯುವ ಬಹುಸಂಖ್ಯಾತರ ವಿರೋಧಿ ದೃಷ್ಟಿಕೋನವನ್ನೇ ಹೊಂದಿದೆ. ಸಂಘಪರಿವಾರದ ಉದ್ದೇಶಗಳಿಗೆ ತಕ್ಕಂತೆ ಪುನರ್ ರಚಿತಗೊಂಡಿರುವ 5ನೇ ತರಗತಿಯ ಇತಿಹಾಸ ಪಠ್ಯದಲ್ಲಿ ಈ ಎರಡು ಅಂಶಗಳು ಧಾರಾಳವಾಗಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಹರಡಿಕೊಂಡಿದೆ. (ಇವುಗಳಲ್ಲಿ ಹಲವಕ್ಕೆ ಕಾಂಗ್ರೆಸ್ ಹಯಾಮಿನ ರಾಷ್ಟ್ರೀಯವಾದಿ ದೃಷ್ಟಿಕೋನದಲ್ಲೂ ಬೇರುಗಳಿದ್ದವು ಎಂಬುದನ್ನು ಮರೆಯುವಂತಿಲ್ಲ)

1. ನೇರ ಹಿಂದೂತ್ವವಾದಿ ದೃಷ್ಟಿಕೋನದ ಹೇರಿಕೆ

ಸಂಘಪರಿವಾರವು ಇತಿಹಾಸವನ್ನು ತನ್ನ ಮೂಗಿನ ನೇರಕ್ಕೆ ಪುನರ್ ಸೃಷ್ಟಿಸಲು ಲಾಗಾಯ್ತಿನಿಂದಲೂ ಮಾಡುತ್ತಿರುವ ಪ್ರಚಾರವೆಂದರೆ ಭಾರತ ಸಂಸ್ಕೃತಿಯೆಂದರೆ ಹಿಂದೂ ಸಂಸ್ಕೃತಿ ಮತ್ತು ಭಾರತೀಯತೆ ಎಂದರೆ ಹಿಂದೂಧರ್ಮೀಯತೆ ಎಂಬುದೇ ಆಗಿದೆ. ಆದರೀಗ ಅವರು ಈವರೆಗೆ ಪ್ರತ್ಯಕ್ಷವಾಗಿ ಕರಪತ್ರಗಳಲ್ಲಿ ಬರೆಯುತ್ತಿದ್ದ ಕಥೆಗಳೆಲ್ಲಾ ಈಗ 5ನೇ ತರಗತಿಯ ಪಠ್ಯದಲ್ಲಿ ಇತಿಹಾಸವೆಂಬಂತೆ ಸೇರಿಕೊಂಡಿದೆ.

ಉದಾಹರಣೆಗೆ ಪುಟ 138ರಲ್ಲಿ *"ಆಗ್ನೇಯ ಏಷಿಯಾದಲ್ಲಿ ಸುಮಾರು ಒಂಬತ್ತು ಶತಮಾನಗಳ ಕಾಲ ಅಲ್ಲಿಯ ಜನಜೀವನವನ್ನು ಬೆಳಗಿತು. ಅಲ್ಲಿನ ಹಲವು ದೇಶಗಳಲ್ಲಿ ಸಂಸ್ಕೃತ ಆಡಳಿತ ಭಾಷೆಯಾಯಿತು. ನೃತ್ಯಗಳಲ್ಲಿ ಮತ್ತು ಹಾಡುಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಇಂದಿಗೂ ಅಲ್ಲಿ ಜೀವಂತವಾಗಿದೆ"* ಎಂದು ಬರೆಯಲಾಗಿದೆ. ತುಂಬಾ ಸ್ಪಷ್ಟವಾಗಿ ಭಾರತೀಯ ಸಂಸ್ಕೃತಿಯೆಂದರೆ ಹಿಂದೂ ಸಂಸ್ಕೃತಿಯೆಂಬ ತಿಳಿವಳಿಕೆ ಗುಪ್ತಗಾಮಿನಿಯಾಗಿ ಮಕ್ಕಳಿಗೆ ಈ ಮೂಲಕ ದಾಟಿಸಲಾಗುತ್ತಿದೆ. ಅದೇ ಪುಟದಲ್ಲಿ "ಕೆಲವು ಸಾರ್ವತ್ರಿಕ ಭಾರತೀಯ ಮೌಲ್ಯಗಳು" ಎಂಬ ಶೀರ್ಷಿಕೆಯಡಿಯಲ್ಲಿ "ಆಚಾರ್ಯ ದೇವೋಭವ", "ಸರ್ವೇ ಜನಾ ಸುಖಿನೋ ಭವಂತು", "ಅಹಿಂಸೆ ಮತ್ತು ಪೌರುಷ" ಹಾಗೂ ಸರ್ವಧರ್ಮ ಸಮಭಾವಗಳು ಭಾರತೀಯ ಮೌಲ್ಯಗಳೆಂಬಂತೆ ಬರೆಯಲಾಗಿದೆ. ಮೊದಲನೆಯದಾಗಿ ಇದರಲ್ಲಿ ಅಡಕವಾಗಿರುವ ಉದಾತ್ತ ಆಶಯಗಳ ಉಲ್ಲೇಖವನ್ನೂ ಸಹ ನಿರ್ದಿಷ್ಟವಾಗಿ ಹಿಂದೂ ಗ್ರಂಥಗಳಿಂದಲೇ ತೆಗೆದುಕೊಂಡಿರುವುದೂ ಸಹ ಪರೋಕ್ಷವಾಗಿ ಭಾರತೀಯತೆ ಎಂದರೆ ಹಿಂದೂ ಧರ್ಮೀಯತೆ ಎಂಬ ಅರ್ಥವನ್ನು ಮೂಡಿಸುವ ಉದ್ದೇಶದಿಂದಲೇ ಆಗಿದೆ.

ಅದೇರೀತಿ ಪುಟ 136ರಲ್ಲಿ "ಭಾರತದ ಭವ್ಯತೆಯನ್ನು ತೆರೆದಿಟ್ಟ ಯೂರೋಪಿಯನ್ನರು" ಎಂಬ ವಿಷಯವನ್ನು ಕೊಂಡಾಡುತ್ತಾ ಇಂಗ್ಲಿಷಿನ ವಿದ್ವಾಂಸ ಜೋನ್ಸ್ ಎಂಬಾತ ಹೇಗೆ ಸಂಸ್ಕೃತ ಕಲಿತು ಶಾಕುಂತಲಾ ನಾಟಕವನ್ನು ಅನುವಾದ ಮಾಡಿದ ಎಂಬುದನ್ನು ಬಿಟ್ಟರೆ ಬೇರೆ ಯಾವುದೇ ಸ್ಥಳೀಯ ಸಂಸ್ಕೃತಿ ಅಥವಾ ಹಿಂದೂಯೇತರ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಆಂಗ್ಲಕ್ಕೆ ತರ್ಜುಮೆ ಮಾಡಿದ ಪ್ರಸ್ತಾಪವಿಲ್ಲ.

ಪುಟ 148ರಲ್ಲಿ ವೇದಕಾಲದ ಭಾರತವೆಂಬ ಅಧ್ಯಾಯದ ಪ್ರಾರಂಭದಲ್ಲೇ *"ಬಹುತೇಕ ಭಾರತೀಯ ಮೌಲ್ಯಗಳು ಹಾಗೂ ಜೀವನಪದ್ಧತಿ ಇದೇ ಕಾಲದಲ್ಲಿ ರೂಪುಗೊಂಡವು"* ಎಂಬ ಧಾರ್ಷ್ಟ್ಯದ ಮತ್ತು ದುರುದ್ದೇಶಪೂರ್ವಕ ಹೇಳಿಕೆಯನ್ನು ಮಾಡಲಾಗಿದೆ. ಈ ವೇದಕಾಲೀನ ಜೀವನಪದ್ಧತಿಯಾದ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬವು ಆದರ್ಶ ಕೌಟುಂಬಿಕ ವ್ಯವಸ್ಥೆ ಎಂದು ಪಠ್ಯದಲ್ಲಿ ಹೇಳಲಾಗಿದೆ. ಆದರೆ ಅದು ಈ ದೇಶದ ಶೇ.90 ಜನರಜೀವನ ಪದ್ಧತಿ ಎಂದೂ ಆಗಿಯೇ ಇರಲಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಹೀಗಾಗಿ ಇದು ಐತಿಹಾಸಿಕವಾಗಿ ತಪ್ಪು ಹೇಳಿಕೆ ಮಾತ್ರ ವಲ್ಲದೇ ಬ್ರಾಹ್ಮಣಶಾಹಿ ಮೌಲ್ಯಗಳೆ ಭಾರತೀಯ ಮೌಲ್ಯಗಳೆಂದು ಒಪ್ಪಿಸುವ "ಸಮ್ಮತಿ ಸೃಷ್ಟಿಸುವ" ಕುತಂತ್ರವೂ ಆಗಿದೆ.

ಹಿಂದೂತ್ವವಾದಿ ದೃಷ್ಟಿಕೋನವನ್ನು ರೂಪಿಸುವಲ್ಲಿ ಸಂಘಪರಿವಾರವು ಬಳಸುತ್ತಿರುವುದು ಆರ್ಯರು ಸ್ಥಳೀಯರೇ ಎಂಬ ವಾದವನ್ನು. ಆರ್ಯರು ಈ ದೇಶದವರೋ ಅಥವಾ ಹೊರಗಿನಿಂದ ವಲಸೆ ಬಂದವರೋ ಅಥವಾ ಎರಡರ ಸಮ್ಮಿಶ್ರಣವೋ ಇತ್ಯಾದಿಗಳೆಲ್ಲ ಇತಿಹಾಸದಲ್ಲಿ ಇನ್ನೂ ಬಗೆಹರಿಯಬೇಕಾದ ಸಂಗತಿಗಳು. ಆದರೂ ಆರ್ಯರ ಸಂಸ್ಕೃತಿಗೂ ಸ್ಥಳೀಯ ಸಿಂಧೂ ನಾಗರಿಕತೆಯ ಸಂಸ್ಕೃತಿಗೂ ಸಾಕಷ್ಟು ವ್ಯತ್ಯಾಸ ಮತ್ತು ವೈರುಧ್ಯಗಳಿತ್ತೆಂಬುದು ಮಾತ್ರ ಸಾಬೀತಾಗಿದೆ. ಐತಿಹಾಸಿಕವಾಗಿ ಇನ್ನೂ ಸಾಕಷ್ಟು ಗೊಂದಲಗಳಿರುವ ಈ ಅಂಶವು ಈ 5ನೇ ತರಗತಿಯ ಪಠ್ಯದಲ್ಲಿ "ಆರ್ಯರು ಸ್ಥಳೀಯರೇ" ಎಂಬರ್ಥದಲ್ಲಿ ಬಗೆಹರಿದುಹೋಗಿದೆ!

ಪುಟ 142ರಲ್ಲಿ ಸಿಂಧೂ ಬಯಲಿನ ನಾಗರಿಕತೆಯ ಬಗ್ಗೆ ಬರೆಯುತ್ತಾ 4700 ವರ್ಷಗಳಷ್ಟು ಹಿಂದಿನ ಈ ನಾಗರಿಕತೆ "ಸಿಂಧೂ ಸರಸ್ವತಿ" ಬಯಲಿನಲ್ಲಿತ್ತು ಎಂದು ವಿವರಿಸಲಾಗಿದೆ. ಪುಟ 149ರಲ್ಲಿ ಆರ್ಯರು ಯಾರು ಎಂಬ ವಿವರಣೆಯನ್ನು ನೀಡುತ್ತಾ *"ಸುಮಾರು ಐದು ಸಾವಿರ ವರ್ಷಗಳ ಹಿಂದೆ ಸಿಂಧೂ ಮತ್ತು ಸರಸ್ವತಿ ನದೀ ಬಯಲಿನಲ್ಲಿ ನೆಲೆಗೊಂಡಿದ್ದವರನ್ನು ಆರ್ಯರು ಎನ್ನುವರು"* ಎಂದು ಕೂಡಾ ಬರೆಯಲಾಗಿದೆ. ಹೀಗೆ ಪರೋಕ್ಷವಾಗಿ ಸಿಂಧೂ ನಾಗರಿಕತೆಯನ್ನೇ ವೇದಕಾಲದ ನಾಗರಿಕತೆ ಎಂಬ ತಪ್ಪು ಮಾಹಿತಿ ಕೊಡುವ ಮತ್ತು ಆರ್ಯರು ಈ ದೇಶದ ಮೂಲನಿವಾಸಿಗಳೆಂಬ ವಿಷಯವು ನಿರ್ಧಾರಿತವಾಗಿಹೋಗಿದೆ ಯೆಂಬಂತೆ ತಿಳಿವಳಿಕೆ ಕೊಡುವ ಮಾತನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಹಾಗೆಯೇ ಇತಿಹಾಸ ಪಠ್ಯ ಸಂಬಂಧೀ ಚಟುವಟಿಕೆಗಳ ಭಾಗವಾಗಿ ಈ ಗ್ರಂಥಕರ್ತೃಗಳು ತರಗತಿಯಲ್ಲಿ ವೇದಮಂತ್ರ ಪಠಣವನ್ನು ಆಲಿಸುವಂತೆ ನಿರ್ದೇಶಿಸುತ್ತಾರೆ. ಅರ್ಥಾತ್ ಶಾಲಾ ಕೊಠಡಿಯನ್ನು ದೇವಸ್ಥಾನವನ್ನಾಗಿ ಮಾಡಿಬಿಡುವ ಹುನ್ನಾರವೇ ಇದಲ್ಲವೇ? ಏಕೆಂದರೆ ಇತರ ಯಾವುದೇ ಸಂದರ್ಭದಲ್ಲಿ ಇತರ ಧರ್ಮಗಳ ಪರಿಚಯಕ್ಕೆ ತರಗತಿಯ ಆವರಣವನ್ನು ಬಳಸಿಕೊಳ್ಳಬೇಕೆಂಬ ಸಲಹೆ ಇಲ್ಲ. ಪುಟ 156ರಲ್ಲಿ ಬುದ್ಧನು ತನ್ನ ಮೊದಲ ಉಪದೇಶವನ್ನು ಐವರು ಬ್ರಾಹ್ಮಣರಿಗೆ ನೀಡಿದನೆಂಬ ಯಾವುದೇ ಪುರಾವೆ ಇಲ್ಲದ ಹೇಳಿಕೆಯನ್ನು ಅಧಿಕೃತವಾಗಿ ಶಾಲಾಪಠ್ಯದಲ್ಲಿ ಮುದ್ರಿಸಲಾಗಿದೆ.

ನ್ಯಾಷನಲ್ ಕರಿಕುಲಮ್ ಫ್ರೇಂವರ್ಕ್‌ನ ಮಾರ್ಗದರ್ಶಿ ಸೂತ್ರಗಳು ಮತ್ತು ರಾಜ್ಯದ ಡಿಎಸಿಆರ್‌ಟಿ ಸಿಲಬಸ್ ಸೂತ್ರಗಳು ಇತಿಹಾಸದ ಈ ಭಾಗವನ್ನು ಪ್ರಾಚೀನಕಾಲದಲ್ಲಿನ ನಗರಜೀವನ, ಸಾಮಾಜಿಕ ಮತ್ತು ರಾಜಕೀಯ ಸಂಘಟನೆಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶವನ್ನು ಪೂರೈಸಲು ಪೂರಕವಾಗಿ ರೂಪಿಸಬೇಕೆಂದು ನಿರ್ದೇಶಿಸಿದೆ. ಆದರೆ ಬಿಜೆಪಿ ಸರ್ಕಾರ ಈಗ ತಾನು ಬಿತ್ತುತ್ತಾ ಬಂದಿರುವ ಕಾಗಕ್ಕಗುಬ್ಬಕ್ಕ ಕಥೆಗಳನ್ನೇ ಅಧಿಕೃತ ಇತಿಹಾಸವೆಂದು ಪಠ್ಯಗಳ ಮೂಲಕ ಮಕ್ಕಳನ್ನು ನಂಬಿಸಲು ಹೊರಟಿದೆ.

2. ಕೆಲವು ಸಂಗತಿಗಳು ಗೌಣ- ಕೆಲವು ಮಾತ್ರ ವೈಭವೀಕರಣ

ಕೆಲವು ವಿಷಯಗಳಲ್ಲಿ ಮೇಲೆ ಹೇಳಿದಂತೆ ಬಿಜೆಪಿ ಸರ್ಕಾರ ನೇರಾನೇರ ಸಂಘಪರಿವಾರ ಪ್ರಣೀತ ಪ್ರಚಾರ ಮಾಡುತ್ತಿದೆ. ಆದರೆ ಸಂಘಪರಿವಾರದ ಚಾಣಾಕ್ಷತೆ ಇರುವುದು ಕೆಲವನ್ನು ಸಂಗತಿಗಳನ್ನು ವೈಭವೀಕರಿಸಿ ಕೆಲವು ಸಂಗತಿಗಳನ್ನು ಹೇಳದೆ ಮುಚ್ಚಿಡುವುದರಲ್ಲಿ. ಅಂದರೆ ಅರ್ಧ ಸತ್ಯವನ್ನು ಮಾತ್ರ ಹೇಳುವ ಮೂಲಕ ಮಗುವಿನ ಮನಸ್ಸಿನಲ್ಲಿ ಹಿಂದೂ ಹೆಮ್ಮೆ ಮತ್ತು ಪರಧರ್ಮ ದ್ವೇಷವನ್ನು ಬಿತ್ತುವುದರಲ್ಲಿ. ಪ್ರಸ್ತಾವಿತ 5ನೇ ತರಗತಿಯ ಪಠ್ಯದಲ್ಲಿ ಇಂಥಾ ಅಂಶಗಳು ಧಾರಾಳವಾಗಿ ಹರಡಿಕೊಂಡಿವೆ.

ಕರ್ನಾಟಕಕ್ಕೆ ಸಂಬಂಧಪಟ್ಟ ಇತಿಹಾಸವನ್ನು ಅಧ್ಯಯನ ಮಾಡುವಾಗ ಇಡೀ ಕರ್ನಾಟಕವನ್ನು ಒಂದು ಘಟಕವಾಗಿ ಅಧ್ಯಯನ ಮಾಡದೆ ಆಯಾ ವಿಭಾಗದ ಮಕ್ಕಳು ತಮ್ಮ ಪ್ರದೇಶದ ಇತಿಹಾಸವನ್ನು ಇನ್ನೂ ಹತ್ತಿರದಿಂದ ಅರ್ಥಮಾಡಿಕೊಳ್ಳಲು ಅನುವಾಗುವಂತೆ ಕರ್ನಾಟಕದ ಇತಿಹಾಸವನ್ನು ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಲಯಗಳ ಇತಿಹಾಸವಾಗಿ ಪಠ್ಯವನ್ನು ರೂಪಿಸಲಾಗಿದೆ. ಇದು ನ್ಯಾಷನಲ್ ಫ್ರೇಂವರ್ಕ್ ಸಲಹೆಗೆ ತಕ್ಕಂತೆ ಇದೆ ಎಂಬುದೇನೋ ನಿಜ. ಇಂತಹ ಪಠ್ಯಗಳು ಸಾರಾಂಶದಲ್ಲಿ ವಿವಿಧ ಸಂಸ್ಕೃತಿಗಳ ನಿರ್ದಿಷ್ಟತೆ ಹೇಗೆ

▶15

ದುಕಿದ ರೀತಿಯೇ ಮಾನದಂಡವಾಗಬೇಕು



• ಗೌರಿ ಲಂಕೇಶ್
editorlankesh@gmail.com

ಮೊನ್ನೆ ಅಸುನಿಗಿದ ಆರೆಸ್ಸೆಸ್ಸಿನ ಪ್ರಮುಖ ನಾಯಕ, ಪಿಯ ಹಿರಿಯ ಸಚಿವ ವಿ.ಎಸ್. ಆಚಾರ್ಯ ರನ್ನು ಬಹಳಷ್ಟು ಮಾಧ್ಯಮಗಳು 'ಭೀಷ್ಮಾಚಾರ್ಯ', ', 'ಸಜ್ಜನ' ಎಂದೆಲ್ಲ ಬಣ್ಣಿಸಿವೆ. ಟಿವಿ ಲ್‌ಗಳಂತೂ ಬಿಡಿ, ಬಾಯಿಗೆ ಬಂದದ್ದನ್ನು ಹೇಳುತ್ತಾ ರ್ಯರನ್ನು ಹೊಗಳಿದವು.


ಅದನ್ನೆಲ್ಲ ಕೇಳಿದಾಗ, ಓದಿದಾಗ ನನಗೆ ಒಂದು ದೃಶ್ಯ ಪದೇ ನೆನಪಾಗುತಿತ್ತು. ಅದು 2011ರ ಜುಲೈ ಂದು ನಡೆದ ವಿದ್ಯಮಾನ. ಆಗಿನ ಮುಖ್ಯಮಂತ್ರಿ ಡಿಯೂರಪ್ಪ ತನ್ನ ಹುದ್ದೆಗೆ ರಾಜೀನಾಮೆ ನೀಡಲು ತನ್ನ ರಿ ನಿವಾಸದಿಂದ ರಾಜಭವನಕ್ಕೆ ಪಾದಯಾತ್ರೆಯಲ್ಲಿ ದ ಸಂದರ್ಭ. ಅದಕ್ಕೆ ಕೆಲದಿನಗಳ ಹಿಂದೆ ಲ್ಪಟ್ಟಿದ್ದ ಲೋಕಾಯುಕ್ತದ ವರದಿಯಲ್ಲಿ ಡಿಯೂರಪ್ಪನ ಭ್ರಷ್ಟಾಚಾರ, ಬಳ್ಳಾರಿ ರೆಡ್ಡಿಗಳ ಚಾರ, ಎಲ್ಲವೂ ಬಯಲಾಗಿತ್ತು.

ಅದೇ ಹೊತ್ತಿಗೆ ಕೇಂದ್ರದಲ್ಲಿ ಬಿಜೆಪಿ ಒಮ್ಮೆ ಬಾಬಾ ದೇವ್ ಎಂಬ ಭೂಪನ ಬೆನ್ನು ಹತ್ತಿ ಇನ್ನೊಮ್ಮೆ ಹಜಾರೆ ಎಂಬ ಸರ್ವಾಧಿಕಾರಿಗೆ ತಗುಲಿಕೊಂಡು ಚಾರದ ವಿರುದ್ಧ ಚೀರಾಡುತ್ತ ಜನ ಬೆಂಬಲಕ್ಕೆ ಸುತ್ತಿತ್ತು. ಅಂತಹ ಸಮಯದಲ್ಲೇ ಕರ್ನಾಟಕದಲ್ಲಿ ಯಡ್ಡಿ-ರೆಡ್ಡಿಗಳು ಎಬ್ಬಿಸಿದ್ದ ರಾಡಿಯಿಂದ ಮುಖಭಂಗ ಭವಿಸಿದ್ದ ಚೆಡ್ಡಿಗಳು ವಿಧಿ ಇಲ್ಲದೆ ಮುಖ್ಯಮಂತ್ರಿ ಕ್ಕೆ ರಾಜೀನಾಮೆ ಕೊಡುವಂತೆ ಯಡ್ಡಿಗೆ ಹೇಳಿದ್ದರು.

ಆದರೆ ಯಡ್ಡಿ ಅಧಿಕಾರವನ್ನು ಸುಮ್ಮನೆ ಟ್ಟುಹೋಗುವ ಆಸಾಮಿಯಲ್ಲ. ಆತ ಕೋಟ್ಯಾಂತರ ಪಾಯಿಗಳನ್ನು ಕದ್ದು ಲೋಕಾಯುಕ್ತ ವರದಿಯಲ್ಲಿ ಸಮೇತ ಸಿಕ್ಕಿಬಿದ್ದಿದ್ದರೂ ತಾನು ಯಾವುದೋ ದ್ಧದಲ್ಲಿ ಗೆದ್ದು ಬಂದ ಧೀರನಂತೆ ರಾಜೀನಾಮೆ ವನ್ನು ಹಿಡಿದು ಪಾದಯಾತ್ರೆಯಲ್ಲಿ ಹೊರಟಿದ್ದ. ನ, ಮರ್ಯಾದೆ ವಿಷಯದಲ್ಲಿ ಯಡ್ಡಿಯಷ್ಟೇ ಪಾತಾಳ ಪಿರುವ ಜನಾರ್ದನ ರೆಡ್ಡಿ ಅವತ್ತು ಇದೇ ಯಡ್ಡಿಯ ಪಕ್ಕದಲ್ಲೇ ಹೆಜ್ಜೆ ಹಾಕಿದ್ದ. ಆದರೆ ವಿಚಿತ್ರವೆಂಬಂತೆ ಯಡ್ಡಿಯ ಎಡಪಕ್ಕದಲ್ಲಿ ಹೆಜ್ಜೆಗೆಹೆಜ್ಜೆ ಹಾಕಿದ್ದು 'ಸಭ್ಯ 'ಸಜ್ಜನ', 'ಸ್ವಚ್ಛ ಹಸ್ತ'ದ ವಿ.ಎಸ್. ರ್ಯ!

ಅದನ್ನು ನೋಡಿ ನನಗೆ ಅಚ್ಚರಿಯಾಗಿತ್ತು. ಬಿಜೆಪಿಯ ರು ಸಚಿವರು ಮತ್ತು ಶಾಸಕರು ಭ್ರಷ್ಟಾಚಾರದಲ್ಲಿ ಡಗಿಯೋ, ಸ್ತ್ರೀಲೋಲುಪತನದಲ್ಲಿ ಹಾಕಿಕೊಂಡೋ ಜನರಿಂದ "ಥೂ" ಎಂದು ಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಯಾವ ರಣದಲ್ಲೂ ತಮ್ಮ ಹೆಸರನ್ನು ಸಿಲುಕಿಸಿಕೊಳ್ಳದಿದ್ದ; ರಾಮುಲು ತರಹದ ರೌಡಿಯಂತಲ್ಲದೆ 'ಒರಿಜಿನಲ್' ಸ್ಸಿಗ ಆಗಿದ್ದ; ಈಶ್ವರಪ್ಪ ಮತ್ತು ಜಗದೀಶ್ ಶೆಟ್ಟರ್ . ಹದವರೂ ಯಡ್ಡಿಯಿಂದ ದೂರ ಉಳಿದಿರುವಾಗ ಕೆ ಈ ಆಚಾರ್ಯ ಹೀಗೆ ಯಡ್ಡಿ ಮತ್ತು ಗಳೊಂದಿಗೆ ಹೆಜ್ಜೆ ಹಾಕುತ್ತಿದ್ದಾರೆ ಎನಿಸಿತ್ತು.

ಆದರೆ ಆಚಾರ್ಯರ ಹೊರ ಪ್ರವೃತ್ತಿಗೂ, ಒಳ ಗಳಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಮೂಲತಃ ರ್ಜ ಹಿಂದೂ ಮೂಲಭೂತವಾದಿಯಾಗಿದ್ದ ಆಚಾರ್ಯ ಸ್ಸೆಸ್ಸಿನ ಕೋಮು ವಿಷವನ್ನು ತಲೆಯಲ್ಲಿ ಬಿಕೊಂಡಿದ್ದ 'ಸೌಮ್ಯ' ಸ್ವಭಾವದವರು, ಅಧಿಕಾರದ ಬಸೆಗೆ ಬಿದ್ದ ಆಚಾರ್ಯರು ಬಿಜೆಪಿಯ ನಾಯಕರ



ಹಲವಾರು ನೀಚತನಗಳನ್ನು ಪ್ರತಿಭಟಿಸದೇ ಸಹಿಸಿಕೊಂಡಿದ್ದ 'ಸಜ್ಜನರು', ಮಹಿಳೆಯರ ಮೇಲೆ, ದಲಿತರ ಮೇಲೆ, ಅಲ್ಪಸಂಖ್ಯಾತರ ಮೇಲೆ, ರೈತರ ಮೇಲೆ ದಾಳಿ-ದೌರ್ಜನ್ಯಗಳಾದಾಗಲೂ ತುಟಿಪಿಟಿಕ್ ಎನ್ನದೆ ಸುಮ್ಮನಿದ್ದ 'ಮೌನಾಚಾರಿ'ಗಳು, ಮಡೆಸ್ನಾನದಿಂದ ಚರ್ಮರೋಗ ನಿವಾರಣೆ ಆಗುತ್ತದೆಂದು ನಂಬಿದ್ದ 'ವೈಜ್ಞಾನಿಕ ಮನೋಭಾವ'ದವರು, ತಮ್ಮ ಶಿಷ್ಯ ರಘುಪತಿ ಭಟ್ಟನ ಹೆಂಡತಿ ಪದ್ಮಪ್ರಿಯಾ ನಾಪತ್ತೆಯಾದಾಗ ಆಕೆಯ ಸಾವಿಗೆ ಪರೋಕ್ಷವಾಗಿ ಕಾರಣೀಭೂತರಾದ 'ಸ್ತ್ರೀ ರಕ್ಷಕ'ರು, ಅದೇ ಭಟ್ಟನ ರೇವ್ ಪಾರ್ಟಿಗೆ ಬೆಂಬಲ ನೀಡಿದ 'ಸುಸಂಸ್ಕೃತರು', ಕೊನೆಗೆ ಸವದಿ-ಪಾಟೀಲ್-ಪಾಲೇಮಾರ್‌ಗಳ 'ಬ್ಲೂ ಫಿಲಂ ರಾದ್ಧಾಂತ'ದ ವಿರುದ್ಧವೂ ಸೊಲ್ಲೆತ್ತದ 'ಭೀಷ್ಮಾಚಾರ್ಯ'!

ಇಂತಹ ಆಚಾರ್ಯರು ಯಡ್ಡಿಯ ಬಗಲಲ್ಲದೆ ಇನ್ನಾರೊಂದಿಗೆ ಹೆಜ್ಜೆಹಾಕಿಯಾರು?!

ಇಂತಹ ಆಚಾರ್ಯರನ್ನು ನಾನು ಭೇಟಿ ಆಗಿದ್ದು 2010ರ ನವೆಂಬರ್ ತಿಂಗಳಲ್ಲಿ ಸಾಣೇಹಳ್ಳಿ ಮಠದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ.

ಸಾಣೇಹಳ್ಳಿಯಲ್ಲಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಪ್ರತಿ ವರ್ಷ ನಾಟಕೋತ್ಸವನ್ನು ಹಮ್ಮಿಕೊಳ್ಳುತ್ತಾರೆ. ಅದರೊಂದಿಗೆ ಪ್ರಸ್ತುತ ವಿಷಯಗಳ ಬಗ್ಗೆ ವಿಚಾರ ಸಂಕಿರಣಗಳೂ ಇರುತ್ತವೆ. ಅಂತಹ ಒಂದು ವಿಚಾರ ಗೋಷ್ಠಿಗೆ ನಾನು ಮತ್ತು ನಮ್ಮ ಅಂಕಣಕಾರ ಶಿವಸುಂದರ್ ಹೋಗಿದ್ದೆವು. ಅವತ್ತು ಶಿವಸುಂದರ್ ಅವರು 'ಹಸಿರು ಕ್ರಾಂತಿಯ ಸಾಫಲ್ಯ-ವೈಫಲ್ಯ' ಕುರಿತು ಮಾತನಾಡಿದರೆ ನಾನು ಬಿಜೆಪಿ ಸರ್ಕಾರ ಜಾರಿಗೆ ತರಲು ಯತ್ನಿಸುತ್ತಿರುವ ಜಾನುವಾರು ಹತ್ಯೆ ನಿಷೇಧ ಕಾಯಿದೆ ಹೇಗೆ ರೈತ ವಿರೋಧಿ, ಜೀವ ವಿರೋಧಿ ಆಗಿದೆ ಎಂದು ಹೇಳಿದೆ.

ಅವತ್ತಿನ ಕಾರ್ಯಕ್ರಮದಲ್ಲಿ ಇದೇ ಆಚಾರ್ಯರು ಮುಖ್ಯ ಅತಿಥಿಗಳಾಗಿದ್ದರು. ಬೇರೆಯವರೆಲ್ಲ ಮಾತನಾಡಿದ ಮೇಲೆ ಮಾತನಾಡಿದ ಆಚಾರ್ಯರು ಶಿವಸುಂದರ್ ಮತ್ತು ನನ್ನ ಭಾಷಣಗಳಿಗೆ ಪ್ರತಿಕ್ರಿಯಿಸುತ್ತಾ ತಮ್ಮ ಆರೆಸ್ಸೆಸ್ ಮತ್ತು ಬಿಜೆಪಿಯ ಪ್ರವೃತ್ತಿಗೆ ತಕ್ಕದಾಗಿ ಹಲವಾರು ಸುಳ್ಳುಗಳನ್ನೇ ಹೇಳಲಾರಂಭಿಸಿದರು. ಇದನ್ನು ಕೇಳಿ ಸಹಜವಾಗಿಯೇ ಶಿವಸುಂದರ್ ಮತ್ತು ನನಗೆ ಆತಂಕವಾಯಿತು. ಏಕೆಂದರೆ ನಾವಿಬ್ಬರೂ ಸತ್ಯ ಹೇಳಿದ್ದರೂ ಸಭೆಯಲ್ಲಿದ್ದ ಜನ ಆಚಾರ್ಯರು ಹೇಳಿದ್ದ ಸುಳ್ಳನ್ನೇ ಸತ್ಯವೆಂದು ಭಾವಿಸುವ ಅಪಾಯವಿತ್ತು. ಆಗ ನಾನು ಮತ್ತು ಶಿವಸುಂದರ್ ಅವತ್ತಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ಪಂಡಿತಾರಾಧ್ಯ ಸ್ವಾಮಿಗಳ ಹತ್ತಿರ ಹೋಗಿ ಆಚಾರ್ಯರು ಹೇಳುತ್ತಿದ್ದ ಸುಳ್ಳುಗಳಿಗೆ ಉತ್ತರ ಕೊಡಲು ನಮಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದೆವು. ನಮ್ಮ ಮನವಿಯನ್ನು ಸ್ವಾಮಿಗಳು ಒಪ್ಪಿಕೊಂಡರು.

ಅದರಂತೆ ಆಚಾರ್ಯರ ಭಾಷಣದ ನಂತರ ಮಾತನಾಡಿದ ಶಿವಸುಂದರ್ ಜಾನುವಾರ ಹತ್ಯೆ ಕುರಿತಂತೆ ಆಚಾರ್ಯರು ಹೇಳಿದ್ದೆಲ್ಲ ಸುಳ್ಳು, ಇದರ ಬಗ್ಗೆ ನಮ್ಮ ಸಂವಿಧಾನ ಮತ್ತು ನ್ಯಾಯಾಲಯದ ತೀರ್ಪುಗಳು ನಿಜವಾಗಲೂ ಏನನ್ನು ಹೇಳುತ್ತವೆ ಎಂದು ಸಂಕ್ಷಿಪ್ತವಾಗಿ ವಿವರಿಸಿದರು. ಅವತ್ತು ಆಚಾರ್ಯರಿಗೆ ಸಾರ್ವಜನಿಕವಾಗಿ ಮುಖಭಂಗವಾಗಿತ್ತು.

ಅದಾದನಂತರ ಮಾತನಾಡಿದ ಪಂಡಿತಾರಾಧ್ಯ ಸ್ವಾಮಿಗಳು ಕೂಡ ಬಿಜೆಪಿಯ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದು ಆಚಾರ್ಯರಿಗೆ ಮುಜುಗರ ಉಂಟು ಮಾಡಿದ್ದರೆ ಅಚ್ಚರಿ ಇಲ್ಲ. ರೇಣುಕಾಚಾರಿ ತರಹದ ವ್ಯಕ್ತಿ ಇವತ್ತು ಮಂತ್ರಿ ಆಗಿರುವುದು, ಬಾಬ್ರಿಮಸೀದಿ ಕೆಡವಿದಾಗ ಕಾವಿ ತೊಟ್ಟಿದ್ದ ಸ್ವಾಮಿಯೊಬ್ಬ ಚಪ್ಪಾಳೆ ತಟ್ಟಿದ್ದನ್ನು ನೆನಪಿಸಿಕೊಂಡ ಪಂಡಿತಾರಾಧ್ಯರು ಜಾನುವಾರು ಹತ್ಯೆ ನಿಷೇಧ ಬಗ್ಗೆ ಮಾತನಾಡುತ್ತಾ "ಅಹಿಂಸಾವಾದ ಮುಖ್ಯವಾದರೆ ಅದು ಎಲ್ಲ ಪ್ರಾಣಿಗಳಿಗೂ ಅನ್ವಯಿಸಬೇಕು. ಅಂದರೆ ಕೋಳಿ, ಕುರಿ ಮತ್ತು ಇತರೆ ಪ್ರಾಣಿಗಳನ್ನೂ ಕೊಲ್ಲಬಾರದು ಎನ್ನಬೇಕು. ಬದಲಾಗಿ ಒಂದೇ ಒಂದು ಪ್ರಾಣಿಗೆ ಮಾತ್ರ ವಿಶೇಷ ಸ್ಥಾನ ನೀಡಿ ಅದರ ಹತ್ಯೆಯನ್ನು ನಿಷೇಧಿಸುವುದು ಸರಿ ಅಲ್ಲ. ಇವತ್ತು ಒಬ್ಬರಿಗೆ ಅನುಪಯೋಗವಾಗಿರುವ ಪ್ರಾಣಿ ಮತ್ತೊಬ್ಬರಿಗೆ ಆಹಾರವಾದರೆ ಅದರಲ್ಲಿ ತಪ್ಪೇನು. ಆದ್ದರಿಂದ ಈ ಜಾನುವಾರು ಹತ್ಯೆ ನಿಷೇಧ ಕಾಯಿದೆಯನ್ನು ಎಲ್ಲರೂ ತಿರಸ್ಕರಿಸಬೇಕು...." ಎಂದರು.


ಅಷ್ಟೇ ಅಲ್ಲ, ಅವತ್ತು ಪಂಡಿತಾರಾಧ್ಯ ಸ್ವಾಮಿಗಳು ರಾಜ್ಯದ ಪ್ರಮುಖ ಸಚಿವರೊಬ್ಬರ ಸಮ್ಮುಖದಲ್ಲೇ ಯಾವ ಮುಲಾಜೂ ತೋರದೆ ಸರ್ಕಾರಕ್ಕೆ ಮತ್ತು ಬಿಜೆಪಿಯ ಕೋಮುವಾದಿ ನಿಲುವುಗಳಿಗೆ ನೇರವಾಗಿಯೇ ಸವಾಲುಗಳನ್ನು, ಪ್ರಶ್ನೆಗಳನ್ನು ಹಾಕಿದರು. ಎಲ್ಲಕ್ಕಿಂತ ಮುಖ್ಯವಾಗಿ ಜಾನುವಾರು ಹತ್ಯೆ ನಿಷೇಧ ಕುರಿತಂತೆ ಸಾಣೇಹಳ್ಳಿಯಲ್ಲಿ ಒಂದು ಚರ್ಚೆ ನಡೆಯಲಿ, ಎಲ್ಲರೂ ತಮ್ಮ ವಾದಕ್ಕೆ ದಾಖಲೆಗಳನ್ನು ತರಲಿ ಎಂದು ನಾವು ಸೂಚಿಸಿದ್ದಕ್ಕೆ ಸ್ವಾಮಿಗಳು ಒಪ್ಪಿಕೊಂಡಿದ್ದರು. ಆದರೆ ಆನಂತರದ ದಿನಗಳಲ್ಲಿ ಆ ಕಾಯಿದೆಯನ್ನು ರಾಜ್ಯಪಾಲರು ರಾಷ್ಟ್ರಪತಿಗಳ ಒಪ್ಪಿಗೆ ಕಳುಹಿಸಿದ್ದರಿಂದ ನಾವೂ ನಿಟ್ಟುಸಿರು ಬಿಟ್ಟು ಸುಮ್ಮನಾದೆವು.

ಅವತ್ತಿನ ಸಭೆ ಮುಗಿದನಂತರ ನಾನು ಆಚಾರ್ಯರು ಇದ್ದಲ್ಲಿಗೆ ಹೋಗಿ "ಆಚಾರ್ಯರೇ, ಸಂವಿಧಾನದಲ್ಲಿ ಜಾನುವಾರು ಹತ್ಯೆ ಕುರಿತಂತೆ ಇರುವುದನ್ನು ನೀವು ಪದೇಪದೇ ತಿರುಚಿ ಹೇಳುವ ಮೂಲಕ ಪ್ರತಿಬಾರಿ ಅಂಬೇಡ್ಕರ್ ಅವರಿಗೆ ಅವಮಾನ ಮಾಡುತ್ತೀರಿ. ಹಾಗೆಯೇ ಈ ಬಗ್ಗೆ ಸುಪ್ರೀಂಕೋರ್ಟ್ ಕೊಟ್ಟಿರುವ ತೀರ್ಪಿನ ಬಗ್ಗೆಯೂ ಸುಳ್ಳು ಹೇಳುತ್ತೀರಿ. ಒಂದು ಸುಳ್ಳನ್ನು ಹೀಗೆ ಮತ್ತೆಮತ್ತೆ ಹೇಳುವ ಮೂಲಕ ಅದನ್ನೇ ಸತ್ಯವಾಗಿಸಲು ಪ್ರಯತ್ನಿಸುತ್ತೀರಿ" ಅಂದೆ. ಅದಕ್ಕೆ ಆಚಾರ್ಯರು "ಇಲ್ಲ, ಇಲ್ಲ" ಎಂದಷ್ಟೇ ಹೇಳಿದರು. ನಾನು ನನ್ನ ವಾದವನ್ನು (ಅದನ್ನು ಜಗಳ ಎಂದೂ ಕರೆಯಬಹುದು) ಇನ್ನಷ್ಟು ಮುಂದುವರೆಸಲು ಸಿದ್ಧಳಿದ್ದೆ. ಆದರೆ ಅಷ್ಟು ಹೊತ್ತಿಗೆ ಆಚಾರ್ಯರೊಂದಿಗಿದ್ದ ಹಲವು ಜನ ಅವರನ್ನು ಸುತ್ತುವರೆದು ಅವರನ್ನು ಕರೆದುಕೊಂಡು ಹೋದರು...

ಅದೆಲ್ಲ ಇರಲಿ, ಆಚಾರ್ಯರು ವೈಯಕ್ತಿಕವಾಗಿ ಶುದ್ಧ ಹಸ್ತರೇ ಆಗಿದ್ದಿರಬಹುದು, ಮಾತು-ನಡತೆಯಲ್ಲಿ ಸಭ್ಯರೇ ಆಗಿದ್ದಿರಬಹುದು. ಆದರೆ ಅವರು ನಲವತ್ತು ವರ್ಷಗಳ ಕಾಲ ಆರೆಸ್ಸೆಸಿಗೆ ದುಡಿದಿದ್ದರಿಂದ, ಅದರೊಂದಿಗೆ ಗುರುತಿಸಿಕೊಂಡಿದ್ದರಿಂದ, ಅದರ ಸಿದ್ಧಾಂತವನ್ನು ಎತ್ತಿಹಿಡಿದಿದ್ದರಿಂದ ಅವರು ಮಾನವೀಯತೆಯನ್ನು, ನೈತಿಕತೆಯನ್ನು ಕಳೆದುಕೊಂಡಿದ್ದರು ಎಂದೇ ಹೇಳಬಹುದು.

ಓರ್ವ ಮನುಷ್ಯ ತೀರಿಕೊಂಡಾಗ ಆತನ ಬಗ್ಗೆ ಕಟುವಾಗಿ ಮಾತನಾಡಬಾರದು ಎಂಬುದು ಬಹಳಷ್ಟು ಜನರ ತಿಳಿವಳಿಕೆ. ಆದರೆ ಯಾರದೇ ಸಾವನ್ನು ಕುರಿತು ಮಾತನಾಡುವಾಗ ಆ ಮನುಷ್ಯ ಹೇಗೆ ಬದುಕಿದ್ದನೆಂಬುದೇ ಮುಖ್ಯವಾಗುತ್ತದೆ, ಆತನ ವ್ಯಕ್ತಿತ್ವವನ್ನು ಅಳೆಯಲು ಆತ ಸಮಾಜಕ್ಕೆ ಏನನ್ನು ಕೊಡುಗೆಯಾಗಿ ನೀಡಿದ ಎಂಬುದು ಪ್ರಮುಖವಾಗುತ್ತದೆ.


ಇಲ್ಲವಾದರೆ ಹಿಟ್ಲರ್‌ನ ಸಾವನ್ನೂ ನಾವು ಅನುಕಂಪದಿಂದ ನೋಡುವ, ಆತನ ಬಗ್ಗೆ ಮೃದುವಾದ ಮಾತುಗಳನ್ನು ಆಡುವ ಅಪಾಯ ಎದುರಾಗುತ್ತದೆ. ಆಚಾರ್ಯರ ಬಗ್ಗೆ ಕೂಡ....





ಆಚಾರ್ಯ ಬಿಜೆಪಿಯಲ್ಲಾಗಲಿ, ಸಂಘ ಪರಿವಾರದಲ್ಲಾಗಲಿ ಕೌರವರಿಗೂ ಭಾವ; ಪಾಂಡವರಿಗೂ ಭಾವನೆಂಬಂತೆ 'ಶಕುನಿ'ಯಾಗಿದ್ದರು. ಇದನ್ನೇ 'ಅಜಾತ ಶತ್ರು' ಎಂದು ಈಗ ಬಿಜೆಪಿಗರು ವ್ಯಾಖ್ಯಾನಿಸುತ್ತಿದ್ದಾರಷ್ಟೇ! ಕರಾವಳಿ ಇವತ್ತು ಹಿಂದೂತ್ವದ ಪ್ರಯೋಗಶಾಲೆ ಆಗಿರುವುದರಲ್ಲಿ ವೇದವ್ಯಾಸ ಆಚಾರ್ಯರ ಕೊಡುಗೆ ಅಪಾರ; ಆಚಾರ್ಯ ತುಂಬುಜೀವನ ನಡೆಸಿ ವಯೋಸಹಜವಾಗಿ ಸಾವಿಗೀಡಾಗಿದ್ದಾರೆ. ಆದರೆ ಆತ ಬಿತ್ತಿ ಹೋಗಿರುವ ಕೋಮು ಕ್ರೌರ್ಯದ ಬೀಜ ಅನ್ಯಾಯದ 'ಅಸಹಜ' ಸಾವುಗಳಿಗೆ ಎಡೆಕೊಡದಿರಲಿ. ಕರಾವಳಿಗರಿಗೆ ಈ ಎಚ್ಚರಿಕೆ ಇರಲಿ!!


• ನಹುಷ



ಧರ್ಮಕಾರಣದ ನಾಜೂಕಯ್ಯನ ನಿರ್ಗಮನ!

ಸಂಘ ಪರಿವಾರ ಪ್ರಣೀತ ಧರ್ಮ-ಕರ್ಮಕಾರಣದ ಅಪ್ಪಟ 'ಆಚಾರ್ಯ'ನಂತಿದ್ದ ಡಾ. ವೇದವ್ಯಾಸ ಎಸ್. ಆಚಾರ್ಯ ಇದ್ದಕ್ಕಿದ್ದಂತೆ ಎದ್ದು ಹೋಗೇಬಿಟ್ಟಿದ್ದಾರೆ! ಉಡುಪಿ ಪುರಸಭೆಯಿಂದ ಮತಾಂಧ ರಾಜಕಾರಣ ಶುರು ಹಚ್ಚಿಕೊಂಡಿದ್ದ ಆಚಾರ್ಯ ಪವರ್‌ಫುಲ್ ಮಂತ್ರಿಗಿರಿತನಕ ಬಂದು ತಲುಪಿದ್ದು ಈ ನೆಲದ ಪ್ರಜಾಪ್ರಭುತ್ವದ ಅನಾಹುತಕಾರಿ ಪವಾಡದ ಪರಿಣಾಮವೇ ಸರಿ! ಉಡುಪಿ ಪರಿಸರದಲ್ಲಿ ಆರೆಸ್ಸೆಸ್ ಡಾಕ್ಟರ್ ಎಂದೇ ಪರಿಚಿತರಾಗಿದ್ದ ಆಚಾರ್ಯ 1960 ರ ದಶಕಾರಂಭದಲ್ಲಿ ಮಲ್ಪೆಯ ಕಲ್ಮಾಡಿಯಲ್ಲೊಂದು ದವಾಖಾನೆ ತೆರೆದು ಕೂತಿದ್ದರು. ಎಂಬಿಬಿಎಸ್ ಮುಗಿಸಿದ್ದ ಆಚಾರ್ಯ ಅದಕ್ಕೆ ತದ್ವಿರುದ್ಧವಾದ ಮನುಸಿದ್ಧಾಂತ ಮೈಗೂಡಿಸಿಕೊಂಡಿದ್ದರು. ವೈದ್ಯನಾಗಿ 'ಜನಪ್ರಿಯ' ಗೊಂಡಿದ್ದ ಆಚಾರ್ಯ ಅದೇ ವೇಳೆಗೆ ಸಂಘಪರಿವಾರದಲ್ಲಿ ಗುರುತಿಸಿಕೊಂಡು ಹಿಂದೂತ್ವದ ಪ್ರಬಲ ಪ್ರತಿಪಾದಕರಾಗಿ ರೂಪುಗೊಂಡುಬಿಟ್ಟರು. ಉಡುಪಿಯ ಚೆಡ್ಡಿ ಹಿನ್ನೆಲೆಯ ಸಂಘ-ಸಂಸ್ಥೆ-ದೇವಸ್ಥಾನ-ಪುರಸಭೆಗೆಲ್ಲ ಆಯ್ಕೆಯಾಗುತ್ತ 'ರಾಜಕಾರಣಿ'ಯಾಗಿ ಬೆಳೆದು ನಿಂತರು!!

ಸತ್ತವರ ಬಗ್ಗೆ ಟೀಕೆ ಮಾಡೋದು ತರವಲ್ಲ; ಆದರೆ ಅಕ್ಷರ ಮಾಧ್ಯಮದ ಮೂಲಕ ಸತ್ಯದ ಅನ್ವೇಷಣೆಯಲ್ಲಿ ನಿಷ್ಠೂರವಾಗಿ ತೊಡಗಿಸಿಕೊಂಡಿರುವ 'ಪತ್ರಿಕೆ' ತನಗೆ ಕಂಡದ್ದನ್ನು ಕಂಡಂತೆಯೇ ಜನತೆಯ ಮುಂದಿಡುತ್ತ ಬಂದಿದೆ. ಕಟುವಾಸ್ತವವೆಂದರೆ, ತೀರಾ ಸರಳ-ಸೌಮ್ಯರಂತೆ ಕಾಣಿಸುತ್ತಿದ್ದ ಡಾ. ಆಚಾರ್ಯ ಆರೆಸ್ಸೆಸ್-ಬಿಜೆಪಿಯ ಅನಾಹುತಕಾರಿ ಕೋಮುವಾದದ ಅತ್ಯುಗ್ರ ಹರಿಕಾರನಂತಿದ್ದರು! ತನ್ನ ವೈದ್ಯ ವೃತ್ತಿಯಲ್ಲಿ ಹಿಂದೂ-ಮುಸ್ಲಿಮ್ ಎಂದು ತಾರತಮ್ಯ ಎಣಿಸದೆ, ಧನದಾಹಿಯಾಗದೆ ಜನಮನ ಗೆದ್ದಿದ್ದ ಈ 'ಹಿಂದೂ ಕರ್ಮಯೋಗಿ' ರಾಜಕೀಯ-ಸಾಮಾಜಿಕ- ಧಾರ್ಮಿಕವಾಗಿ ಇಡುತ್ತಿದ್ದ ಹೆಜ್ಜೆಗಳು ಮಾತ್ರ ತಾಲಿಬಾನಿಗಳ



ಹಿಂಸಾರತಿಯಷ್ಟೇ ಭೀಭತ್ಸವಾಗಿತ್ತು, ಕೋಮು ಕಲಹ-ಕ್ರೌರ್ಯ ಪ್ರಚೋದಕವಾಗಿತ್ತು. ಈ ಡಾಕ್ಟರ್ ತನ್ನ ರಾಜಕೀಯದ ರುಬಾಬಿಗೆ ಅಮಾಯಕರನ್ನು ಎತ್ತಿಕಟ್ಟಿ ಸಂಘರ್ಷಕ್ಕೆ, ಪರೋಕ್ಷವಾಗಿ ಕುಮ್ಮಕ್ಕು ಕೊಡುತ್ತಲೇ ಹೋದರು. ಮುಗ್ಧನಂತೆ ಮಾತಾಡುತ್ತಿದ್ದ ಆಚಾರ್ಯ ಒರಿಜಿನಲ್ ಆರೆಸ್ಸೆಸ್‌ನ ಚಿಂತನ ಚಿಲುಮೆಯಾಗಿದ್ದರು.

ಆರೆಸ್ಸೆಸ್ ಪಡಸಾಲೆಯಿಂದ ಉಡುಪಿ ಮುನ್ಸಿಪಾಲ್ಟಿ ರಾಜಕಾರಣಕ್ಕೆ ನೆಗೆದ ಆಚಾರ್ಯ 1968ರಲ್ಲಿ ಕೌನ್ಸಿಲರ್ ಆಗಿ ಗೆದ್ದುಬಿಟ್ಟಿದ್ದರು. ಅಷ್ಟೇ ಅಲ್ಲ ದಕ್ಷಿಣ ಭಾರತದಲ್ಲಿ ಜನಸಂಘಕ್ಕೆ ಅಧಿಕಾರ ಕೊಡಿಸಿದ ಕೀರ್ತಿಯೂ ಆತನಿಗೆ ಸಂದಿತ್ತು. ಏಕೆಂದರೆ, ಉಡುಪಿ ಮುನಸಿಪಾಲ್ಟಿಯಲ್ಲಿ ಅಧಿಕಾರ ಹಿಡಿವಷ್ಟು ಸೀಟು ಅಂದು ಜನಸಂಘ ಗೆದ್ದಿತ್ತು. ತನ್ನ ನಾಜೂಕಯ್ಯ ಗುಣ-ಧರ್ಮದಿಂದ ಜನಸಂಘದ ಲೀಡರ್ ಆಗಿದ್ದ ಆಚಾರ್ಯ ಮುನ್ಸಿಪಾಲ್ಟಿ ಅಧ್ಯಕ್ಷತೆಗೆ ಸರಾಗವಾಗಿ ಏರಿ ಕುಳಿತುಬಿಟ್ಟರು. ಇದು ಸಂಘಪರಿವಾರ-ಜನಸಂಘದಲ್ಲಿ ಆಚಾರ್ಯರಿಗೆ ಅದೆಂಥ "ಹಿಂದೂತ್ವದ ರಾಜಕಾರಣಿ" ಎಂಬ ಇಮೇಜು ತಂದುಕೊಟ್ಟಿತೆಂದರೆ, ದಿಲ್ಲಿಯ ಜನಸಂಘದ ಕಚೇರಿಯಲ್ಲಿ ಆಚಾರ್ಯರ ಭಾವಚಿತ್ರ ಹಾಕುವಂತಾಗಿತ್ತು. ಚೆಡ್ಡಿ ರಾಜಕಾರಣದಿಂದ ಸಹಜವಾಗೇ ಆಚಾರ್ಯರ ಡಾಕ್ಟರಿಕೆ ಡಲ್ಲಾಗಿ ಹೋಯ್ತು. ಜೊತೆಗೆ ಮುನ್ಸಿಪಾಲ್ಟಿಯ ಜನಸಂಘದ ನಾಯಕನೆಂದೇ ಪ್ರಸಿದ್ಧಿ ಬೇರೆ ತಲೆಗೇರಿತ್ತು. ಹೀಗಾಗಿ ಆಚಾರ್ಯ ವೃತ್ತಿಬಿಟ್ಟು ರಾಜಕಾರಣವನ್ನೇ ದಂಧೆಯನ್ನಾಗಿ ಮಾಡಿಕೊಂಡುಬಿಟ್ಟರು!

ಆದರೆ ಈ ಮತಾಂಧ ರಾಜಕಾರಣ ಸಿದ್ಧಿ-ಪ್ರಸಿದ್ಧಿ ಮಾತ್ರ ಆತನನ್ನು ಎಮ್ಮೆಲ್ಲೇ ಮಾಡಲಿಲ್ಲ, ಅಸೆಂಬ್ಲಿ ಇಲೆಕ್ಷನ್‌ಗೆ ನಿಂತು-ನಿಂತು ಪಲ್ಟಿ ಹೊಡೆಯುತ್ತಿದ್ದ ಆಚಾರ್ಯ. ೧೯೮೩ ರಲ್ಲಿ ಅಚಾನಕ್ ಗೆದ್ದೇಬಿಟ್ಟಿದ್ದರು. ಕರಾವಳಿಯ 'ಮತ್ಸ್ಯಕನ್ಯೆ' ಮನೋರಮಾ ಮಧ್ವರಾಜ್‌ರ ಆಲಸ್ಯ-ಐಶಾರಾಮದಿಂದ ಬೇಸತ್ತಿದ್ದ ಉಡುಪಿ ಜನರು ಆಕೆಗೆ ಪಾಠ ಕಲಿಸುವ ಹಠಕ್ಕೆ ಬಿದ್ದಿದ್ದೇ ಆಚಾರ್ಯರಿಗೆ ಶಾಸಕಗಿರಿ ಸೌಭಾಗ್ಯ ಸಿಗಲು ಕಾರಣವಾಗಿತ್ತು, ಆಗ ರಾಮಕೃಷ್ಣ ಹೆಗಡೆಜೀಯ ಅಲ್ಪಮತದ ಸರ್ಕಾರವಿತ್ತು. ಬಿಜೆಪಿಯ ಹದಿನೆಂಟು ಶಾಸಕರ ಮುಂದಾಳತ್ವ ಇದೇ ಆಚಾರ್ಯನ ಕೈಯಲ್ಲಿತ್ತು, ಆಗಾತ ಹೆಗಡೆಜೀಯನ್ನು ಬ್ಲ್ಯಾಕ್‌ಮೇಲ್ ಮಾಡಿ ಜೀರ್ಣೋದ್ಧಾರಗೊಂಡಿದ್ದು ಇವತ್ತಿಗೂ ಉಡುಪಿಯಲ್ಲಷ್ಟೇ ಅಲ್ಲ, ಇಡೀ ಕರಾವಳಿಯಲ್ಲಿ ಜನಜನಿತ! ಆ ಹೊತ್ತಲ್ಲಿ ಆಚಾರ್ಯ ಮಾಡಿಸಿದ್ದ ಅಧಿಕಾರಿಗಳ ವರ್ಗಾವರ್ಗಿಯಿಂದಾತನಿಗೆ 'ಟ್ರಾನ್ಸ್‌ಫರ್ ಮಿನಿಸ್ಟರ್' ಎಂದೇ ಜನ ಬಿರುದು ಕೊಟ್ಟಿದ್ದರು.

ಉಡುಪಿ ಪುರಸಭೆ ಪ್ರೆಸಿಡೆಂಟ್ ಆಗಿದ್ದಾಗ ತಲೆ ಮೇಲೆ ಮಲ ಹೊರುವ ಪದ್ಧತಿ ನಿರ್ಮೂಲನೆಗಾಗಿ ಬದ್ಧತೆ ತೋರಿದ್ದ ಆಚಾರ್ಯ ಎರಡೂವರೆ ವರ್ಷದ ಶಾಸಕತ್ವದಲ್ಲಿ ಒಂದೇ ಒಂದು ಜನಪರ ಕೆಲಸ ಮಾಡಲೇ ಇಲ್ಲ. ಅದೇ ಮೊದಲು; ಅದೇ ಕೊನೆ. ಮತ್ತೆಂದೂ ಈ ಚೆಡ್ಡಿ ಚಿಂತಕರ ಜಾವಡಿಯ ಅಂಕಿ-ಸಂಖ್ಯೆ ಕಸರತ್ತುಗಾರ ಜನರಿಂದ ನೇರವಾಗಿ ಗೆದ್ದಿದ್ದೇ ಇಲ್ಲ. ಶಾಸಕನಾಗಿದ್ದಾಗ ಮನೆ ಗೇಟಿಗೆ 'ನಾಯಿಗಳಿವೆ ಎಚ್ಚರಿಕೆ' ಎಂಬ ಬೋರ್ಡ್ ನೇತುಹಾಕಿ ಒಳಗೆ ಶಾಸಕ ಸಾಹೇಬರು ಚೆಡ್ಡಿ ಚಮತ್ಕಾರ ಹೊಸೆಯುತ್ತಿದ್ದರು. ಆದರೆ ಮಾಜಿ ಶಾಸಕನಾದ ಬಳಿಕ ಆಚಾರ್ಯ ಆರೆಸ್ಸೆಸ್ ವಲಯದಲ್ಲಿ ಅನಾಹುತಕಾರಿ ಸ್ಟ್ರೆಟಜಿಸ್ಟ್ ಆಗಿ ಅವತರಿಸಿಬಿಟ್ಟರು. ಮುನ್ಸಿಪಾಲಿಟಿ ಅಧ್ಯಕ್ಷನಾಗಿದ್ದಾಗ ಬಿಜೆಪಿಯ ಅಡ್ವಾಣಿ-ವಾಜಪೇಯಿಯಂಥ ಮಹಾಮಹಿಮರ ಸಖ್ಯ ಪಡೆದಿದ್ದ ಆಚಾರ್ಯರಿಗೆ ಆ ಪಾರ್ಟಿಯಲ್ಲಿ ಚೆಡ್ಡಿವಾರದ ತಜ್ಞನೆಂದೇ ಗೌರವಿಸಲಾಗುತ್ತಿತ್ತು.

ಹೀಗಾಗಿ ಆಚಾರ್ಯ ಸದಾ ಆರಾಮ ಕುರ್ಚಿಯಲ್ಲಿ ಕುಳಿತು ಅಂಕಿ-ಅಂಶಗಳ ಹೊಸೆಯುವುದು, ಮತಾಂಧತೆ ಆಧಾರದಲ್ಲಿ ಮತದಾರರನ್ನು ಸೆಳೆಯುವ ಬಿಜೆಪಿಯ ಹೊತ್ತಿಗೆ-ಪ್ರಣಾಳಿಕೆ ತಯಾರಿಸುವುದರಲ್ಲಿ ನಿರತರಾಗಿರುತ್ತಿದ್ದರು. ಮೂರ್ನಾಲ್ಕು ಅಸೆಂಬ್ಲಿ-ಪಾರ್ಲಿಮೆಂಟ್ ಇಲೆಕ್ಷನ್‌ನಲ್ಲಿ ಬಿಜೆಪಿಯ ಮೆನಿಫೆಸ್ಟೋ ತಯಾರಿಸಿದ್ದೇ ಈ ಚೆಡ್ಡಿ ತತ್ವಜ್ಞಾನಿ. ಯಡ್ಡಿಯಂಥ ಮುಂಚೂಣಿ ನಾಯಕರೂ ಈ ಆಚಾರ್ಯನ 'ಪ್ರೌಢಿಮೆ'ಯನ್ನೇ ಅವಲಂಬಿಸಿದ್ದರು ಪಾಪ! ಅಸೆಂಬ್ಲಿ ಒಳ-ಹೊರಗೆ ಯಡ್ಡಿ ಮತ್ತಿತರ ಬಿಜೆಪಿ ಭೂಪರು ಭಾಷಣ-ಮಾತುಗಾರಿಕೆ ನಡೆಸುತ್ತಿದ್ದುದೇ ಆಚಾರ್ಯ ಒದಗಿಸುತ್ತಿದ್ದ ಆರ್ಥಿಕ-ರಾಜಕೀಯ-ಧಾರ್ಮಿಕ- ಕೋಮುವಾದದ ಚಿತ್ರಣದ ಆಧಾರ ಮೇಲಾಗಿರುತ್ತಿತ್ತು!

ಇಂಥ ಯೂಸ್‌ಫುಲ್ ಪಂಡಿತನಿಗೊಂದು ಪುನರ್ವಸತಿ ಕಲ್ಪಿಸುವುದು ಬಿಜೆಪಿ-ಆರೆಸ್ಸೆಸ್ ಹೈಕಮಾಂಡಿಗೂ ಅನಿವಾರ್ಯವಾಗಿತ್ತು. ಹಾಗೆಯೇ ಅಡ್ವಾಣಿಯೊಂದಿಗಿನ ಸಂಬಂಧವೂ ಆಚಾರ್ಯರಿಗೊಂದು ಸರ್ಕಾರಿ ಸಂಬಳ-ಸೌಲತ್ತು-ಸೌಭಾಗ್ಯ ಸಿಗುವ ಸ್ಥಾನ-ಮಾನ ಪಡೆಯಲು ಸಹಕರಿಸಿತ್ತು. ಹೀಗಾಗಿ ಸಂಘಪರಿವಾರ ವಿಧಾನ ಪರಿಷತ್‌ನಲ್ಲೊಂದು ಕಾಯಂ ಕುರ್ಚಿಯನ್ನು ಆತನಿಗೆ ಮೀಸಲಿಟ್ಟುಬಿಟ್ಟಿತ್ತು! ಎಮ್ಮೆಲ್ಸಿಯಾಗಿದ್ದಾಗಲೂ ಆಚಾರ್ಯ ಜನರ

ಆಚಾರ್ಯರ ಲವ್ ಮತ್ತು ಹುಸಿ ಆಚಾರ!

ಪ್ರೇಮಿಸುವುದೇ ಘೋರ ಅಪರಾಧ ಎಂಬ 'ತತ್ವ' ಸಂಘ ಪರಿವಾರದ ಸೋಗಲಾಡಿಗಳದಲ್ಲವಾ? ಪ್ರೇಮಿಗಳ ಜೋಡಿ ಕಂಡರೆ ಅಟ್ಟಾಡಿಸಿ ಬಡಿದು ಬಿಜೆಪಿ-ಆರೆಸ್ಸೆಸ್-ಭಜರಂಗದಳದ ಭೂತಗಳು ವಿಕೃತಾನಂದ ಅನುಭವಿಸುತ್ತಿದ್ದಾರೆ. ಸಂಘಪರಿವಾರವಂತೂ ವ್ಯಾಲೆಂಟೈನ್ಸ್ ದಿನವನ್ನೇ ನಿಷೇಧಿಸಬೇಕೆಂದು ಅಬ್ಬರಿಸಿ ಬೊಬ್ಬಿರಿಯುತ್ತಿದೆ-ಇಂಥವರಿಗೆ ಪರಮ ಪೂಜ್ಯ ಆಚಾರ್ಯನಂತಿದ್ದರು ವಿ.ಎಸ್. ಆಚಾರ್ಯ.

ಆದರೆ ಸಂಘ ಪರಿವಾರದ ಸಂಸ್ಕೃತಿ-ಶೀಲದ ಸ್ವಯಂಪ್ರೇರಿತ ವಾರಸುದಾರರು ಹೇಳೋದೇ ಒಂದು. ಮಾಡೋದು ಮತ್ತೊಂದು. ಅದಕ್ಕೆ ಆಚಾರ್ಯರ ಬದುಕೇ ನಿದರ್ಶನದಂತಿದೆ! ಆಚಾರ್ಯ ತಾತ್ವಿಕವಾಗಿ ವ್ಯಾಲೆಂಟೈನ್ಸ್ ಡೇ ವಿರೋಧಿ ಅನೈತಿಕ ಪೊಲೀಸರ ಸಂರಕ್ಷಕನಂತಿದ್ದರು. ಆದರೆ ಆತನೇ ಅಮರ ಪ್ರೇಮಿ ಆಚಾರ್ಯ ಮಂಗಳೂರಲ್ಲಿ ಎಂಬಿಬಿಎಸ್ ಮಾಡುವಾಗ ಪಕ್ಕದ ಕಾಲೇಜೊಂದರಲ್ಲಿ ಶಾಂತಾ ಎಂಬ ಐಯ್ಯಂಗಾರಿ ಹುಡುಗಿ ಬಿಎಸ್ಸಿ ಮಾಡುತ್ತಿದ್ದಳು. ಆಕೆ ಕಾಲೇಜಿನ ಫಂಕ್ಷನ್ ಒಂದರಲ್ಲಿ ಹಾಡಿದ ಪ್ರಾರ್ಥನೆ ಆಚಾರ್ಯರನ್ನು ಆಕರ್ಷಿಸಿತು. ಅದು ಕೊನೆಗೆ ಪ್ರಣಯವಾಗಿ ಪರಿವರ್ತನೆ ಆಯ್ತು.

ಮದುವೆ ಆಗುವುದಿದ್ದರೆ ಅದು ಶಾಂತನೊಂದಿಗೆ ಮಾತ್ರ ಎಂಬ ದೃಢ ನಿರ್ಧಾರಕ್ಕೆ ಬಂದುಬಿಟ್ಟರು. ಬರೋಬ್ಬರಿ ಒಂದು ವರ್ಷ ಆಚಾರ್ಯ ಮತ್ತು ಶಾಂತ ನಡುವೆ ರಹಸ್ಯ ಲವ್ ನಡೆಯಿತು. ಆದರೆ ಶಿವಳ್ಳಿ ಬ್ರಾಹ್ಮಣರಾದ ಆಚಾರ್ಯರಿಗೆ ತನ್ನ ಮನೆಯವರು ಐಯ್ಯಂಗಾರಿ ಬ್ರಾಹ್ಮಣಳಾದ ಶಾಂತನ ಮನೆ ತುಂಬಿಸಿಕೊಳ್ಳುತ್ತಾರೆಂದು ಭರವಸೆ ಇರಲಿಲ್ಲ, ಮನೆಯಲ್ಲಿ ವಿರೋಧವೂ ಬಂತು. ಕೊನೆಗೆ ಆಚಾರ್ಯ ಮನೆಯವರೇ ತಣ್ಣಗಾಗಿ ಮದುವೆಗೆ ಒಪ್ಪಿಗೆ ನೀಡಿದರು.

ವಿಧಿವಿಲಾಸ ನೋಡಿ, ವ್ಯಾಲೆಂಟೈನ್ ದಿನದಂದೇ ಆಚಾರ್ಯ ತನ್ನ ನಲ್ಲೆಯನ್ನು ಅಗಲಿದ್ದಾರೆ.




ಬಳಿತಿಗೆ ರಾಜಕೀಯ ಮಾಡಿದ ಕುರುಹುಗಳಿಲ್ಲ. ಎಮ್ಮೆಲ್ಸಿಗಿರಿ ಸವಲತ್ತು-ಸಂಬಳದಿಂದ ಆರೆಸ್ಸೆಸ್, ಬಿಜೆಪಿ- ಭಜರಂಗದಳದ ಹಿಡನ್ ಅಜೆಂಡಾ ಜಾರಿಗೆ ಒಳಗೊಳಗೇ ಆಚಾರ್ಯ ಸದಾ ಕಾರ್ಯತತ್ಪರವಾಗಿರುತ್ತಿದ್ದರು! 1996 ರಿಂದ ಸತತ ಮೂರು ಸಲ ಈತನ ಎಮ್ಮೆಲ್ಸಿಯಾಗಿ ಆಯ್ಕೆ ಮಾಡಿಕೊಂಡಿತ್ತು ಚೆಡ್ಡಿ ಪರಿವಾರ!

ಅವಿಭಜಿತ ದಕ್ಷಿಣ ಕನ್ನಡದ ಬಿಜೆಪಿ-ಆರೆಸ್ಸೆಸ್-ಭಜರಂಗದಳದ ಧರ್ಮಕಾರಣದಲ್ಲಿ ಕಲ್ಲಡ್ಕ ಪ್ರಭಾಕರ್ ಭಟ್ಟನೆಂಬ ವಿಷಜಂತು ಪ್ರವರ್ಧಮಾನಕ್ಕೆ ಬರುವವರೆಗೆ -ಅಂದರೆ ಸುಮಾರು 2000 ದಶಕಾರಂಭದ ತನಕ- ವಿ.ಎಸ್. ಆಚಾರ್ಯರೇ ಪ್ರಶ್ನಾತೀತ ನಾಯಕಾಗ್ರೇಸನಾಗಿದ್ದರು. ಪೇಜಾವರ ಸ್ವಾಮಿಯ ಆಪ್ತ ಶಿಷ್ಯೋತ್ತಮನಾಗಿದ್ದ ಆಚಾರ್ಯ ಕರಾವಳಿಯ ಕಮ್ಯುನಲ್ ಟ್ರಿಕ್ಕುಗಳಿಗೆಲ್ಲ ಮೂಲ ಪುರುಷನಾಗಿರುತ್ತಿದ್ದರು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ನಡೆಯುವ ಮತಾಂಧ ಮಸಲತ್ತು-ಗಲಭೆ-ಪಾತಕದಲ್ಲಿ ಆಚಾರ್ಯರ ಕೊಡುಗೆ ಇದ್ದೇ ಇರುತ್ತಿತ್ತು. ಆದರದು ಯಾರಿಗೂ ಸಂಶಯ ಬರದಂತೆ-ಸಿಕ್ಕಿ ಬೀಳದಂತೆ ಆಚಾರ್ಯ ಹೆಣೆಯುತ್ತಿದ್ದರು. ಊರು ಸುಟ್ಟರೂ ಹನುಮಪ್ಪ ಹೊರಗಿರುವಂತೆ ಆಚಾರ್ಯ 'ಆಟ' ಆಡುತ್ತಿದ್ದರು.

ಯಾವಾಗ ಕಲ್ಲಡ್ಕ ಆರೆಸ್ಸೆಸ್ 'ಡಾನ್' ಆಗಿ ಮೈದಳೆದರೋ ಆಗ ಆಚಾರ್ಯ ಫುಲ್‌ಟೈಟ್ ರಾಜಕಾರಣಿ ಆಗಿಹೋದರು. ಆ ಬಳಿಕ ಕರಾವಳಿ ಬಿಜೆಪಿಯ ರಾಜಕಾರಣದಲ್ಲಿ ಗ್ರಾಪಂನಿಂದ ಅಸೆಂಬ್ಲಿ-ಪಾರ್ಲಿಮೆಂಟ್ ತನಕದ ಕ್ಯಾಂಡಿಡೇಟ್ ಆಯ್ಕೆ, ಮತಾಂಧ ಪ್ರಚಾರ, ಹಿಂದೂತ್ವದ ಹಿಕಮತ್ತಿನ ಹಿಂದೂ ಸಮಾಜೋತ್ಸವ, ಬ್ರಹ್ಮಕಲಶೋತ್ಸವ-ಫಂಡ್ ರೈಸಿಂಗ್, ಕಾವಿಗಳ ಬಳಕೆಯೆಲ್ಲ ತ್ರಿಮೂರ್ತಿ ಗ್ಯಾಂಗ್ ಮಾಡಲಾರಂಭಿಸಿತು. ಈ ತಂಡದಲ್ಲಿ ಡಾ. ಆಚಾರ್ಯ, ಡಾ. ಕಲ್ಲಡ್ಕ ಭಟ್ಟ ಮತ್ತು ಕುಂದಾಪುರದ ಎ. ಗೋಪಾಲಕೃಷ್ಣ ಕೊಡ್ಗಿಗಳಿದ್ದರು. ಆದರೆ ಆಚಾರ್ಯರಿಗಿಂತ ಡಾ. ಕಲ್ಲಡ್ಕ ಭಟ್ಟನೇ ಪವರ್‌ಫುಲ್ ಆಗಿರುತ್ತಿದ್ದ ಎಲ್ಲ ಚೆಡ್ಡಿ-ಕಾವಿ-ಬಿಜೆಪಿಯ ಮತಾಂಧ ರಾಜಕಾರಣದಲ್ಲಿ, ಆದರೆ ರಾಜ್ಯ ಬಿಜೆಪಿಯ ಥಿಂಕ್‌ಟ್ಯಾಂಕ್ ಆಗಿ ಆಚಾರ್ಯ ಅವತರಿಸಿಬಿಟ್ಟಿದ್ದರು.

ಡಾ. ಆಚಾರ್ಯರ ಚೆಡ್ಡಿ ರಾಜಕಾರಣ ಮಗ್ಗಲು ಬದಲಿಸಿದ್ದೇ ಆತ ಕುಮಾರಸ್ವಾಮಿ-ಯಡ್ಡಿಯ 'ಕೋಜಾ' ಸರ್ಕಾರದಲ್ಲಿ ಮಂತ್ರಿಯಾದಾಗ. ಅದುವರೆಗೂ ಕರಾವಳಿಯ ಅಮಾಯಕರಿಗೆ ಹಿಂದೂತ್ವದ ಅಮಲೇರಿಸಿ ಬೇಳೆ ಬೇಯಿಸಿಕೊಳ್ಳುತ್ತಿದ್ದ ಆಚಾರ್ಯ ಮಂತ್ರಿಗಿರಿಗೆ ಏರುತ್ತಲೇ ಜನರನ್ನು ಕಂಗೆಡಿಸಿ ಕಾಸು ಮಾಡುವ ಮಹಿಮೆಯೂ ಶುರುಹಚ್ಚಿಕೊಂಡಿದ್ದರು. ಅಧಿಕಾರ ಬಲದಿಂದ ಹಿಂಬಾಗಿಲ ಫಿಕ್ಸಿಂಗ್, ಅವ್ಯವಹಾರ, ಅನಾಚಾರ, ಕಳ್ಳಕಾಸು-ಆಸ್ತಿ ಕೂಡಿಸುವ ಕರಾಮತ್ತುಗಳನ್ನೆಲ್ಲ ಆಚಾರ್ಯ ತುಂಬ ನಾಜೂಕಾಗಿ ನಡೆಸಹತ್ತಿದರು. ಇದರ ಪರಿಣಾಮವೇ ಜೀವವಿರೋಧಿ 'ನಾಗಾರ್ಜುನಾ ಥರ್ಮಲ್ ಪವರ್ ಕಂಪನಿ' ಪಡುಬಿದ್ರಿ ಬಳಿಯ ನಂದಿಕೂರಲ್ಲಿ ನಿಂತು ಕಾಡುತ್ತಿರುವ ದುರಂತ ಕತೆ!! ಆಚಾರ್ಯ ಜನರು ಬೇಡ-ಬೇಡವೆಂದು ಗೋಗರೆದರೂ ಅದೆಷ್ಟು ಹಠಕ್ಕೆ ಬಿದ್ದು ಈ ಹಾರುಬೂದಿ ವಿದ್ಯುತ್ ಘಟಕ ಸ್ಥಾಪಿಸಿಯೇ ತೀರಿದರೆಂದರೆ, ಆತನದೇ ಪಕ್ಷದ ಸಂಸದೆಯಾಗಿದ್ದ ಮನೋರಮಾ ಮಧ್ವರಾಜ್ ಪಾರ್ಟಿಯೇ ಬಿಟ್ಟುಹೋದರು. ಆಚಾರ್ಯನ ಬಳಗ ಯುಪಿಸಿಎಲ್ (ನಾಗಾರ್ಜುನಾ ಕಂಪನಿ)ನ ಆಂಧ್ರ ವಾಳ್ಳುಗಳಿಂದ ದೇಣಿಗೆ ದೊಡ್ಡ ಮೂಟೆ ಪಡೆದಿದ್ದಾರೆಂದು ಇಡೀ ಕರಾವಳಿಯೇ ಬೊಬ್ಬೆ ಹೊಡೆಯಿತು. ಇವತ್ತು ಈ ಉಷ್ಣ ವಿದ್ಯುತ್ ಸ್ಥಾವರದಿಂದ ರೈತರು-ಮೀನುಗಾರರು ನರಕಕ್ಕೆ ಬಿದ್ದಿದ್ದಾರೆ. ಆರೋಗ್ಯ-ಕುಡಿವ ನೀರಿನ ಬಾವಿಗಳೆಲ್ಲ ಕಲುಷಿತವಾಗಿ ಹೋಗಿವೆ. ಇದ್ಯಾವುದೂ ಕಲ್ಲೆದೆಯ ಆಚಾರ್ಯರನ್ನು ಕರಗಿಸಲೇ ಇಲ್ಲ. ಚೆಡ್ಡಿ ಅಧಿಕಾರ ರಾಜಕಾರಣ ಮಹಿಮೆಯಿದು; ಆಚಾರ್ಯರ ಅಸಲಿ ಹಿಂದೂತ್ವದ ಮುಖವಿದು.

ಒಂದು ಕಾಲದಲ್ಲಿ ಥಂಡಿ-ಜ್ವರಕ್ಕೆ ಸ್ಯಾಕ್-ಸ್ಯಾಂಪಲ್ ಗುಳಿಗೆ ಮತ್ತು ಬಣ್ಣದ ನೀರು ಕೊಡುತ್ತ 'ಸಂಘದ ಡಾಕ್ಟರ್' ಎನ್ನಿಸಿಕೊಂಡಿದ್ದ ಆಚಾರ್ಯ ಕೊನೆಗಾಲದಲ್ಲಿ ಮಂತ್ರಿಯಾಗಿ, ಸತತ ಎಮ್ಮೆಲ್ಸಿ-ಎಮ್ಮೆಲ್ಲೆಯಾಗಿ ಕೋಟಿ-ಕೋಟಿಗೆ ತೂಗುವಷ್ಟು ಭಾರವಾಗಿ ಹೋಗಿದ್ದರು. ಯಡ್ಡಿಯ ಪರಮಾಪ್ತ ಮಂತ್ರಿಯಾದಾಗಂತೂ ಆಚಾರ್ಯ ಪ್ರಜಾಪೀಡನೆಯ ದಗಲುಬಾಜಿ ದಂಧೆ-ದೌಲತ್ತು ಒಂದರ ಹಿಂದೊಂದಂತೆ ಮಾಡುತ್ತಲೇ ಹೋದರು. ಯಡ್ಡಿ ಯುಗದಲ್ಲಿ ಭಯಂಕರ ಪ್ರಭಾವಿಯಾಗಿದ್ದ ಈ ಶಿವಳ್ಳಿ ಬ್ರಾಹ್ಮಣೋತ್ತಮ ಮನಸ್ಸು ಮಾಡಿದರೆ ಉಡುಪಿಯ ದೆಸೆಯನ್ನೇ ಬದಲಿಸಬಹುದಿತ್ತು. ಆದರೆ ಒಣ ಪ್ರತಿಷ್ಠೆಯ ರಾಜಕಾರಣ-ಹಿಂದೂತ್ವದ ಅವಾಂತರದಲ್ಲೇ ಮುಳುಗಿದ್ದ ಆಚಾರ್ಯರಿಗೆ ಜನಪರ ಬದ್ಧತೆ-ಇಚ್ಛಾಶಕ್ತಿಗಳೇ ಇರಲಿಲ್ಲ. ರಚನಾತ್ಮಕ-ಅಭಿವೃದ್ಧಿ ಪರ ರಾಜಕಾರಣದ ದೂರದೃಷ್ಟಿ-ಯೋಚನೆ-ಯೋಜನೆ ಒಂದೂ ಈ ಕುಬ್ಜ ರಾಜಕಾರಣಿಯಲ್ಲಿರಲಿಲ್ಲ.



ತಮಾಷೆಯೆಂದರೆ, ಊರಿಗೆಲ್ಲ ಬುದ್ಧಿ ಹೇಳುವ ಪೇಜಾವರ ಮಠಾಧೀಶ ವಿಶ್ವೇಶತೀರ್ಥರು ತಮ್ಮ ಮುದ್ದಿನ ಶಿಷ್ಯ ಏನೆಲ್ಲ ಅನಾಚಾರ-ಅವಾಂತರ-ಅವ್ಯವಹಾರ ಮಾಡಿದರೂ ಕಂಡೂಕಾಣದಂತಿರುತ್ತಿದ್ದರು. ಪೇಜಾವರರ ಈ ನಿಗೂಢ ಮೌನ ಉಡುಪಿಯಲ್ಲಿ ಅನೇಕಾನೇಕ ಅನುಮಾನ ಹುಟ್ಟಿಸಿತ್ತು. ಆಚಾರ್ಯ ಹಿಂದೂತ್ವದ 'ಪಾಲಿಟಿಕ್ಸ್' ಜೊತೆಜೊತೆಗೆ ಸ್ವ-ಪಕ್ಷದಲ್ಲಿ ಯಾರೂ ತನಗೆದುರಾಗಿ ಬೆಳೆಯದಂತೆ ಚಿವುಟಿ ಹಾಕುತ್ತಲೇ ಇದ್ದರು. ಉಡುಪಿ ಸಂಸದರಾಗಿದ್ದ ಸದಾನಂದ ಗೌಡ ಮತ್ತು ಆಚಾರ್ಯರ ನಡುವೆ ಯಡ್ಡಿ ಪರ್ವದಲ್ಲಿ ಶೀತಲಸಮರ ನಡೆಯುತ್ತಿತ್ತು. ಎಂಪಿ ಗೌಡರ ಮಾತು ಕೇಳದಂತೆ ಅಧಿಕಾರಿಗಳಿಗೆಲ್ಲ ಮಂತ್ರಿ ಆಚಾರ್ಯ ರಹಸ್ಯ ಫರ್ಮಾನು ಹೊರಡಿಸಿದ್ದರು. "ಒಬ್ಬ ಜನಪೀಡಕ ಪೊಲೀಸ್ ಅಧಿಕಾರಿಯನ್ನೇ ಬದಲಿಸಲಾಗದಂಥ ಶಕ್ತಿಹೀನ ನಾನು" ಎಂದು ಸದಾನಂದ ಗೌಡ ಅಂದು ಕಂಡ-ಕಂಡಲ್ಲಿ ಅಲವತ್ತುಕೊಳ್ಳುತ್ತಿದ್ದರು ಪಾಪ! ಸದಾ ಅದೆಷ್ಟು ಹತಾಶರಾಗಿ ಹೋಗಿದ್ದರೆಂದರೆ, ಮುಂದೆಂದೂ ತಾನು ಈ ಆಚಾರ್ಯ ಇರುವಷ್ಟು ದಿನ ಉಡುಪಿಯಿಂದ ಸಂಸದನಾಗಬಾರದು-ಇಲ್ಲಿ ರಾಜಕಾರಣ ಮಾಡಬಾರದೆಂಬ ದೃಢ ನಿರ್ಧಾರಕ್ಕೆ ಬಂದಿದ್ದರು. ಬಿಜೆಪಿ ರಾಜಕಾರಣ ಅಸಹ್ಯ ಸ್ಥಿತ್ಯಂತರದಿಂದ ಅದೇ ಆಚಾರ್ಯ ತನಗಿಂತ ತೀರಾ ಜೂನಿಯರ್ ಆದ, ಪಾರ್ಟಿಯಲ್ಲೂ ಜುಜುಬಿಯಾಗಿದ್ದ ಸದಾನಂದ ಗೌಡರ ಸಿಎಂಗಿರಿ ಒಪ್ಪಿಕೊಂಡು ಆತ ಕೊಟ್ಟ ಮಂತ್ರಿಗಿರಿ ಸ್ವೀಕರಿಸುವ ದೈನೇಸಿ ಸ್ಥಿತಿ ಬಂದಿತ್ತು. ಯಡ್ಡಿಯ ಗೂಢಚಾರನಾಗಿ ಮುದಿ ಕಾಲದಲ್ಲಿ ಸದಾ ಸಂಗಡ ಓಡಾಡಬೇಕಾಗಿ ಬಂದಿತ್ತು.



ಬ್ರಾಹ್ಮಣಿಕೆಯ ಕಂತ್ರಿ ಜಾಣ್ಮೆ ಇದ್ದ ಆಚಾರ್ಯರನ್ನು ಯಡ್ಡಿ ಸಿಎಂ ಆಗಿದ್ದಾಗ ಬಹುವಾಗಿ ನೆಚ್ಚಿಕೊಂಡಿದ್ದರು. ರಾಜಭವನ-ದಿಲ್ಲಿ ಹೈಕಮಾಂಡ್ ಅಥವಾ ಕೇಂದ್ರ ಸರ್ಕಾರ ಕರೆದ ಮೀಟಿಂಗ್‌ಗೆಲ್ಲ ಯಡ್ಡಿ ಈ 'ಚಾಣಾಕ್ಷ''ನನ್ನು ಬಗಲಲ್ಲಿಟ್ಟುಕೊಂಡೇ ಹೋಗುತ್ತಿದ್ದರು. ಯಡ್ಡಿ ಮಂಡಿಸಿದ ಅಷ್ಟೂ ಬಜೆಟ್‌ನಲ್ಲಿ 'ಆರ್ಥಿಕ ತಜ್ಞ'ನೆಂಬ ಆರೋಪಕ್ಕೆ ಬಿಜೆಪಿಯಲ್ಲಿ ತುತ್ತಾಗಿದ್ದ ಆಚಾರ್ಯರ ಕೈವಾಡ ಇತ್ತು. ಹಾಗೆಯೇ ಕೇಂದ್ರದೊಂದಿಗೆ ವ್ಯವಹರಿಸುವಾ ಪೆದ್ದು ಯಡ್ಡಿಗೆ ಈ ಭಾಷಾ ಪ್ರವೀಣ ನೆರವಾಗುತ್ತಿದ್ದ ರಾಜ್ಯದ ಹಣಕಾಸು ಸ್ಥಿತಿಗತಿ- ಯೋಜನಾ ವಿವರವೆಲ್ಲ ಆಚಾರ್ಯ ಬ್ಯೂರೋಕ್ರೆಟ್ ಭಟ್ ಥರ ಉದುರಿಸುತ್ತಿದ್ದರು. ಇದೆಲ್ಲಕ್ಕಿಂತ ಹೆಚ್ಚಾಗಿ ಯಡ್ಡಿ ಭಿನ್ನಮತ, ಅವ್ಯವಹಾರದ ಆರೋಪದಲ್ಲಿ ದಿಲ್ಲಿ ದೊರೆಗಳ ಮುಂದೆ ಹೋಗಿ ನಿಲ್ಲುವಾಗ ಧೈರ್ಯ ತುಂಬುತ್ತಿದ್ದುದೇ ಆಚಾರ್ಯರ ಸಾಥ್! ಅಪರಾಧಿ ಪ್ರಜ್ಞೆಯಿಂದ ಯಡ್ಡಿಯ ಬಾಯಿಕಟ್ಟಿ ಹೋದಾಗ ಹೈಕಮಾಂಡ್ ಮುಂದೆ ಸಮರ್ಥವಾಗಿ ಈ 'ಲಾಯರ್'ವಾದ ಮಂಡಿಸಿ ತನ್ನ 'ಕಕ್ಷಿದಾರನ' ಬಚಾಯಿಸುತ್ತ ಬಂದಿದ್ದರು.

ಆದರೆ ಡೀವಿ ಸಿಎಂ ಆಗುತ್ತಿದ್ದಂತೆಯೇ ಆಚಾರ್ಯ ನಿಧಾನಕ್ಕೆ ಯಡ್ಡಿಯಿಂದ ದೂರ ಸರಿಯತೊಡಗಿದ್ದರು. ತನ್ನ ಕರಾವಳಿಯ ಆದ್ಮಿ ಸಿಎಂ ಆಗಿದ್ದಾನೆಂಬ ಕಾರಣಕ್ಕಲ್ಲ, ಹೈಕಮಾಂಡ್ ಮಾಂಡಲೀಕ ಸಾಕ್ಷಾತ್ ಅಡ್ವಾಣಿ ಎಂಬ ತನ್ನ 'ಗುರು'ವೇ ಯಡ್ಡಿ ಮೇಲೆ ಮುರುಕೊಂಡು ಬಿದ್ದಿದ್ದರಿಂದ ಆಚಾರ್ಯ ಅನಿವಾರ್ಯವಾಗಿ ಡೀವಿ ಪರವಾಗತೊಡಗಿದ್ದರು. ಆದರೆ ಡೀವಿಗೋ ಈ ಆಚಾರ್ಯನೆಂಬ ಮಾಧ್ವ ಬ್ರಾಹ್ಮಣ ತನ್ನ ವಿರೋಧಿ-ಯಡ್ಡಿ ಹಿತೈಷಿಯೆಂಬ ಗುಮಾನಿಗಳಿತ್ತು. ತಾನು ಉಡುಪಿ-ಚಿಕ್ಕಮಗಳೂರು ಎಂಪಿಯಾಗಿದ್ದಾಗ ತನ್ನ ಮಂತ್ರಿಗಿರಿ ಬಲದಿಂದ ಆಚಾರ್ಯ ಕಾಡಿದ ಕಹಿನೆನಪು ಹಾಗೇ ಇತ್ತು. ಹೀಗಾಗಿ ಡೀವಿ ಆಚಾರ್ಯರನ್ನು ತನ್ನ 'ರಾಜಗುರು' ಎಂದು ಸ್ವೀಕರಿಸಿರಲೇ ಇಲ್ಲ, ಅಷ್ಟೇ ಅಲ್ಲ, ತಾತ್ಸಾರದಿಂದಲೇ ದೂರ ಇಟ್ಟಿದ್ದರು. ಯಾವ ಸಲಹೆ-ಸೂಚನೆಯೂ ಕೇಳುತ್ತಿರಲಿಲ್ಲ.

ಒಟ್ಟಿನಲ್ಲಿ ಆಚಾರ್ಯ ಬಿಜೆಪಿಯಲ್ಲಾಗಲಿ, ಸಂಘ ಪರಿವಾರದಲ್ಲಾಗಲಿ ಕೌರವರಿಗೂ ಭಾವ; ಪಾಂಡವರಿಗೂ ಭಾವನೆಂಬಂತೆ 'ಶಕುನಿ'ಯಾಗಿದ್ದರು. ಇದನ್ನೇ 'ಅಜಾತ ಶತ್ರು' ಎಂದು ಈಗ ಬಿಜೆಪಿಗರು ವ್ಯಾಖ್ಯಾನಿಸುತ್ತಿದ್ದಾರಷ್ಟೇ! ಆಚಾರ್ಯರ ರಾಜಕೀಯದ ಅಧಿಕಾರದ ಅವಧಿಯಲ್ಲಿ ಉಡುಪಿ ಉದ್ಧಾರವಾಗುವುದಿರಲಿ, ಅದರ ನೆಮ್ಮದಿಗೇ ಭಂಗ ಬಂದುಬಿಟ್ಟಿತ್ತು. ಅನೈತಿಕ ಪೊಲೀಸ್‌ಗಿರಿ, ಗೋರಕ್ಷಣೆ, ಅವರ ಹುಡುಗ ನಮ್ಮ ಹುಡುಗಿ ಜಿಹಾದ್‌ಗಳು, ಹಿಂದೂತ್ವ ಕೋಮು ಕ್ರೌರ್ಯಗಳು, ಪಬ್-ಚರ್ಚ್ ಮೇಲೆ ದಾಳಿ, ಕ್ರಿಶ್ಚಿಯನ್-ಮುಸ್ಲಿಮರಿಗೆ ಕಿರುಕುಳದಂಥ ದುರ್ಘಟನೆಗಳು ಉಡುಪಿ-ಮಂಗಳೂರು ಭಾಗದಲ್ಲಿ ಹಾವಳಿಯಿಟ್ಟದ್ದೇ ಹೇತ್ಲಾಂಡಿ ಹೋಮ್ ಮಿನಿಸ್ಟರ್ ಅನ್ನಿಸಿದ್ದ ಆಚಾರ್ಯರ ಕಾಲದಲ್ಲಿ.

ಕರಾವಳಿ ಇವತ್ತು ಹಿಂದೂತ್ವದ ಪ್ರಯೋಗಶಾಲೆ ಆಗಿರುವುದರಲ್ಲಿ ವೇದವ್ಯಾಸ ಆಚಾರ್ಯರ ಕೊಡುಗೆ ಅಪಾರ; ಆಚಾರ್ಯ ತುಂಬುಜೀವನ ನಡೆಸಿ ವಯೋಸಹಜವಾಗಿ ಸಾವಿಗೀಡಾಗಿದ್ದಾರೆ. ಆದರೆ ಆತ ಬಿತ್ತಿಹೋಗಿರುವ ಕೋಮು ಕ್ರೌರ್ಯದ ಬೀಜ ಅನ್ಯಾಯದ 'ಅಸಹಜ' ಸಾವುಗಳಿಗೆ ಎಡೆಕೊಡದಿರಲಿ. ಕರಾವಳಿಗರಿಗೆ ಈ ಎಚ್ಚರಿಕೆ ಇರಲಿ!!

❖

ಆಚಾರ್ಯರ ಕೊಡುಗೆ ಏನು?


ಸಂಘಪರಿವಾರದ ಜಬರ್‌ದಸ್ತ್ ಮುಂದಾಳು ವೇದವ್ಯಾಸ ಆಚಾರ್ಯ ಮಂತ್ರಿಯಾಗಿ-ಶಾಸಕರಾಗಿ ಮಾಡಿದ ಸಾಧನೆ ಏನು? ಇಂಥದೊಂದು ಪ್ರಶ್ನೆ ಆತ ದೇಹ ತ್ಯಾಗ ಮಾಡಿದ ಸಂದರ್ಭದಲ್ಲಿ ಎಂಥವರಿಗಾದರೂ ಕಾಡುತ್ತದಲ್ಲವಾ? ಆಚಾರ್ಯ ಸುದೀರ್ಘ 40 ವರ್ಷದ ರಾಜಕಾರಣ-ಧರ್ಮಕಾರಣದಲ್ಲಿ ಕರಾವಳಿಗೆ ಅಥವಾ ಉಡುಪಿಗೆ ಇಲ್ಲವೇ ರಾಜ್ಯಕ್ಕೆ ಉಪಕಾರಕ್ಕಿಂತ ಉಪದ್ವಾಪವೇ ಹೆಚ್ಚಾಗಿದೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಆಚಾರ್ಯರ 'ಸಾಧನೆ'ಗಳಿಂದ ಸಂಘಪರಿವಾರದ ತರಹೇವಾರಿ ಗ್ಯಾಂಗು-ಗುಂಪುಗಳಿಗೆ, ಸರ್ಕಾರಕ್ಕೆ ಆಗಿರುವ ಲಾಭವೇ ಜಾಸ್ತಿ! ಆಚಾರ್ಯರಿಂದಾದ ಕೆಲವು ಅನಾಹುತಕಾರಿ ಸ್ಯಾಂಪಲ್‌ಗಳು ಇಲ್ಲಿವೆ:

-ಉಡುಪಿ ಬಳಿಯ ನಂದಿಕೂರಲ್ಲಿ ಆಂಧ್ರವಾಳ್ಳುಗಳು ಸ್ಥಾಪಿಸಿರುವ ಜೀವ ವಿರೋಧಿ ಹಾರುಬೂದಿ ವಿದ್ಯುತ್‌ಘಟಕದಿಂದ ಆಗಿರುವ ಅನಾಹುತ ಒಂದೆರಡಲ್ಲ. ಜನರ ವಿರೋಧವನ್ನು ಮಂತ್ರಿ ಆಚಾರ್ಯ ಬುಲ್ಡೋಜ್ ಮಾಡಿ ಹಠದಿಂದ ಈ ಪ್ರಾಜೆಕ್ಟ್ ತಂದಿದ್ದರು. ಉಡುಪಿ ಪರಿಸರ ಹಾಳಾದರೇನು? ಬೀಳಾದರೇನು? ತನ್ನ 'ಪರಿವಾರದ' ಹಿತವೇ ಮುಖ್ಯವೆಂಬ ನಿಲುವು ಆಚಾರ್ಯರದಾಗಿತ್ತು. ಇವತ್ತು ನಂದಿಕೂರು ಪರಿಸರ ರೌರವ ನರಕವಾಗಿದೆ; ರೈತ-ಮೀನುಗಾರರ ಜೀವನಾಧಾರ ಕಸುಬು-ಆಶ್ರಯಕ್ಕೆ ಕುತ್ತು ಬಂದಿದೆ. ಇಷ್ಟೆಲ್ಲ ಪ್ರಳಯಾತಂಕವಾದ ನಾಗಾರ್ಜುನಾ ವಿದ್ಯುತ್ ಘಟಕವನ್ನೇಕೆ ಆಚಾರ್ಯರು ತಂದರು? ಉತ್ತರ ಸಿಂಪಲ್ ಈ ಪ್ರಾಜೆಕ್ಟ್‌ನಿಂದ ಆಚಾರ್ಯರಿಗೆ ಕೋಟ್ಯಾಂತರ ರೂ. ಕಾಣಿಕೆ ಸಿಕ್ಕಿದೆ.



-ಆಚಾರ್ಯ ಪಕ್ಕಾ ಹೇತ್ಲಾಂಡಿ ಹೋಮ್ ಮಿನಿಸ್ಟರ್ ಆಗಿದ್ದರು. ಈತನ 'ಬಾಸ್' ಯಡ್ಡಿ ಸರ್ಕಾರ ಅಧಿಕಾರಕ್ಕೆ ಬಂದ ತಿಂಗಳೊಪ್ಪತ್ತಿನಲ್ಲೇ-ಅಂದರೆ ಆಚಾರ್ಯ ಗೃಹಮಂತ್ರಿಯಾದ ಹೊಸದರಲ್ಲೇ ಹಾವೇರಿಯಲ್ಲಿ ಅಮಾಯಕ ರೈತರ ಮೇಲೆ ಗೋಳಿಬಾರ್ ನಡೆದು ಸಾವು-ನೋವಾಯ್ತು. ಕೆಲವರು ಹಾಪ್ ಮರ್ಡರ್ ಆಗಿ ಒದ್ದಾಡುತ್ತಿದ್ದಾರೆ. ಇದಾಗುವಾಗ ಆಚಾರ್ಯ ಪರಮ ಪೂಜ್ಯ ಪೇಜಾವರರ ಜತೆ ಧರ್ಮದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅತ್ತ ಹಾವೇರಿ ಹೊತ್ತಿ ಉರಿಯುತ್ತಿದ್ದರೆ, ಇತ್ತ ಮಂಗಳೂರಲ್ಲಿ ಆಚಾರ್ಯ ಹಿಂದೂತ್ವ ಪಿಟೀಲು ಬಾರಿಸುತ್ತಿದ್ದರು.

-ಆಚಾರ್ಯರ ನೆರೆಮನೆ ಹುಡುಗಿ ಪದ್ಮಪ್ರಿಯಾ ಭಟ್ ಅನ್ಯಾಯವಾಗಿ ಸತ್ತಿದ್ದು ಆತ ಗೃಹಮಂತ್ರಿಯಾಗಿದ್ದಾಗಲೇ. ಆಚಾರ್ಯರ ಬಲಗೈ ಭಂಟ-ಉಡುಪಿ ಶಾಸಕ ರಘುಪತಿ ಭಟ್ ಎಂಬ ಕಚ್ಚೆಹರುಕನ ಹೆಂಡತಿಯಾಗಿದ್ದ ಪದ್ಮಪ್ರಿಯಾ ಗಂಡನ ಹಗ್ಗ ಕಡಿವ ಚಾಳಿಗೆ ರೋಸತ್ತು 'ಆತ್ಮ ಸಂಗಾತಿ'ಯನ್ನು ಅರಸುತ್ತಾ ದಿಲ್ಲಿಗೆ ಓಡಿಹೋಗಿದ್ದಳಲ್ಲವಾ? ಆಗ ಈ ಹೋಮ್ ಮಿನಿಸ್ಟರ್ ಸ್ವಲ್ಪ ಜವಾಬ್ದಾರಿಯಿಂದ ಮನುಷ್ಯತ್ವದಿಂದ ವರ್ತಿಸಿದ್ದರೆ ಆ ಹೆಣ್ಣುಮಗಳ ಜೀವ ಹೋಗುತ್ತಲೇ ಇರಲಿಲ್ಲ. ಆಚಾರ್ಯ ಭಜರಂಗಿ ಶಾಸಕ ಭಟ್ಟನ ಬೇವರ್ಸಿತನ ಅಡಗಿಸಿಡಲು ಎಡವಟ್ಟು





ಮಾಡುತ್ತಾ ಹೋದರು. ಆತನ ಪೊಲೀಸ್ ಅಧಿಕಾರಿಗಳು ಪದ್ಮಪ್ರಿಯಾಳನ್ನು ಜೀವಂತವಾಗಿ ತರುವುದಕ್ಕಿಂತ ಹೆಣವಾಗಿ ತರುವುದೇ ತಮ್ಮ 'ಡ್ಯೂಟಿ' ಎಂಬಂತೆ ವರ್ತಿಸಿದರು. ಅನ್ಯಾಯವಾಗಿ ಪದ್ಮಪ್ರಿಯಾ ಹೆಣವಾದಳು. ಆಕೆ ಆತ್ಮಹತ್ಯೆ ಮಾಡಿಕೊಂಡಳೆಂದು ಅಧಿಕೃತ ಸರ್ಕಾರಿ ಬುಲೆಟಿನ್ ಹೊರಬಿತ್ತು. ಆದರೆ ಆಕೆಯನ್ನು ಶಾಸಕ ಭಟ್, ಆತನ ಕ್ರಿಮಿನಲ್ ದೋಸ್ತ್-ಕಾರ್ಕಳದ ಮಾಜಿ ಶಾಸಕ ಸುನಿಲ್‌ಕುಮಾರ್ ಮತ್ತು ಪೊಲೀಸರು ಕೂಡಿ ಹತ್ಯೆ ಮಾಡಿದರೆಂಬ ಅನುಮಾನ ಇವತ್ತಿಗೂ ಜೀವಂತವಾಗೇ ಇದೆ. ಈ ಸಾವಿಗೆ ಗೃಹಮಂತ್ರಿ ಆಚಾರ್ಯರೇ ಹೊಣೆ ತಾನೇ?

-ಇವತ್ತು ಕರಾವಳಿ ಎಂಬುದು ಹಿಂದೂತ್ವದ ಪ್ರಯೋಗಶಾಲೆಯಾಗಿದೆ. ಇದು ಆಚಾರ್ಯರ ಗೃಹಮಂತ್ರಿತ್ವದ ಅಚ್ಚಳಿಯದ ಕೊಡುಗೆ. ಹಿಂದೂ-ಮುಸ್ಲಿಂ ಹುಡುಗಿ-ಹುಡುಗ ಮಾತಾಡಿ-ಒಡನಾಡಿದರೆ ಹಲ್ಲೆ, ಜಾನುವಾರು ಸಾಗಾಟದಾರರಿಗೆ ಬಡಿತ, ಚರ್ಚ್-ಮಸೀದಿ ಮೇಲೆ ಪೈಶಾಚಿಕ ದಾಳಿ, ಪಬ್‌ನಲ್ಲಿದ್ದ ಹುಡುಗಿಯರಿಗೆ ಒದೆತ. ಇದೆಲ್ಲ ಆಚಾರ್ಯ ಗೃಹಮಂತ್ರಿಯಾಗಿದ್ದಾಗ ಅವರ ಸಂಘಪರಿವಾರದ ವಾರಸುದಾರರು ನಿರ್ಭಯವಾಗಿ -ನಿರಂತರವಾಗಿ ಮಾಡಿದ ಸಾಹಸ. ಆಚಾರ್ಯರ ಗೃಹಮಂತ್ರಿತ್ವದಲ್ಲಿ ಕಾನೂನು ಕತ್ತೆಯಾಗಿತ್ತು! ಚೆಡ್ಡಿಗಳು ನರಭಕ್ಷಕ ರಕ್ಕಸರಾಗಿದ್ದರು.

-ಕುಕ್ಕೆ ಸುಬ್ರಹ್ಮಣ್ಯ ದೇಗುಲದಲ್ಲಿ ಬ್ರಾಹ್ಮಣರು ಹಾಸುಂಡ ಎಲೆ ಮೇಲೆ ಶೂದ್ರರು ಉರುಳಿ ಹರಕೆ ಒಪ್ಪಿಸುವುದನ್ನು ಮುಜರಾಯಿ ಮಂತ್ರಿಯಾಗಿ ಆಚಾರ್ಯ ವಿಧಾನಸಭೆಯಲ್ಲೇ ಸಮರ್ಥಿಸಿ ಇತಿಹಾಸ ನಿರ್ಮಿಸಿ ನಿರ್ಗಮಿಸಿದ್ದಾರೆ. ಮಡೆಸ್ನಾನದಂಥ ಅನಿಷ್ಟ ಪದ್ಧತಿಯಿಂದ ಚರ್ಮರೋಗ ವಾಸಿಯಾಗುತ್ತದೆಂದು ಈ ಎಂಬಿಬಿಎಸ್ ವೈದ್ಯ 'ಸಂಶೋಧನೆ' ಬೇರೆ ಮಾಡಿಟ್ಟು ಹೋಗಿದ್ದಾರೆ. ಆಚಾರ್ಯರನ್ನು ಮುಂದಿನ ಪೀಳಿಗೆ ಮರೆಯಲುಂಟಾ?

-ಆಚಾರ್ಯರ ಕೊನೆಯ ಹಿಂದೂತ್ವ -ಶೀಲ-ಸಂಸ್ಕಾರ ಉಳಿಸಿ-ಬೆಳೆಸುವ ಕಾರ್ಯಕ್ರಮವೆಂದರೆ- ಮಲ್ಪೆಯ ಸೇಂಟ್ ಮೇರಿಸ್ ದ್ವೀಪದಲ್ಲಿ ಅರೆಬೆತ್ತಲೆ-ಸಂಪೂರ್ಣ ಬೆತ್ತಲೆ ದೇಶ-ವಿದೇಶಿ ಜೋಡಿಗಳ ತಂದು ಕುಣಿಸಿ ಪ್ರವಾಸೋದ್ಯಮ ಅಭಿವೃದ್ಧಿಗೆ ಶ್ರಮಿಸಿದ್ದು! ಈ ರೇವ್ ಪಾರ್ಟಿ ಮಾಡಿ ಕೋಟಿ-ಕೋಟಿ ಬಾಚಿದ್ದು ಆಚಾರ್ಯರ ಪಟ್ಟದ ಶಿಷ್ಯ-ಶಾಸಕ ರಘುಪತಿ ಭಟ್ಟ. ಭಟ್ಟನ ರೇವ್ ಪಾರ್ಟಿಯಲ್ಲಿ ಕೋಟ್ಯಾಂತರ ರೂ. ಅಮಲು ಪದಾರ್ಥ-ಹೆಂಡದ ಸಮಾರಾಧನೆಯಾಗಿದೆ. ಓಪನ್ ಸೆಕ್ಸ್ ನಡೆದಿದೆ. ಹುಟ್ಟುಡುಗೆಯಲ್ಲಿ ಭಟ್ಟನ ಎದುರೇ ಜೋಡಿಗಳು ಓಡಾಡಿ ಸಂಘಪರಿವಾರದ ಅಸಲಿ ಸಂಸ್ಕೃತಿ ಬಿಚ್ಚಿಟ್ಟಿದ್ದಾರೆ.

ಈಗಹೇಳಿ ಆಚಾರ್ಯರ ಈ ಸಾಧನೆಯಿಂದ ಪ್ರಯೋಜನವಾಗಿರುವುದು ಸಂಘಪರಿವಾರದ ಸೋಗಲಾಡಿಗಳಿಗಾ? ಉಡುಪಿ ಸುಸಂಸ್ಕೃತ ಜನ ಸಮುದಾಯಕ್ಕಾ?

❖

ಭದ್ರಾವತಿ ಎಂ.ಪಿ.ಎಂಗೆ ಆರಗನೆಂಬ ಗೆದ್ದಲು



ಭದ್ರಾವತಿಯ ಎಂ.ಪಿ.ಎಂ ಭಯಂಕರ ಲಾಸ್‌ನಲ್ಲಿದೆ. ಬರೋಬ್ಬರಿ ಎಪ್ಪತ್ತೈದು ವರ್ಷಗಳ ಇತಿಹಾಸವಿರುವ ಕಾಗದ ಕಾರ್ಖಾನೆ ಹಾಗೂ ಶುಗರ್ ಕಂಪನಿಗಳು ಅಕ್ಷರಶಃ ಲಾಕ್‌ಔಟ್ ಆಗುವ ಹಂತಕ್ಕೆ ತಲುಪಿವೆ. ಅದನ್ನೇ ನಂಬಿಕೊಂಡಿರುವ ಐದಾರು ಸಾವಿರ ಕಾರ್ಮಿಕರು, ಹತ್ತಾರು ಸಾವಿರ ರೈತರು ಆತಂಕದಲ್ಲಿ ದಿನದೂಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಮೂಲವನ್ನು ಕೆದಕಲು ಹೊರಟರೆ ಮಿಸ್ಟರ್ ಭಸ್ಮಾಸುರ ಗೆಟಪ್ಪಿನಲ್ಲಿ ಕಾಣಿಸಿಕೊಳ್ಳೋದು ಎಂ.ಪಿ.ಎಂ ನ ಹಾಲಿ ಅಧ್ಯಕ್ಷ ಆರಗ ಜ್ಞಾನೇಂದ್ರನ ಕರೀನೆರಳು.

ಕಳೆದ ಎಂ.ಎಲ್.ಎ ಎಲೆಕ್ಷನ್‌ನಲ್ಲಿ ತೀರ್ಥಹಳ್ಳಿಯಿಂದ ಭರ್ಜರಿಯಾಗಿ ಸೋತ ಈ ಬಿಜೆಪಿ ಕ್ಯಾಂಡಿಡೇಟು 2009ರಲ್ಲಿ ಮೈಸೂರ್ ಪೇಪರ್ ಮಿಲ್‌ನ ಛೇರ್ಮನ್‌ಗಾರಿಕೆಯ ಇನ್ನಿಂಗ್ಸ್ ಆರಂಭಿಸುವ ಹೊತ್ತಿಗೆ ಕಾರ್ಖಾನೆ ಸುಸ್ಥಿತಿಯಲ್ಲೇ ಇತ್ತು. ಸಾರ್ವಜನಿಕ ಉದ್ದಿಮೆಯಾದ್ದರಿಂದ ನಿವ್ವಳ ಲಾಭ ಇರಲಿಲ್ಲವಾದರೂ ನಂಬಿದವರನ್ನು ನೆಮ್ಮದಿಯಿಂದ ಸಲಹುವಷ್ಟು ತಾಕತ್ತು ಸಂಸ್ಥೆಗಿತ್ತು. ಎಂ.ಪಿ.ಎಂ ಪೇಪರ್‌ಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲೂ ಭಾರೀ ಕಿಮ್ಮತ್ತಿದೆಯಾದ್ದರಿಂದ ಖಾಸಗಿಗಳ ಸ್ಪರ್ಧೆಯ ಹೊರತಾಗಿಯೂ ಒಳ್ಳೆಯ ಮಾರ್ಕೆಟಿಂಗ್ ನಡೆಸಿಕೊಂಡು ವರ್ಷಕ್ಕೆ ಹೆಚ್ಚೆಂದರೆ 30 ರಿಂದ 40 ಕೋಟಿ ಲಾಸ್‌ನಲ್ಲಿರುವಂತೆ ಅದರ ವ್ಯವಹಾರ ಹೊಯ್ದಾಡುತ್ತಿತ್ತು. ಆದರೆ ಆರಗ ಬೃಹತ್ ರಾಜಕೀಯ ಅಜೆಂಡಾದೊಂದಿಗೆ ಕಂಪನಿಗೆ ವಕ್ಕರಿಸಿದ್ದೇ ತಡ, ಲಾಸ್‌ನ ಗ್ರಾಫ್ ಹಿಗ್ಗಾ-ಮುಗ್ಗಾ ಏರಲು ಶುರುವಾಯಿತು. ಈತ ಅಧಿಕಾರಕ್ಕೆ ಬಂದ ಮೊದಲನೇ ವರ್ಷವೇ ಕಂಪನಿ 109 ಕೋಟಿ ಲಾಸ್ ಮಾಡಿಕೊಳ್ಳುವ ಮೂಲಕ ಪ್ರಥಮ ಶತಕದ ಸಾಧನೆಗೈದಿತ್ತು. ಇನ್ನು ಎರಡನೇ ವರ್ಷ ಈ ಲಾಸ್‌ನ ಪ್ರಮಾಣ 194.03 ಕೋಟಿಯಾಗಿದ್ದರೆ, ಮೂರನೇ ವರ್ಷದಲ್ಲಿ ಇದು 250 ಕೋಟಿಯನ್ನೂ ಮೀರುವ ಲಕ್ಷಣ ಸ್ಪಷ್ಟವಾಗಿದೆ.

ಹಾಗೆ ನೋಡಲು ಹೋದರೆ ಆರಗನ ಲೂಪ್‌ಹೋಲ್‌ಗಳು ಒಂದೆರಡಲ್ಲ, ಅಧಿಕಾರಿಗಳಿಂದ ಹಿಡಿದು ಕಾರ್ಮಿಕರವರೆಗೆ ಎಲ್ಲರ ಕೆಲಸದಲ್ಲಿ ಮೂಗು ತೂರಿಸೋದು, ಬೇಕು-ಬೇಕಂತಲೇ ಕೃತಕ ಅಭಾವ ಸೃಷ್ಟಿಸಿ ದುಬಾರಿ ಖರೀದಿ ನಡೆಸೋದು, ಕಾರ್ಮಿಕರ ನಡುವೆಯೇ ಗುಂಪುಗಾರಿಕೆ ಹುಟ್ಟುಹಾಕೋದು, ಕಾರ್ಮಿಕರನ್ನು ಕೇವಲವಾಗಿ ಕಾಣೋದು, ಕಬ್ಬು ಸುರಿದ ರೈತರಿಗೆ ಬಾಕಿ ನೀಡದೆ ಸತಾಯಿಸೋದು, ಅಕ್ರಮಗಳನ್ನು ಕೇಳಲು ಹೋದವರಿಗೆ ಸುಖಾಸುಮ್ಮನೆ ನೋಟೀಸ್ ನೀಡೋದು, ಸಸ್ಪೆಂಡ್ ಮಾಡೋದು-ಹೀಗೆ ಲಿಸ್ಟು ಬೆಳೆಯುತ್ತಲೇ ಹೋಗುತ್ತೆ.

ರಾಜ್ಯದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುವ ಈ ಎಂ.ಪಿ.ಎಂ ಕಬ್ಬು ಬೆಳೆಗಾರರು ಸೇರಿದಂತೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಸ್ರಾರು ಮಂದಿಗೆ ಆಸರೆಯಾಗಿದೆ. ಒಟ್ಟು ಐದು ಸಾವಿರಕ್ಕೂ ಹೆಚ್ಚು ಕಾಯಂ ಮತ್ತು ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇಂತಹ ಕಾರ್ಖಾನೆಯನ್ನು ಮುನ್ನಡೆಸಬೇಕೆಂದರೆ ಪರ್ಚೇಸ್, ಪ್ರೊಡಕ್ಷನ್, ಮಾರ್ಕೆಟಿಂಗ್, ಮ್ಯಾನೇಜ್‌ಮೆಂಟ್ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿ ಚಾಕಚಕ್ಯತೆ ಮತ್ತು ಅನುಭವ ಇರುವಂತವರಿಗೇ ಜವಾಬ್ದಾರಿ ವಹಿಸಬೇಕು. ಈ ಮೊದಲು ಛೇರ್ಮನ್ ಅಂಡ್ ಎಂ.ಡಿ ಹೆಸರಿನಲ್ಲಿ ಐ.ಎ.ಎಸ್ ಅಧಿಕಾರಿಗೇ ಈ ಉಸ್ತುವಾರಿ ವಹಿಸಲಾಗುತ್ತಿತ್ತು. ಅಂತಹ ಜಾಗಕ್ಕೆ ಆರಗ ಬಂದು ಕೂತದ್ದೇ ದೊಡ್ಡ ಸೋಜಿಗ. ಇನ್ನಾತನಿಗೆ ಇದ್ದ ಅರ್ಹತೆಯಾದರೂ ರಾಜಕಾರಣಿ ಎಂಬ ಪಟ್ಟ ಅಷ್ಟೆ. ನೂರಾರು ಎಕರೆ ತೋಟದಲ್ಲಿ ಅಡಿಕೆ ಬೆಳೆದು ಕೂಲಿಗಳ ಮೇಲೆ ರೇಗುತ್ತಿದ್ದ ಧಾಟಿಯಲ್ಲೇ ಇಲ್ಲಿನ ಕಾರ್ಮಿಕರ ಮೇಲೂ ದಬ್ಬಾಳಿಕೆ ನಡೆಸುವ ಆರಗನದ್ದು, ಮೂರಕ್ಕೆ ಎರಡನ್ನು ಗುಣಿಸಿ ಎರಡರಿಂದ ಭಾಗಿಸಿ ಅದಕ್ಕೆ ಒಂದನ್ನು ಕೂಡಿ ಒಂದನ್ನು ಕಳೆದರೆ ಎಷ್ಟೆಂಬಂತಹ ಪ್ರಶ್ನೆಗಳಿಗೂ ತಬ್ಬಿಬ್ಬಾಗುವಂತಹ ಮಹಾನ್ ಪ್ರತಿಭೆ!

ಈತನ ಅಧಿಕಾರಾವಧಿಯ ಲಾಸ್ ಅನ್ನು ಸ್ಕ್ಯಾನ್ ಮಾಡಿದರೆ ಹತ್ತಾರು ಹಗರಣಗಳು, ಕೀಳು ರಾಜಕಾರಣಗಳು ಕಾಣಿಸಿಕೊಳ್ಳುತ್ತವೆ. ಎಂ.ಪಿ.ಎಂ ಮೂಲತಃ ಪೇಪರ್ ಉತ್ಪಾದನಾ ಕಾರ್ಖಾನೆಯಾಗಿರುವುದರಿಂದ ಅದಕ್ಕೆ ಬೇಕಾದ ವುಡ್ ಪಲ್ಪ್ ಪೂರೈಕೆಯ ಹೊರೆಯನ್ನು ತಪ್ಪಿಸಲು ಸರ್ಕಾರ 22 ಸಾವಿರ ಹೆಕ್ಟೇರ್ ಅರಣ್ಯಭೂಮಿಯನ್ನು ಬಿಟ್ಟುಕೊಟ್ಟಿದೆ. ಅಲ್ಲಿ ಬೇಕಾದ ಮರಗಳನ್ನು ಬೆಳೆದುಕೊಳ್ಳುವ ಹಾಗೂ ಅವುಗಳನ್ನು ಬಳಸಿಕೊಳ್ಳುವ ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಖಾಸಗಿ ಕಂಪನಿಯವರಿಗೆ ಹೋಲಿಸಿದರೆ ಎಂ.ಪಿ.ಎಂಗೆ ಶೇ.50ರಷ್ಟು ಖರ್ಚು ಕಡಿಮೆಯಾಗಬೇಕಿತ್ತು, ಆದರೆ ಮುಂಚಿತವಾಗೆ ಪಲ್ಪ್ ಸಂಗ್ರಹಿಸದೆ ಕೊನೇಕ್ಷಣದಲ್ಲಿ ಕೃತಕ ಅಭಾವವನ್ನು ಸೃಷ್ಟಿಸಿ ಖಾಸಗಿಯವರಿಂದ ಒಂದಕ್ಕೆ ಮೂರು ಪಟ್ಟು ಹಣ ನೀಡಿ ಪಲ್ಪ್ ಖರೀದಿ ಮಾಡಲಾಗುತ್ತಿದೆ, ಅದೂ ಕಳಪೆ ಮಟ್ಟದ್ದು. ಇನ್ನು ಕಲ್ಲಿದ್ದಲು ಖರೀದಿಯಲ್ಲೂ ಇದೇ ಪುನರಾವರ್ತನೆ. ನಿಯಮದ ಪ್ರಕಾರ ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾದಿಂದಲೇ ಕಲ್ಲಿದ್ದಲು ಖರೀದಿಸಬೇಕು. ಆದರೆ ಅಲ್ಲೂ ಮೊದಲೇ ಆರ್ಡರ್ ಮಾಡದೆ ಕೃತಕ ಕೊರತೆ ಸೃಷ್ಟಿಸಿ ಖಾಸಗಿಯವರಿಂದ ಸಿಕ್ಕಾಪಟ್ಟೆ ದರದಲ್ಲಿ ಕೊಳ್ಳಲಾಗುತ್ತಿದೆ. ಯಂತ್ರೋಪಕರಣಗಳ ಖರೀದಿಯಲ್ಲೂ ಅಷ್ಟೆ, ಒಂದರ ಜಾಗದಲ್ಲಿ ಎರಡನ್ನು ಖರೀದಿ ಮಾಡೋದು. ಈ ಹೆಚ್ಚುವರಿ ಯಂತ್ರಗಳನ್ನೆಲ್ಲಾ ಗೋಡೌನ್‌ಗೆ ತುಂಬಿಸೋದು. ಈ ಪರಿ ಗೋಲ್‌ಮಾಲ್ ಗಿಳಿದರೆ ಉತ್ಪಾದನಾ ವೆಚ್ಚ ಹೆಚ್ಚಾಗದೆ ಇನ್ನೇನಾದೀತು. ಆದರೆ ಇದಕ್ಕೆ ಆರಗ ನೀಡುವ ವಿವರಣೆಯೇ ಬೇರೆ. ಕಾರ್ಖಾನೆಯಲ್ಲಿ ಈಗಲೂ ಹಳೇ ಕಾಲದ ಯಂತ್ರೋಪ ಕರಣಗಳೇ ಇರುವುದರಿಂದ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದೆ ಎಂಬ ಸಬೂಬು ನೀಡುತ್ತಾನೆ. ಕಂಪನಿಯ ತಾಂತ್ರಿಕ ಮಟ್ಟ ಸುಧಾರಿಸಲು ಸುಧೀರ್ ಕುಮಾರ್ ಎಂಬ ಐ.ಎ.ಎಸ್ ಅಧಿಕಾರಿ ಫಿನ್‌ಲ್ಯಾಂಡ್‌ನ ಪೇಪರ್ ಕಂಪನಿಯೊಂದರೊಟ್ಟಿಗೆ ಒಪ್ಪಂದ ಮಾಡಿಕೊಂಡು ಅದರ ಒಂದು ಘಟಕ ಇಲ್ಲಿ ಸ್ಥಾಪಿಸಲು ಯೋಜನೆ ರೂಪಿಸಿಕೊಂಡಿದ್ದರು. ಆದರೆ ಆತನನ್ನೇ ಎತ್ತಂಗಡಿ ಮಾಡಿಸುವ ಮೂಲಕ ಆರಗ ಅದಕ್ಕೂ ಅಡ್ಡಗಾಲಾಗಿದ್ದ.



ಈತನಿಗೂ ಮೊದಲು ಒಂದಿಬ್ಬರು ಅಧ್ಯಕ್ಷರು ಬಂದು ಹೋಗಿದ್ದಾರಾದರೂ ಅವರ್‍ಯಾರು ಅಧಿಕಾರಿಗಳ ಕಾರ್ಯದಲ್ಲಿ ಮೂಗು ತೂರಿಸುತ್ತಿರಲಿಲ್ಲ, ಹಾಗಾಗಿ ಕಾರ್ಖಾನೆ ಸುಸ್ಥಿತಿಯಲ್ಲಿತ್ತು. ಆದರೆ ಆರಗನಿಗೆ ತನ್ನದಲ್ಲದ ಕೆಲಸದಲ್ಲೂ ಮೂಗು ತೂರಿಸುವ ಖಯಾಲಿ ಜಾಸ್ತಿ ಇದೆ. ಐ.ಎ.ಎಸ್ ಅಧಿಕಾರಿಗಳ ಎತ್ತಂಗಡಿ ಪ್ರಸಂಗಗಳೇ ಇದಕ್ಕೆ ಸಾಕ್ಷಿ. ಈ ಮೊದಲು ಒಬ್ಬ ಅಧಿಕಾರಿ ಮಿನಿಮಮ್ ಮೂರು ವರ್ಷ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕಾರ್ಖಾನೆಯ ಕಾರ್ಯವ್ಯಾಪ್ತಿಯನ್ನು ಅರಿತು, ಕೆಲ ಉಪಯುಕ್ತ ಯೋಜನೆ ರೂಪಿಸಲು ಕನಿಷ್ಠ ಅಷ್ಟು ವರ್ಷ ಬೇಕೇಬೇಕು. ಆದರೆ ಆರಗನ ಎಂಟ್ರಿಯಾಗಿ ಮೂರು ವರ್ಷಕ್ಕೇ ಐದು ಜನ ಐ.ಎ.ಎಸ್ ಅಧಿಕಾರಿಗಳು ಖಾಲಿಯಾಗಿದ್ದಾರೆಂದರೆ ಈತನ ಹಸ್ತಕ್ಷೇಪ, ಉಪಟಳ ಅದಿನ್ನೆಂತದ್ದಿರಬೇಡ. ಈತನಿಂದ ಎಂ.ಪಿ.ಎಂ ಎಂತಹ ಅಪಖ್ಯಾತಿಗೆ ಗುರಿಯಾಗಿದೆಯೆಂದರೆ ಯಾವೊಬ್ಬ ಐ.ಎ.ಎಸ್ ಅಧಿಕಾರಿಯೂ ಆರಗನೊಟ್ಟಿಗೆ ಕೆಲಸ ಮಾಡುವ ಮನಸ್ಸು ಮಾಡುತ್ತಿಲ್ಲ, ಹಾಗಾಗಿ ವಿಧಿಯಿಲ್ಲದೆ ಐ.ಎ.ಎಸ್ ಅಧಿಕಾರಿ ಇರಬೇಕಾದ ಜಾಗಕ್ಕೆ ಐ.ಪಿ.ಎಸ್ ಅಧಿಕಾರಿ ಪದಮ್ ಕುಮಾರ್ ಗರ್ಗ್ ಎಂಬುವರನ್ನು ನೇಮಿಸಲಾಗಿದೆ.

ಇನ್ನು ಮಾರಾಟವಂತೂ ಮತ್ತಷ್ಟೂ ಅಧ್ವಾನವಾಗಿದೆ. ಉತ್ತಮ ಗುಣಮಟ್ಟದ ಕಾರಣದಿಂದ ಎಂ.ಪಿ.ಎಂ ನ ಪ್ರೊಡಕ್ಟ್‌ಗಳಿಗೆ ಭಾರೀ ಬೇಡಿಕೆ ಇದೆ. ಇತರ ಖಾಸಗಿ ಕಂಪನಿಗಳಿಗಿಂತ ರೇಟು ಕೊಂಚ ಹೆಚ್ಚಿದ್ದರೂ ಖರೀದಿ ಚೆನ್ನಾಗೇ ನಡೆಯುತ್ತಿತ್ತು, ಆದರೆ ಕಳೆದೆರಡು ವರ್ಷಗಳ ಹಿಂದೆ ಕಾಣಿಸಿಕೊಂಡ ಆರ್ಥಿಕ ಹಿಂಜರಿತ ಸ್ವಲ್ಪ ಏಟು ಕೊಟ್ಟಿತ್ತು, ನಿಷ್ಣಾತರಾಗಿದ್ದರೆ ಪರಿಸ್ಥಿತಿಯನ್ನು ಅರಿತು ಅದಕ್ಕೆ ತಕ್ಕಂತೆ ಮಾರ್ಕೆಟಿಂಗ್ ಪ್ಲ್ಯಾನ್ ಮಾಡುತ್ತಿದ್ದರು. ಆದರೆ ಆರಗನ ಅಜ್ಞಾನ ಸಾವಿರಾರು ಮೆಟ್ರಿಕ್ ಟನ್‌ಗಟ್ಟಲೆ ಪೇಪರ್ ಮತ್ತು ಸಕ್ಕರೆ ಗೋಡೌನ್‌ನಲ್ಲಿ ಕೊಳೆಯುವಂತೆ ಮಾಡಿದೆ. ಮಾರಾಟವಾಗದೆ ಉಳಿದ ದಾಸ್ತಾನನ್ನು ಶೇಖರಿಸಲು ಗೋಡೌನಿನ ಜಾಗ ಸಾಕಾಗದೆ ಸರ್ಕಾರಿ ಉಗ್ರಾಣವನ್ನೂ ಬೇಡುವಂತಾಗಿರುವುದು ಸಾಕು ಆರಗನ ಮಾರ್ಕೆಟಿಂಗ್ ಸ್ಟ್ರಾಟಜಿಯನ್ನು ಬಯಲು ಮಾಡಲು. ಹೀಗೆ ಕೂಡಿಟ್ಟ ದಾಸ್ತಾನು ಕ್ರಮೇಣ ಗುಣಮಟ್ಟ ಕಳೆದುಕೊಂಡ ನಂತರ ತೀರಾ ಕಡಿಮೆ ಬೆಲೆಗೆ ಮಾರಿ ಕಾರ್ಖಾನೆಯ ಬ್ಯಾಲೆನ್ಸ್ ಶೀಟ್‌ನಲ್ಲಿ ನಷ್ಟ ತೋರಿಸುವ ಕೆಲಸವಷ್ಟೆ ಕಳೆದ ಮೂರು ವರ್ಷದಿಂದ ನಡೆದಿರುವುದು.

ಇದನ್ನೇ ನೆಪವಾಗಿಸಿಕೊಂಡು ಕಂಪನಿಗೆ ತಮ್ಮ ಕಬ್ಬು ಸುರಿದ ರೈತರಿಗೆ ಬಾಕಿ ಹಣ ನೀಡದೆ ಸತಾಯಿಸಲಾಗುತ್ತಿದೆ. ಅಂದಾಜಿನ ಪ್ರಕಾರ ಏನಿಲ್ಲವೆಂದರೂ 20 ಕೋಟಿ ರೈತರ ಹಣವನ್ನು ಬಾಕಿ ಉಳಿಸಿಕೊಳ್ಳಲಾಗಿದೆ. ಇದರಿಂದ ಕಂಗೆಟ್ಟ ಜನ ಇತರೆ ಖಾಸಗಿ ಕಂಪನಿಗಳಿಗೆ ಕಬ್ಬು ಮಾರಿಕೊಳ್ಳಲು ಮುಂದಾಗುತ್ತಿದ್ದಾರೆ.

ಈತನ ಅಂಧಾದುಂಧಿಯನ್ನು ಯಾರೂ ವಿರೋಧಿಸುತ್ತಿಲ್ಲ ಎಂದಲ್ಲ, ಆದರೆ ಆ ಪ್ರಯತ್ನಕ್ಕೆ ಮುಂದಾದವರನ್ನು ಮಟ್ಟಹಾಕುವ ಕೀಳು ರಾಜಕೀಯ ಮಾಡಲೂ ಹೇಸದಂತಾಗಿದ್ದಾನೆ. ಇಡೀ ಕಾರ್ಮಿಕ ವರ್ಗವೇ ಆರಗನ ವಿರುದ್ಧ ತಿರುಗಿ ಬಿದ್ದು ಮುಷ್ಕರ ಹೂಡಿದರೂ ಜಪ್ಪಯ್ಯ ಎಂದಿಲ್ಲ, ಬದಲಾಗಿ ತನ್ನದೇ ಬೆಂಬಲಿಗರನ್ನು ಯೂನಿಯನ್‌ನಲ್ಲಿ ಕೂರಿಸಿ ಕಾರ್ಮಿಕರಲ್ಲಿ ಒಡಕು ತಂದಿಟ್ಟಿದ್ದಾನೆ. ನಷ್ಟದ ಬಾಬ್ತನ್ನು ತೋರಿಸಿ ಕಾರ್ಮಿಕರಿಗೆ ಸಂಬಳವನ್ನೂ ಸರಿಯಾಗಿ ನೀಡುತ್ತಿಲ್ಲ, ಒಂದು ವರ್ಷದ ಬೋನಸ್‌ಗೂ ಕತ್ತರಿ ಬಿದ್ದಿದೆ. ಈತನಿಂದ ಸಾಕುಸಾಕಾಗಿ ಹೋಗಿರುವ ಕಾರ್ಮಿಕರು ಕಳೆದ ಡಿಸೆಂಬರ್ 15 ರಂದು ಬೆಂಗಳೂರಿಗೆ ಬೃಹತ್ ಜಾಥಾದಲ್ಲಿ ಬಂದು ಮುಖ್ಯಮಂತ್ರಿಗೆ ಈತನನ್ನು ಮೊದಲು ಅಲ್ಲಿಂದ ಒದ್ದೋಡಿಸಿ ಎಂಬ ಮನವಿ ಕೊಟ್ಟಿದ್ದರು. ಆಶ್ವಾಸನೆಯ ಹೊರತು ಅವರಿಗೆ ಮತ್ತಾವ ಲಾಭವೂ ಆಗಿಲ್ಲ, ಅವತ್ತು ಅವರೆಲ್ಲ ತಮ್ಮ ಹಕ್ಕಿನ ಗಳಿಕೆ ರಜೆಯನ್ನು ಹಾಕಿ ಬಂದಿದ್ದರಾದರು ಉದ್ದೇಶಪೂರ್ವಕವಾಗಿ ಆ ಎರಡು ದಿನದ ಸಂಬಳವನ್ನು ಕಟ್ ಮಾಡಿ ತನಗ್ಯಾರ ಲಗಾಮೂ ಇಲ್ಲವೆಂಬಂತೆ ವರ್ತಿಸುತ್ತಿದ್ದಾನೆ.

ಕಾರ್ಮಿಕರ ಹೋರಾಟವನ್ನು ತುಳಿಯುವ ಉದ್ದೇಶದಿಂದಲೇ ಅನಗತ್ಯ ನಿಯಮಗಳನ್ನೆಲ್ಲಾ ಜಾರಿಗೆ ತಂದು, ಉಲ್ಲಂಘಿಸಿದವರಿಗೆ ಕಾನೂನು ಕ್ರಮದ ಬೆದರಿಕೆ ಹಾಕುವ ಪ್ರಯತ್ನವನ್ನೂ ಮಾಡುತ್ತಿದ್ದಾನೆ. ಡಿಸೆಂಬರ್ 15ರ ಕಾಯಂ ಉದ್ಯೋಗಿಗಳ ಜಾಥಾಕ್ಕೆ ಗುತ್ತಿಗೆ ನೌಕರರೂ ಬೆಂಬಲ ಸೂಚಿಸಲಿದ್ದಾರೆ ಎಂಬ ಸುಳಿವು ಸಿಗುತ್ತಿದ್ದಂತೆ, ಅಷ್ಟೂ ದಿನ ಮೂಲೆ ಗುಂಪಾಗಿದ್ದ ಪಂಚ್ ನಿಯಮವನ್ನು ಅವರಿಗೂ ಕಡ್ಡಾಯ ಮಾಡಿ ಆದೇಶಿಸಿದ್ದ. ಇದನ್ನು ವಿರೋಧಿಸಿದ ಕಾರಣಕ್ಕೆ ಪೊಲೀಸರನ್ನು ತಂದು ನಿಲ್ಲಿಸಿ ಗುತ್ತಿಗೆ ಕಾರ್ಮಿಕರನ್ನು ಕಾರ್ಖಾನೆಯಿಂದ ಹೊರಗಿರಿಸಿದ್ದ. ಅವತ್ತು ಹೇಗೋ ಅಧಿಕಾರಿಗಳು ಆಡಳಿತಕ್ಕೆ ಹೊರೆಯಾಗದಂತೆ ಅವರ ಕೆಲವು ಬೇಡಿಕೆ ಈಡೇರಿಸಿ ಎಲ್ಲಾ ಸರಿಮಾಡುವ ಸಮಯಕ್ಕೆ ಬೆಂಗಳೂರಿನಿಂದ ಫೋನಾಯಿಸಿದ ಆರಗ ಯಾವ ಕಾರಣಕ್ಕೂ ಒಂದೇ ಒಂದು ಬೇಡಿಕೆಯನ್ನೂ ಈಡೇರಿಸಬೇಡಿ, ಒಪ್ಪದಿದ್ದಲ್ಲಿ ಯಾರನ್ನೂ ಒಳಗಡೆ ಬಿಡದೆ ಹೊರಗೇ ನಿಲ್ಲಿಸಿ ಎಂಬ ಫರ್ಮಾನು ಕಳಿಸಿದ್ದ. ಈಗಾಗಲೇ ಲಾಸ್‌ನಲ್ಲಿರುವ ಕಂಪನಿಯ ಒಂದು ದಿನದ ಪ್ರೊಡಕ್ಷನ್ ನಿಂತರೆ ಅದೆಷ್ಟು ನಷ್ಟವಾದೀತು ಎಂಬ ಪ್ರಜ್ಞೆ ಇದ್ದ ಜವಾಬ್ದಾರಿಯುತ ಮನುಷ್ಯ ಮಾಡಲೇ ಬಾರದ ಕೆಲಸಕ್ಕೆ ಬೇಜವಾಬ್ದಾರಿಯಾಗಿ ಆದೇಶಿಸಿದ್ದ.

ಇಂತಹ ಕಾರ್ಮಿಕ ವಿರೋಧಿ ಹಾಗೂ ಆಡಳಿತ ಹಸ್ತಕ್ಷೇಪ ಧೋರಣೆ ಯಿಂದ ಆರಗ ಎಂ.ಪಿ.ಎಂಗೆ ಮೆತ್ತಿದ ಗೆದ್ದಲಿನಂತಾಗಿದ್ದಾನೆ. ಈತನ ಉದ್ದೇಶ ಪೂರ್ವಕ ವರ್ತನೆ ನೋಡಿದರೆ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ಬೇಕಾದ ನಷ್ಟದ ಪರಿಸರ ಸೃಷ್ಟಿಸುವ ಡೀಲನ್ನು ಸರ್ಕಾರವೇ ಈ ಆರಗನಿಗೆ ನೀಡಿದಂತಿದೆ. ಇನ್ನು ಕೈಗಾರಿಕಾ ಸಚಿವ ನಿರಾಣಿಯಂತು ತನಗೆ ಕಾರ್ಖಾನೆ ಸಂಕಷ್ಟದಲ್ಲಿರುವ ವಿಷಯವೇ ಗೊತ್ತಿಲ್ಲವೆಂದು ಪುಂಗಿ ಊದುತ್ತಾನೆ. ಆದಷ್ಟು ಬೇಗ ಎಂ.ಪಿ.ಎಂ ಆವರಣದಲ್ಲಿ ಆರಗನಿಗೆ ಅದ್ದೂರಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲು ಬೇಕಾದ ಅಗತ್ಯ ಕಾರ್ಯಕ್ಕೆ ಸರ್ಕಾರ ಮುಂದಾಗದಿದ್ದಲ್ಲಿ ಸಾವಿರಾರು ಕುಟುಂಬಗಳು ಬೀದಿಗೆ ಬೀಳೋದು ಗ್ಯಾರಂಟಿ.

1 ಲಂಚ್, 2 ಪಂಚ್‌ಗೆ ಬರ್‍ತಾರೆ!

ಆರಗ ತನ್ನ ಕಾರ್ಮಿಕರ ಬಗ್ಗೆ ಅದೆಂತಹ ಕೀಳು ಭಾವನೆ ಹೊಂದಿದ್ದಾನೆಂಬುದಕ್ಕೆ ಇದೊಂದು ಮಾತು ಸಾಕು. ಅವಕಾಶ ಸಿಕ್ಕ ಕಡೆಯಲ್ಲೆಲ್ಲ 'ಕಾರ್ಮಿಕರು ಎರಡು ಪಂಚ್ (ಎಂಟರ್, ಎಕ್ಸಿಟ್) ಮತ್ತು 1 ಲಂಚ್‌ಗೋಸ್ಕರ ಮಾತ್ರ ಬರುತ್ತಾರೆಯೇ ಹೊರತು ಕೆಲಸ ಮಾಡೋದಿಕ್ಕಲ್ಲ' ಎಂದೇಳುತ್ತಾನೆ. ಇಂತಹ ಧೋರಣೆಯಿಂದಾಗಿಯೇ ಆತ ತೊಲಗಿದರೆ ಸಾಕೆಂಬ ಹಾರೈಕೆಯಲ್ಲಿದ್ದಾರೆ. ಕಾರ್ಮಿಕರು. ರಾಜಧಾನಿಗೆ ಒಗ್ಗೂಡಿ ಬಂದು ಈತನನ್ನು ಹೊರಕಳಿಸಿ ಕಾರ್ಖಾನೆ ಉಳಿಸಿ ಎಂಬುದಾಗಿ ಕೂಗುತ್ತಾರೆಂದರೆ ಈತನ ಪಾಪ್ಯುಲಾರಿಟಿ, ಕಾರ್ಯವೈಖರಿ ಹೇಗಿರಬೇಡ. ಅದಕ್ಕೆಂದೇ ಗಣರಾಜ್ಯೋತ್ಸವದ ದಿನ ಮತ್ತು ವನಿತಾ ವಜ್ರಮಹೋತ್ಸವ ಉದ್ಘಾಟನೆಯ ದಿನ ಕಾರ್ಮಿಕರೆಲ್ಲ ಆರಗನ ಭಾಷಣವನ್ನು ಧಿಕ್ಕರಿಸಿ ನಡೆದಿದ್ದರು. ಬೇಕು ಬೇಕಂತಲೇ ತನ್ನ ವಿರೋಧಿಗಳನ್ನು ಒಂದು ವಿಭಾಗದಿಂದ ಮತ್ತೊಂದಕ್ಕೆ ಎತ್ತಂಗಡಿ ಮಾಡೋದು, ಸಣ್ಣ ಸಣ್ಣ ವಿಷಯಕ್ಕೂ ನೋಟೀಸ್ ನೀಡೋದು, ಸಂಬಳ ಕಟ್ ಮಾಡೋದು ಇಂತವೇ ಟ್ರಿಕ್‌ಗಳ ಮೂಲಕ ಅವರನ್ನು ಬೆದರಿಸಲು ನೋಡುತ್ತಿದ್ದಾನೆ.

ಅನುಕಂಪಕ್ಕೂ ಅರ್ಧಚಂದ್ರ


ಕಳೆದ ಡಿಸೆಂಬರ್‌ನ ಗುತ್ತಿಗೆ ಕಾರ್ಮಿಕರ ಮುಷ್ಕರವನ್ನು ಆರಗ ನಿರ್ವಹಿಸಿದ ಬಗೆ ಮತ್ತೊಂದು ಯಡವಟ್ಟಿಗೆ ಕಾರಣವಾಗಿದೆ. ದುರುದ್ದೇಶಪ್ರೇರಿತ ಪಂಚ್ ನಿಯಮವನ್ನು ವಿರೋಧಿಸಿ ಅವರೆಲ್ಲ ಬಲವಂತವಾಗಿ ಕಾರ್ಖಾನೆಯಿಂದ ಹೊರ ದಬ್ಬಲ್ಪಟ್ಟಾಗ ಮೃತಕಾರ್ಮಿಕರ ಮನೆಗೆ ಫೋನ್ ಮಾಡಿ ತಮ್ಮ ತಂದೆಯ ಕೆಲಸವನ್ನು ಅನುಕಂಪಾಧಾರಿತ ಯೋಜನೆಯಲ್ಲಿ ನೀಡಿರುವುದಾಗಿ ಹೇಳಿಸಿ ಅವರ ಅವಲಂಬಿತರನ್ನು ಕರೆಸಿಕೊಂಡು ಕೆಲಸಕ್ಕೆ ನೇಮಿಸಿದ್ದ. ಇದರ ಕಲ್ಪನೆಯೇ ಇರದೆ ಬೇರೆಲ್ಲೋ ಉದ್ಯೋಗ ಮಾಡಿಕೊಂಡಿದ್ದ ಅವರೆಲ್ಲ ಆರಗನನ್ನು ನಂಬಿ ಅಲ್ಲಿಯ ಕೆಲಸಕ್ಕೆ ರಾಜೀನಾಮೆ ಗೀಚಿ ಬಂದಿದ್ದರು. ಆ ಮೂಲಕ ಗುತ್ತಿಗೆ ಕಾರ್ಮಿಕರಿಗೆ ಸಡ್ಡು ಹೊಡೆಯುವ ಪ್ರತಿಷ್ಠೆ ತೋರಿದ್ದ. ಕಾರ್ಖಾನೆಯ ಹಿತಾಸಕ್ತಿಯ ದೃಷ್ಟಿಯಿಂದ ಗುತ್ತಿಗೆ ನೌಕರರು ಆಶ್ವಾಸನೆಯನ್ನು ಮನ್ನಿಸಿ ಕೆಲಸಕ್ಕೆ ವಾಪಾಸ್ಸಾಗುತ್ತಿದ್ದಂತೆ ಅನುಕಂಪದ ಆಸೆಗೆ ಬಂದಿದ್ದವರನ್ನೆಲ್ಲಾ ಕಿತ್ತು ಬಿಸಾಕಿದ್ದಾನೆ. ಈತನ ಪ್ರತಿಷ್ಠೆಗೆ ಎಲ್ಲಿಯೋ ಬದುಕು ಕಂಡುಕೊಂಡಿದ್ದವರು ಬಲಿಯಾಗಬೇಕಿದೆ. ಇದರ ಬಗ್ಗೆ ಕೇಳಿದರೆ 'ಇಲ್ಲಿರುವವರಿಗೇ ಕೆಲಸ ಇಲ್ಲ, ನಿಮಗೆಲ್ಲಿಂದ ತರಲಿ' ಎಂದು ಬೇಜವಾಬ್ದಾರಿಯಾಗಿ ತೊದಲುತ್ತಿದ್ದಾನೆ. ಕಾರ್ಖಾನೆ ಮುಂದೆ ಉಪವಾಸ ಕೂತ ಅವರಿಗೂ ಆಶ್ವಾಸನೆ ನೀಡಿ ಕಳಿಸಲಾಗಿದೆಯಾದರೂ, ಸುಖಾಸುಮ್ಮನೆ ಅಭದ್ರತೆ ತಂದಿಟ್ಟ ಆರಗನಿಗೆ ಹಿಡಿ ಶಾಪ ಹಾಕಿದ್ದು ಮಾತ್ರ ಸುಳ್ಳಲ್ಲ.

ಸಂತೋಷ್ ಹೆಗ್ಡೆಯವರಿಗೆ ಜಿಂದಾಲ್ ಗಾಳ

ಕರ್ನಾಟಕದ ಮಾಜಿ ಲೋಕಾಯುಕ್ತ ನ್ಯಾ.ಸಂತೋಷ್‌ಹೆಗ್ಡೆಯವರು ಭ್ರಷ್ಟಾಚಾರದ ವಿರುದ್ಧ ತಾಳಿದ ಕಠಿಣ ನಿಲುವಿನಿಂದಾಗಿ ರಾಜ್ಯದ ರಾಜಕಾರಣದಲ್ಲಿ ಭಾರೀ ಬಿರುಗಾಳಿಯೇ ಎದ್ದುಬಿಟ್ಟಿತು. ತಮಗಿನ್ನಾರು ಸಾಟಿಯೆಂದು ಮೆರೆಯುತ್ತಿದ್ದ ಮುಖ್ಯಮಂತ್ರಿ ಹಾಗೂ ಕೆಲವು ಮಂತ್ರಿಗಳು ಅಧಿಕಾರ ಕಳೆದುಕೊಂಡಿದ್ದು ಮಾತ್ರವಲ್ಲದೆ, ಆ ಪರಮಭ್ರಷ್ಟರು ಜೈಲುಪಾಲಾದರು. ಈ ಎಲ್ಲಾ ಬೆಳವಣಿಗೆಗಳಿಂದ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ವಿಶ್ವಾಸವನ್ನೇ ಕಳೆದುಕೊಳ್ಳುವ ಹಂತದಲ್ಲಿದ್ದ ಕೋಟ್ಯಾನುಕೋಟಿ ಜನರ ಮನದಲ್ಲಿ ಮತ್ತೆ ಭರವಸೆಯ ಕಿರಣ ಮೂಡಿದ್ದು ಸುಳ್ಳಲ್ಲ. ಈ ಎಲ್ಲಾ ಕಾರಣಗಳಿಗಾಗಿ ಸಂತೋಷ್‌ಹೆಗ್ಡೆಯವರು ನಾಡಿನ ಕಣ್ಮಣಿಯಾಗಿದ್ದಾರೆ.


ಇಂಥ ಸಂತೋಷ್‌ಹೆಗ್ಡೆ ಹಾಗೂ ಮಾಜಿ ರಾಷ್ಟ್ರಪತಿ ಅಬ್ದುಕಲಾಂ ಅವರಿಗೆ ಇತ್ತೀಚೆಗೆ ಪ್ರಶಸ್ತಿಯೊಂದನ್ನು ಘೋಷಿಸಲಾಗಿದೆ. ಬರೀ ಪ್ರಶಸ್ತಿ ಮಾತ್ರವಲ್ಲ ಅದರೊಂದಿಗೆ ಬರೋಬ್ಬರಿ ಒಂದು ಕೋಟಿ ರೂಪಾಯಿ ಮೊತ್ತದ ಬಹುಮಾನದ ಹಣವನ್ನು ಘೋಷಿಸಲಾಗಿದೆ. ಇಂಥಾ ಭಾರೀ ಪ್ರಶಸ್ತಿಯನ್ನು ಘೋಷಿಸಿದ್ದು ಯಾರಿರಬಹುದು? ಒಂದು ಕೋಟಿ ರೂಪಾಯಿಗಳನ್ನು ಅಷ್ಟು ಧಾರಾಳವಾಗಿ ಕೊಡುತ್ತಿರುವುದರ ಹಿನ್ನೆಲೆ ಏನಿರಬಹುದು?

ಈ ಪ್ರಶಸ್ತಿಯನ್ನು ಸಾವಿರಾರು ಕೋಟಿಗಳ ಜಿಂದಾಲ್ ಸಮೂಹದ ಒಡೆಯ ಡಾ.ಸೀತಾರಾಮ್ ಜಿಂದಾಲ್ ಅವರೇ ಖುದ್ದಾಗಿ ಕೊಡುತ್ತಿದ್ದಾರೆ. ಅವರದೇ ನೇತೃತ್ವದ 'ಸೀತಾರಾಮ್ ಜಿಂದಾಲ್ ಪ್ರತಿಷ್ಠಾನ'ವು ೨೦೧೧ರ ಸಾಲಿನ 'ಎಸ್.ಆರ್.ಜಿಂದಾಲ್ ಪ್ರಶಸ್ತಿ'ಯನ್ನು ಇತ್ತೀಚೆಗೆ ಘೋಷಿಸಿದೆ. ಆ ಸಂಸ್ಥೆಯ ಪ್ರಕಾರ ಸರಳ ನಡೆ, ನುಡಿ, ಮತ್ತು ವ್ಯಕ್ತಿತ್ವದಿಂದ ಜನಾನುರಾಗಿಯಾಗಿರುವ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗಾಗಿ ಹಾಗೂ ಭ್ರಷ್ಟರಿಗೆ ಸಿಂಹಸ್ವಪ್ನರಾದ ಕರ್ನಾಟಕದ ಮಾಜಿ ಲೋಕಾಯುಕ್ತ, ನ್ಯಾಯಮೂರ್ತಿ ಎನ್.ಸಂತೋಷಹೆಗ್ಡೆಯವರು ಸಮಾಜಸೇವೆಗೆ ಅತ್ಯುತ್ತಮ ಕೊಡುಗೆ ನೀಡಿದ ಕಾರಣಕ್ಕಾಗಿ ಈ ಇಬ್ಬರನ್ನು ಒಂದು ಕೋಟಿ ರೂಪಾಯಿ ಮೊತ್ತದ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ! ಇದೇ ಫೆಬ್ರವರಿ ೨೩ರಂದು ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.




ಈ ವಿದ್ಯಮಾನ ಹಲವು ಅನುಮಾನಗಳನ್ನು ಹುಟ್ಟುಹಾಕುವುದು ಸಹಜ. ಹಾಗೆ ಮಾನ್ಯ ಸಂತೋಷಹೆಗ್ಡೆಯವರಿಗೂ ಅನುಮಾನ ಉಂಟಾಯಿತು. ಈ ಜಿಂದಾಲ್ ಒಂದುವೇಳೆ ಬಳ್ಳಾರಿಯಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದ ಕಂಪನಿಯಾಗಿದ್ದರೆ ಯಾವ ಕಾರಣಕ್ಕೂ ಅವರಿಂದ ಪ್ರಶಸ್ತಿ ಸ್ವೀಕರಿಸಬಾರದೆಂದು ತೀರ್ಮಾನಿಸಿದರು. ಹಾಗಾಗಿ ಜಿಂದಾಲ್ ಪ್ರತಿಷ್ಠನವು ಬಳ್ಳಾರಿಯ ಜಿಂದಾಲ್ ಗಣಿ ಕಂಪನಿಯೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿಲ್ಲವೆಂಬ ಲಿಖಿತ ಸ್ಪಷ್ಟನೆಯನ್ನು ಕೊಡಬೇಕೆಂದು ಆಗ್ರಹಿಸಿದರು. ಸಂತೋಷ್ ಹೆಗ್ಡೆಯವರಿಗೆ ಸ್ಪಷ್ಟನೆ ನೀಡಿದ ಪ್ರತಿಷ್ಠಾನದ ವಕ್ತಾರರು ಹೇಳಿದ್ದೇನೆಂದರೆ "ಜೆಎಸ್‌ಡಬ್ಲ್ಯೂ ಕಂಪನಿ ಸಂಸ್ಥಾಪಕ ಓ.ಪಿ.ಜಿಂದಾಲ್ ಮತ್ತು ಸೀತಾರಾಮ್ ಜಿಂದಾಲ್ ದೂರದ ಸಂಬಂಧಿಗಳು. ಆದರೆ ಅವರ ನಡುವೆಯಾಗಲೀ, ಅವರ ಒಡೆತನದ ಕಂಪನಿಗಳ ನಡುವೆಯಾಗಲೀ ಯಾವುದೇ ವ್ಯವಹಾರಿಕ ಸಂಬಂಧವಿಲ್ಲ"ವೆಂದು. ಈ ಸ್ಪಷ್ಟನೆಯಿಂದ ಸಂತುಷ್ಟರಾದ ಹೆಗ್ಡೆಯವರು ತಮ್ಮ ಸಮ್ಮತಿ ಸೂಚಿಸಿದ್ದಾರೆ.

ಅಷ್ಟು ಮಾತ್ರವಲ್ಲದೆ ಪ್ರಶಸ್ತಿಯಿಂದ ಬರುವ ಒಂದು ಕೋಟಿ ಮೊತ್ತವನ್ನು 'ಅಖಿಲ ಭಾರತ ಸೈನಿಕ ಕಲ್ಯಾಣ ನಿಧಿ'ಗೆ ನೀಡುವುದಾಗಿಯೂ ಘೋಷಿಸಿದ್ದಾರೆ. ಇದು ಅವರ ದೊಡ್ಡ ಗುಣವೇ ಸರಿ. ಸಂತೋಷ್‌ಹೆಗ್ಡೆಯವರ ಈ ನಡವಳಿಕೆ ಅವರ ಅಭಿಮಾನಿಗಳ ಗೌರವಕ್ಕೆ ಪಾತ್ರವಾಗಿದೆ.



ಇದೆಲ್ಲಾ ಸರಿ. ಆದರೆ ಕೆಲವು ಮೂಲಭೂತ ಪ್ರಶ್ನೆಗಳು ಹಾಗೆ ಉತ್ತರವಿಲ್ಲದೆ ಎದ್ದು ನಿಲ್ಲುತ್ತಿವೆ.

ಜಿಂದಾಲ್ ಹೆಸರನ್ನು ಹೊಂದಿರುವ ಈ ಕಂಪನಿಗಳು ಪರಸ್ಪರ ವ್ಯಾವಹಾರಿಕ ಸಂಬಂಧವಿಲ್ಲದ ವಿಭಿನ್ನ ಕಂಪನಿಗಳೇ ಇರಬಹುದು. ನಮಗೆ ಅವರ ರಕ್ತಸಂಬಂಧ ಅಥವಾ ವ್ಯಾವಹಾರಿಕ ಸಂಬಂಧ ಅಷ್ಟು ಮುಖ್ಯ ಅಲ್ಲವೇಅಲ್ಲ. ಆದರೆ ಈ 'ಸೇವಾ ಕಾರ್ಯ'ಕ್ಕೆ ಮುಂದಾಗಿರುವ ಕಂಪನಿಯ ಪೂರ್ವಾಪರವೇನು? ಇವರು ಗಳಿಸಿರುವ ಹಾಗೂ ಗಳಿಸುತ್ತಿರುವ ಸಾವಿರಾರು ಕೋಟಿಗಳು ಕಾನೂನುಬದ್ಧವಾಗಿ, ಸಂವಿಧಾನಬದ್ಧವಾಗಿದೆಯೆ? ಅಥವಾ ಈ ಕಂಪನಿಯ ಚರಿತ್ರೆಯಲ್ಲಿ ಗಣಿಗಾರಿಕೆ, ಪರಿಸರ ನಾಶ, ಸಾರ್ವಜನಿಕ ಸಂಪನ್ಮೂಲದ ಲೂಟಿಯಂಥ ಪಾಶವೀ ಕೃತ್ಯಗಳಿವೆಯೆ? ಒಟ್ಟಾರೆಯಾಗಿ ಇವರು ಜನಪರವಾದ ವಿಭಿನ್ನ ಮೌಲ್ಯಗಳನ್ನು ಆಚರಿಸುತ್ತಿರುವ 'ಸಭ್ಯ ಕಂಪನಿ'ಯೇ? ಮೌಲ್ಯಾಧಾರಿತ ಸಾರ್ವಜನಿಕ ಜೀವನದಲ್ಲಿರುವ, ಲಕ್ಷಾಂತರ ಅಭಿಮಾನಿಗಳ ಗೌರವಕ್ಕೆ ಪಾತ್ರರಾಗಿರುವ ಹೆಗ್ಡೆಯಂಥವರಿಗೆ ಇಂಥ ಪ್ರಶ್ನೆಗಳು ಬಹಳ ಮುಖ್ಯವಾಗುತ್ತವೆ. ಯಾಕೆಂದರೆ ಬಳ್ಳಾರಿಯ ಜಿಂದಾಲ್ ಗಣಿ ಕಂಪನಿಯೊಂದಿಗೆ ಸಂತೋಷ್ ಹೆಗ್ಡೆಯವರಿಗೆ ಯಾವ ರೀತಿಯ ವೈಯುಕ್ತಿಕ ವಿರೋಧವಾಗಲಿ ಅಥವಾ ದ್ವೇಷವಾಗಲಿ ಇರಲಿಲ್ಲ, ಬದಲಿಗೆ ಅದು ಮೌಲ್ಯಯುತವಾದ ಸಾಮಾಜಿಕ ಕಾರಣಕ್ಕೆ ಸಂಬಂಧಿಸಿದ್ದಾಗಿತ್ತು.



ಸೀತಾರಾಮ ಜಿಂದಾಲ್

ಈ ಹಿನ್ನೆಲೆಯಲ್ಲಿ ಸೀತಾರಾಮ್ ಜಿಂದಾಲ್ ಅವರ ಚಾರಿತ್ರಿಕ ನಡವಳಿಕೆಗಳ ಬಗ್ಗೆ ಸ್ವಲ್ಪ ಕೆದಕಿದರೆ ಹಲವು ನಾಚಿಕೆಗೇಡಿನ ಸಂಗತಿಗಳು ಹೊರಬೀಳುತ್ತವೆ. ಇಲ್ಲಿಗೆ ಸುಮಾರು ಹತ್ತು ವರ್ಷಗಳ ಹಿಂದಿನ ಮಾತು. ನೆರೆಯ ಗೋವಾದಲ್ಲಿ ಇದೇ ಸೀತಾರಾಮ್ ಜಿಂದಾಲ್ ಸಮೂಹದ ಕಂಪನಿಯಿಂದ ಪರಿಸರ ಹಾಗೂ ಜನರ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮ ಬೀರಿತ್ತು. ಆ ಕಂಪನಿಯ ಹೆಸರಿನೊಂದಿಗೆ ಜಿಂದಾಲ್ ಎಂಬ ಹೆಸರು ಅಂಟಿಕೊಂಡಿರಲಿಲ್ಲ. ವಿದೇಶಿ ಕಂಪನಿಯೊಂದರ ಸಹಯೋಗದಲ್ಲಿ ಪ್ರಾರಂಭವಾದ ಈ ಕಂಪನಿಯ ಹೆಸರು ಮೆಟಾ ಸ್ಟ್ರಿಪ್ಸ್ ಕಂಪನಿ ಲಿಮಿಟೆಡ್. ಇದರ ಆಧಿಪತ್ಯವನ್ನು ನಮ್ಮ ನೆಚ್ಚಿನ 'ಸೇವಾಕರ್ತ' ಸೀತಾರಾಮ್ ಜಿಂದಾಲ್‌ರ ಸ್ವಂತ ಅಳಿಯ ಸುಶೀಲ್ ಖೇತಾನ್. ಅದರ ಹೆಚ್ಚಿನ ಅಧಿಕಾರಿಗಳು ಇದೇ ಜಿಂದಾಲ್ ಸಮೂಹದವರೇ. ತಾಮ್ರ ಮತ್ತಿತರ ಲೋಹದ ಹಾಳೆಗಳನ್ನು ತಯಾರಿಸಲೆಂದು ಗೋವಾದ ವಾಸ್ಕೋ ಬಳಿ ಸ್ಥಾಪಿಸಲಾದ ಈ ಉದ್ಯಮಕ್ಕೆ ಬರೋಬ್ಬರಿ ೨೫೦೦೦ ಕೋಟಿ ರೂಪಾಯಿಗಳಷ್ಟು ಭಾರೀ ಬಂಡವಾಳವನ್ನು ಹೂಡಲಾಗಿತ್ತು. ಈ ಕಂಪನಿಯ ಘೋಷವಾಕ್ಯವೇ ಹೇಳುತ್ತಿದ್ದಂತೆ ಇದು ೧೦೦? ರಫ್ತು ಆಧಾರಿತ ಉದ್ಯಮ!

ಆದರೆ ಸುತ್ತಮುತ್ತಲ ಜನರು ಈ ಸಂಸ್ಥೆಯಿಂದಾಗುತ್ತಿರುವ ಅನಾಹುತಗಳನ್ನು ನೋಡುತ್ತಾ ಕೂರಲಿಲ್ಲ, ಕಾನೂನು ಹೋರಾಟ ಮಾತ್ರವಲ್ಲದೆ, ಕಂಪನಿಯ ಪರ ವಕಾಲತ್ತು ವಹಿಸಿದ್ದ ಅಲ್ಲಿನ ಸರ್ಕಾರದ ವಿರುದ್ಧ ತೀವ್ರ ರೀತಿಯ ಪ್ರತಿಭಟನೆಗೆ ಇಳಿದರು. ೨೦೦೦ದ ಏಪ್ರಿಲ್ ತಿಂಗಳಿನಲ್ಲಿ ಇಡೀ ಗೋವಾ ಹತ್ತಿ ಉರಿಯಿತು. ಕೆಲವು ಸಂಘ ಸಂಸ್ಥೆಗಳು ಆಮರಣಾಂತ ಉಪವಾಸ ಕುಳಿತರು. ಹಲವು ಸರ್ಕಾರಿ ಕಟ್ಟಡಗಳು, ಬಸ್ಸುಗಳು ಜನರ ಆಕ್ರೋಶಕ್ಕೆ ತುತ್ತಾದವು. ರಾಜ್ಯಾದ್ಯಂತ ೧೪೪ ನೆ ಸೆಕ್ಷನ್ ಜಾರಿ ಮಾಡಲಾಯಿತು. ಆಗ ನಡೆದ ಗೋಲೀಬಾರ್‌ನಲ್ಲಿ ಹಲವರು ಗಾಯಗೊಂಡರು. ಶಾಂತಿಯುತ, ಪ್ರವಾಸಿಗರ ಸ್ವರ್ಗ ಅಕ್ಷರಶಃ ಹತ್ತಿ ಉರಿಯಿತು. ಜನರ ಆಕ್ರೋಶವನ್ನು ನಿಯಂತ್ರಿಸಲು ಸ್ಥಳೀಯ ಪೊಲೀಸ್ ಪಡೆ ಸಾಕಾಗದೆ, ಕರ್ನಾಟಕದಿಂದ ಹೆಚ್ಚುವರಿ ಪೊಲೀಸರನ್ನು ಹಾಗೂ ಕೇಂದ್ರದಿಂದ ಮೀಸಲು ಪಡೆಗಳನ್ನು ಕರೆಸಿಕೊಳ್ಳಲಾಯಿತು.

ಇಷ್ಟೆಲ್ಲಾ ಇಲ್ಲಿ ವಿವರಿಸುತ್ತಿರುವ ಕಾರಣವೆಂದರೆ ಇದೇ ಜಿಂದಾಲ್ ಸಮೂಹದ ಕಂಪನಿ ತನ್ನ ದುರ್ಲಾಭದ ಆಸೆಗಾಗಿ ವಾಸ್ಕೊ ಬಳಿಯ ಹತ್ತಾರು ಹಳ್ಳಿಗರ ಪಾಲಿಗೆ ನರಕವನ್ನೇ ಸೃಷ್ಟಿಸಿತ್ತು, ನಾನಾ ರೀತಿಯಲ್ಲಿ ಕಾನೂನುಗಳನ್ನು ಗಾಳಿಗೆ ತೂರಲಾಗಿತ್ತೆಂದು ನಂತರದ ಅಧ್ಯಯನದ ವರದಿಗಳು ಸಾರಿ ಹೇಳಿದವು. ಇಡೀ ರಾಜ್ಯವೇ ಹೀಗೆ ಹತ್ತಿ ಉರಿಯುತ್ತಿದ್ದಾಗ ಈ ದಾನಶೂರ ಜಿಂದಾಲ್ ಮಹಾಶಯರು ಕೋಮು ಪ್ರಚೋದಕ ಹೇಳಿಕೆಯೊಂದನ್ನು ನೀಡಿದರು. ಅದೇನೆಂದರೆ ತಮ್ಮ ಕಂಪನಿಯ ವಿರುದ್ಧದ ಇಷ್ಟೆಲ್ಲಾ ಹೋರಾಟಕ್ಕೆ ಅಲ್ಲಿನ ಚರ್ಚುಗಳೇ ಕಾರಣವೆಂದೂ, ಆ ಚರ್ಚುಗಳು ರಾಜ್ಯದ ಅಭಿವೃದ್ಧಿಗೆ ಕಂಟಕವೆಂದೂ ಅಪ್ಪಣೆ ಕೊಡಿಸಿದರು. ಈ ಧರ್ಮಪ್ರವರ್ತಕ ಜಿಂದಾಲ್ ಮಹಾಶಯರ ಈ ದುರುದ್ದೇಶದ ಹೇಳಿಕೆಗೆ ಗೋವದಲ್ಲಿ ಮಾತ್ರವಲ್ಲದೆ ಇಡೀ ದೇಶದಾದ್ಯಂತ ಖಂಡನೆ ವ್ಯಕ್ತವಾಗಿತ್ತು.

ಅಷ್ಟು ಮಾತ್ರವಲ್ಲದೆ ಈ ಜಿಂದಾಲ್ ಸಮೂಹಕ್ಕೆ ಹೋರಾಟಗಾರರನ್ನು ಮಟ್ಟಹಾಕಲು ಮತ್ತೊಂದು ಕಾರ್ಯತಂತ್ರವನ್ನು ಅಳವಡಿಸುವ ಹೀನ ಚಾಳಿಯನ್ನು ಇಟ್ಟುಕೊಂಡಿದೆ. ಅದೇನೆಂದರೆ ಮುಂಚೂಣಿ ಹೋರಾಟಗಾರರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿ ಭಾರೀ ಮೊತ್ತದ ಪರಿಹಾರಕ್ಕಾಗಿ ಆಗ್ರಹಿಸುವುದು. ಈ ತಂತ್ರವನ್ನು ಇವರು ಹಿಂದಿನ ಅರ್ಥಸಚಿವ ಯಶವಂತ್ ಸಿನ್ಹಾ ಅವರ ಮೇಲೂ ಪ್ರಯೋಗಿಸಿದ್ದರು. ಅಂತಿಮವಾಗಿ ಇವರ ಈ ಕುಕೃತ್ಯ ಯಶಸ್ವಿಯಾಗಲಿಲ್ಲ ಎಂಬುದು ಬೇರೆ ಮಾತು.

ಹೀಗೆ ಕೆದಕುತ್ತಾ ಹೋದರೆ ಜಿಂದಾಲ್ ಪುರಾಣ ದೊಡ್ಡ ಮಹಾಭಾರತವೇ ಆಗುತ್ತದೆ. ಇವರ ಕುಕೃತ್ಯವನ್ನು ಅರ್ಥಮಾಡಿಕೊಳ್ಳಲು ಮೇಲಿನ ಉದಾಹರಣೆಯೊಂದೇ ಸಾಕು.

ಈ ಜಿಂದಾಲ್ ಕಂಪನಿ ಈ ಪ್ರಶಸ್ತಿಯನ್ನು ಮಾತ್ರವಲ್ಲದೇ ನಾನಾ ರೀತಿಯ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಇದಕ್ಕಾಗಿ ಕೆಲವು ಕೋಟಿಗಳನ್ನು ವ್ಯಯಿಸುತ್ತಾ ಬಂದಿದೆ. ಇದು ಪ್ರಪಂಚದಾದ್ಯಂತ ಬಂಡವಾಳಿಗರು ಅನುಸರಿಸುತ್ತಾ ಬಂದ ಕಣ್ಣೊರೆಸುವ ತಂತ್ರವಲ್ಲದೆ ಬೇರೇನೂ ಅಲ್ಲ. ಸಮಾಜದ ಕಣ್ಣಿಗೆ ಧರ್ಮ ಪ್ರವರ್ತಕರಂತೆ ತಮ್ಮನ್ನು ತಾವು ಬಿಂಬಿಸಿಕೊಳ್ಳುವ ಇರಾದೆ ಮಾತ್ರ ಇದರಲ್ಲಿ ಅಡಗಿದೆ. ಸಾವಿರಾರು ಕೋಟಿಗಳಷ್ಟು ಸಾರ್ವಜನಿಕ ಸಂಪತ್ತನ್ನು ಪ್ರತಿ ವರ್ಷ ಲೂಟಿ ಹೊಡೆದು ಒಂದೋ ಎರಡೋ ಕೋಟಿಗಳನ್ನು 'ಸೇವಾ'ಕಾರ್ಯಕ್ಕೆ ದೇಣಿಗೆಯ ರೂಪದಲ್ಲಿ ಕೊಡುವ ಇವರ ಈ ತಂತ್ರಗಾರಿಕೆಯನ್ನು ಪ್ರಜ್ಞಾವಂತರಾದ ನಾವು ಅರ್ಥಮಾಡಿಕೊಳ್ಳಲೇಬೇಕು.

ಈಗ ಮಾನ್ಯ ಸಂತೋಷ್ ಹೆಗಡೆ ಹಾಗೂ ಅಬ್ದುಲ್ ಕಲಾಂರಿಗೆ ಒಂದು ಕೋಟಿ ರೂ. ಮೊತ್ತದ ಭಾರೀ ಪ್ರಶಸ್ತಿಯನ್ನು ನೀಡುತ್ತಿರುವುದರ ಹಿಂದಿನ ಹುನ್ನಾರ ಇದೇ ಅಗಿದೆ. ಆ ಮೂಲಕ ತಮ್ಮ ಎಲ್ಲಾ ಅಕ್ರಮಗಳಿಗೆ ಸಾಮಾಜಿಕ ಮಾನ್ಯತೆ ಪಡೆದುಕೊಳ್ಳುವ ಲೆಕ್ಕಾಚಾರ ಈ ಜಿಂದಾಲ್ ಸಮೂಹದ್ದು. ಭ್ರಷ್ಟಾಚಾರದ ವಿರುದ್ಧ ಹೋರಾಡಿದ ವ್ಯಕ್ತಿಯೊಬ್ಬರಿಗೆ ಪ್ರಶಸ್ತಿಯ ರೂಪದಲ್ಲಿ ಭಾರೀ ಬಕ್ಷೀಸು ನೀಡಿ, ಅವರನ್ನು ಬೇರೊಂದು ರೀತಿಯಲ್ಲಿ ಪ್ರಲೋಭನೆಗೆ ಒಡ್ಡುವುದು ಹಾಗೂ ಈ ದೇಶದ ಸಂಪತ್ತನ್ನು ಲೂಟಿ ಹೊಡೆದು, ಜನರ ಆರೋಗ್ಯ ಮತ್ತು ಪರಿಸರದ ಮೇಲೆ ನಾನಾ ಅಕ್ರಮಗಳನ್ನು ಎಸಗುತ್ತಿರುವ ತಮ್ಮ ಕಂಪನಿಗಳನ್ನು ಸಮಾಜ ಸೇವಾಕರ್ತರೆಂದು ಬಿಂಬಿಸಿ ಜನರನ್ನು ಮತ್ತೊಮ್ಮೆ ಮೂರ್ಖರನ್ನಾಗಿಸುವುದು... ಹೀಗೆ ಒಂದೇ ಏಟಿಗೆ ಎರಡು ಮಿಕಗಳನ್ನು ಹೊಡೆದಂತಾಗುತ್ತದೆ.

ಮಾನ್ಯ ಸಂತೋಷ್ ಹೆಗಡೆಯವರು ಈ ಹುನ್ನಾರವನ್ನು ಅರಿಯುವಂತಾಗಲಿ ಎಂಬುದೇ ನಮ್ಮೆಲ್ಲರ ಆಶಯ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅಸಲಿ ಪೊಲೀಸ್ - ಅಸಲಿ ವಂಚಕರು

ಆದರೆ ಕಿಡ್‌ನ್ಯಾಪ್ ಆದವನು ನಕಲಿ ಡಾಕ್ಟರ್!



ಬೆಂಗಳೂರು ಪೊಲೀಸರು ಪಿಗ್ಗಿ ಬಿದ್ದಿದ್ದಾರೆ..!

ಬೆಂಗಳೂರಿನ ಕೆ.ಆರ್.ಪುರಂನ ಡಾಕ್ಟರ್ ಶಂಕರ್ ಎಂಬಾತನನ್ನು ಮೂವರು ಕಿಡ್‌ನ್ಯಾಪ್ ಮಾಡಿ ದೂರದ ಹರಿಯಾಣ ರಾಜ್ಯದಲ್ಲಿ ಬಚ್ಚಿಟ್ಟಿದ್ದು, ಇದನ್ನು ಇನ್ಸ್‌ಪೆಕ್ಟರ್ ವಾಸುದೇವ ನಾಯಕರ ಟೀಂ ಇಪ್ಪತ್ನಾಲ್ಕು ಗಂಟೆಯೊಳಗಾಗಿ ಭೇದಿಸಿ ಅಪಹರಣಕಾರರನ್ನು ಹಿಡಿದದ್ದೆಲ್ಲಾ ಈಗ ದೊಡ್ಡ ಸುದ್ದಿಯಾಗಿದೆ. ಅಲ್ಲಿಯತನಕ ಈ ಕ್ರೈಂಸ್ಟೋರಿ ನಿಜವಾದದ್ದೇ. ಕಿಡ್‌ನ್ಯಾಪ್ ಮಾಡಿದ ಕ್ರಿಮಿನಲ್‌ಗಳೆಲ್ಲಾ ಈಗ ಜೈಲು ಪಾಲಾಗಿದ್ದಾರೆ. ಆದರೆ ಕಿಡ್‌ನ್ಯಾಪ್ ಆದವನ್ಯಾರು...? ಅವನ ಕತೆಯೇನು? ಎಂದು ಕೊಂಚ ತನಿಖೆ ಮಾಡಿ ನೋಡಿದರೆ ಈ ಪ್ರಕರಣದ ಇನ್ನೊಂದು ಮುಖ ಕಾಣುತ್ತದೆ.

ಚಕ್ರದೊಳಗೊಂದು ಚಕ್ರ ಎನ್ನುವಂತೆ ಮೋಸದ ಜಾಲದೊಳಗೊಂದು ಮೋಸದ ಕತೆ ಇದು.

ಈ ಕಿಡ್‌ನ್ಯಾಪ್ ಪ್ರಹಸನದ ಹೀರೋ ಅರ್ಥಾತ್ ಅಪಹರಣಕ್ಕೆ ಒಳಗಾಗಿದ್ದ ಶಂಕರ್ ಎಂಬ ವ್ಯಕ್ತಿ ಒಬ್ಬ ಡಾಕ್ಟರ್ ಅಂತಲೇ ಈಗಲೂ ಪೊಲೀಸರನ್ನು ನಂಬಿಸಲಾಗಿದೆ. ಅಸಲಿಗೆ ಈತ ಡಾಕ್ಟರ್ ಅಲ್ಲವೇ ಅಲ್ಲ. ಜೊತೆಗೆ ಈಗ ಅಮಾಯಕನಂತೆ ಕಿಡ್‌ನ್ಯಾಪರ್‌ಗಳ ಬಲೆಗೆ ಬಿದ್ದ ನತದೃಷ್ಟನೂ ಅಲ್ಲ. ಈ ಕಿಡ್‌ನ್ಯಾಪ್ ಪ್ರಕರಣದ ಅಸಲಿ ಕತೆ ಹೀಗಿದೆ.

ಪೊಲೀಸರಿಗೆ ಹೇಳಿದ ಕಿಡ್‌ನ್ಯಾಪ್ ಕತೆ


ಫೆಬ್ರವರಿ 11 ರ ಶನಿವಾರ ರಾತ್ರಿ ಹನ್ನೊಂದೂವರೆ ಸುಮಾರಿಗೆ ಕೆ.ಆರ್.ಪುರಂ ಸ್ಟೇಷನ್‌ಗೆ ಸುರೇಶ್ ಎಂಬಾತ ಬಂದು "ತನ್ನಣ್ಣ ಡಾ. ಶಂಕರ್ ಕಿಡ್‌ನ್ಯಾಪ್ ಆಗಿದ್ದಾನೆಂತಲೂ ಅಪಹರಣಕಾರರು 50 ಲಕ್ಷ ರೂಪಾಯಿ ಕೇಳುತ್ತಿದ್ದಾರೆಂತಲೂ ದೂರು ಕೊಟ್ಟ." ಫಾರೂಕ್ ಎಂಬಾತನ ತಂದೆ ಹರಿಯಾಣದಲ್ಲಿರುವುದಾಗಿಯೂ, ಆತನಿಗೆ ಟೈಫಾಯಿಡ್ ಆಗಿದ್ದ ಕಾರಣ ಚಿಕಿತ್ಸೆ ನೀಡಲು ಡಾ.ಶಂಕರ್‌ನನ್ನು ಬೆಂಗಳೂರಿನಿಂದ ಹರಿಯಾಣಗೆ ಫಾರೂಕ್ ಕರೆದುಕೊಂಡು ಹೋಗಿ ಈಗ ಒತ್ತೆಯಾಳಾಗಿರಿಸಿಕೊಂಡು 50 ಲಕ್ಷ ಕೇಳುತ್ತಿದ್ದಾನೆ ಎಂದೂ ಸುರೇಶ್ ಪೊಲೀಸರಿಗೆ ಹೇಳಿದ.

ಸಾಮಾನ್ಯವಾಗಿ ಕಿಡ್‌ನ್ಯಾಪ್ ಕೇಸುಗಳು ಬಂದಾಗ ಪೊಲೀಸರು ಹೈ ಅಲರ್ಟ್ ಆಗಿಬಿಡುತ್ತಾರೆ. ಬಹಳ ಎಚ್ಚರಿಕೆಯಿಂದ ಕೇಸ್ ಹ್ಯಾಂಡಲ್ ಮಾಡುತ್ತಾರೆ. ಪ್ರಾಣ ಹೋಗುವ ಅಪಾಯ ಇರುತ್ತಾದ್ದರಿಂದ ಬೇರೆಲ್ಲಾ ಕೆಲಸ ಬದಿಗಿಟ್ಟು ಇದೇ ಕೆಲಸಕ್ಕೆ ನಿಲ್ಲುತ್ತಾರೆ. ಕೆ.ಆರ್ ಪುರಂ ಸ್ಟೇಷನ್ನಿನಲ್ಲೂ ಹಾಗೇ ಆಯಿತು. ಇನ್ಸ್‌ಪೆಕ್ಟರ್ ವಾಸುದೇವ್ ನಾಯಕ್ ಈ ಕೇಸ್‌ನ ಬೆನ್ನು ಹತ್ತಿದರು.

ಹರಿಯಾಣದಲ್ಲಿ ಅಡಗಿದ್ದರು

ಅಪಹರಣಕಾರರಿಂದ ಬಂದಿದ್ದ ಮೊಬೈಲ್ ಕಾಲ್‌ಗಳ ಸಿಗ್ನಲ್ ಮೂಲವನ್ನು ತನಿಖೆ ಮಾಡಿದಾಗ ಅದು ಹರಿಯಾಣ ರಾಜ್ಯದ ಪಲ್‌ವಲ್ ಜಿಲ್ಲೆಯ ಹೋಡಲ್ ತಾಲೂಕಿನ ದಿಕ್ಕು ತೋರಿಸಿದೆ. ಆಗ ಡಾ. ಶಂಕರ್ ಈ ಕಿಡ್‌ನ್ಯಾಪರ್‌ಗಳ ಜೊತೆ ಅಲ್ಲಿಯೇ ಮೊಕ್ಕಾಂ ಹಾಕಿರುವುದು ಖಾತ್ರಿಯಾಯಿತು.

ತಕ್ಷಣ ಇನ್ಸ್‌ಪೆಕ್ಟರ್ ವಾಸುದೇವ ನಾಯಕ, ಹೆಡ್ ಕಾನ್‌ಸ್ಟೇಬಲ್ ಎಂ. ಮುನಿರಾಜು ಹಾಗೂ ಪಿಸಿ ನಹೀಂ ಹುಸೇನ್ ದೆಹಲಿಗೆ ವಿಮಾನ ಹತ್ತಿದರು. ಅಲ್ಲಿಂದ ಮಿಂಚಿನ ವೇಗದಲ್ಲಿ ಹರಿಯಾಣದ ಹೋಡಲ್ ತಾಲೂಕು ಸೇರಿ ಸ್ಥಳೀಯ ಪೊಲೀಸರಿಗೆ 'ಪೆಕರು ಶಂಕರ'ನ ಕಿಡ್‌ನ್ಯಾಪ್ ಕತೆ ಹೇಳಿ ಸಹಾಯ ಕೇಳಿದ್ದಾರೆ. ಆಮೇಲೇನಾಯಿತೆಂಬುದು ಈಗ ಬಹುತೇಕರಿಗೆ ಗೊತ್ತಿದೆ. ಕಿಡ್‌ನ್ಯಾಪರ್‌ಗಳಾದ ಇರ್ಷಾದ್, ಜಾವೀದ್ ಹಾಗೂ ಶಬ್ಬೀರ್ ಸೆರೆ ಸಿಕ್ಕರು. ಇನ್ನೊಬ್ಬ ಫಾರೂಕ್ ತಪ್ಪಿಸಿಕೊಂಡಿದ್ದಾನೆ. ಇವರನ್ನು ಹಿಡಿಯುವಾಗ ಒಂದೆರಡು ರೌಂಡ್ ಫೈರಿಂಗ್ ಕೂಡಾ ಆಯಿತೆಂದು ಪೊಲೀಸರು ಹೇಳುತ್ತಿದ್ದಾರೆ. ಅದೆಲ್ಲಾ ಈಗ ಮುಗಿದ ಕತೆ. ಆದರೆ ಅಸಲಿ ಕತೆ ಏನೆಂಬುದನ್ನು ಈಗ ನೋಡೋಣ.



ಶಂಕರ ಯಾವ ಸೀಮೆ ಡಾಕ್ಟರು

ಬೆಂಗಳೂರು- ಮದ್ರಾಸ್ ಹೈವೇಯಲ್ಲಿ ಹತ್ತು ಕಿ.ಮೀ ಹೋದರೆ ಐ.ಟಿ.ಐ ಫ್ಯಾಕ್ಟರಿ ದಾಟಿದ ನಂತರ ಕೆ.ಆರ್. ಪುರಂ ಸಿಗುತ್ತದೆ. ಇಲ್ಲಿ ಹೆಜ್ಜೆಗೊಂದರಂತೆ ನರ್ಸಿಂಗ್ ಹೋಂಗಳು, ಕ್ಲಿನಿಕ್‌ಗಳು ಇವೆ. ಆದರೆ ಅರ್ಧಕರ್ಧ ನಕಲಿ ಡಾಕ್ಟರ್‌ಗಳೇ ಇಲ್ಲಿರುವುದು. ಅಂತವರಲ್ಲಿ ಈ ಶಂಕರನೂ ಒಬ್ಬ. ಮೂಲತಃ ಕೆ.ಆರ್ ಪುರಂನವನೇ ಆದ ಶಂಕರ ಓದಿರುವುದು ಎಂ.ಫಾರ್ಮ್! ಸರಿಯಾಗಿ ತನಿಖೆ ಮಾಡಿದರೆ ಅದೂ ಸುಳ್ಳಾಗಿರುವ ಛಾನ್ಸ್ ಇದೆ. ಅಲ್ಲಿನ ಗಾಯತ್ರಿ ಲೇ ಔಟ್‌ನಲ್ಲಿ 'ಶಂಕರ್ ಡಯಾಗ್ನೋಸ್ಟಿಕ್ ಲ್ಯಾಬೊರೇಟರಿ ಅಂಡ್ ಮೆಡಿಕಲ್ಸ್' ಎಂಬ ದುಖಾನಿದೆ. ಶಂಕರ್ ಇದನ್ನೇ ದವಾಖಾನೆ ರೀತಿ ಬಿಂಬಿಸಿ, ತಾನೊಬ್ಬ ಡಾಕ್ಟರ್ ಎಂಬಂತೆಯೂ ಪೋಜು ಕೊಡುತ್ತಿದ್ದಾನೆ. ಈ ಏರಿಯಾದಲ್ಲಿ ಆಂಧ್ರ, ತಮಿಳುನಾಡು, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳದಿಂದ ಸಹಸ್ರಾರು ಜನ ಕೂಲಿ ಕಾರ್ಮಿಕರು, ಅರೆ ಕುಶಲಿ ಜನ ನೆಲೆಸಿದ್ದಾರೆ. ಇವರಲ್ಲಿ ಮೆಜಾರಿಟಿ ಜನ ಅರೆವಿದ್ಯಾವಂತರು. ಅಂತವರು ಪ್ಲಸ್ ಮಾರ್ಕಿನ ಬೋರ್ಡ್ ನೋಡಿದರೆ ಸಾಕು ಅದೇ ಆಸ್ಪತ್ರೆ ಅಂತ ನಂಬಿ ಬಿಡುತ್ತಾರೆ.



ಈ ಶಂಕರನೂ ಇದೇ ರೀತಿ ಡಾಕ್ಟರ್ ಎನಿಸಿಕೊಂಡಿದ್ದ. ಇವನ ಲ್ಯಾಬ್ ಶುರುವಾಗಿ ಕೇವಲ ಎರಡು ತಿಂಗಳಾಗಿದೆ. ಈತನ ತಂದೆಯ ವಿದ್ಯಾರ್ಹತೆ ಏನೆಂಬುದು ಯಾರಿಗೂ ಗೊತ್ತಿಲ್ಲ. ಆದರೆ ಈತನೂ ಸಹ 'ಶಂಕರ್ ನರ್ಸಿಂಗ್ ಹೋಂ' ನ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾನೆ. ಶಂಕರನ ಅಣ್ಣ ಸುರೇಶ್ ಎಂಬಾತ ಹೊಸಕೋಟೆ ಹತ್ತಿರದ ವೋಲ್ವೋ ಫ್ಯಾಕ್ಟರಿಯಲ್ಲಿ ಇಂಜಿನಿಯರ್ ಆಗಿದ್ದಾನೆ. ವಾಸ ಕೋಲಾರದಲ್ಲಿ. ಹೀಗಿರುವಾಗ ಕೆಲ ವಾರಗಳ ಹಿಂದೆ ಇರ್ಷಾದ್ ಎಂಬುವನು ಶಂಕರ್‌ನ ನರ್ಸಿಂಗ್ ಹೋಂಗೆ ಬಂದು 'ಟೈಫಾಯ್ಡ್'ಗೆ ಚಿಕಿತ್ಸೆ ಪಡೆದು ಕಾಯಿಲೆ ವಾಸಿ ಮಾಡಿಕೊಂಡನಂತೆ. ಇರ್ಷಾದ್ ನಂತರ ಅದೇ ಶಂಕರ್‌ನ ಹತ್ತಿರ ಬಂದು ಒಂದು ಡೀಲ್ ಕುದುರಿಸಲು ಯತ್ನಿಸಿದ್ದಾನೆ.

ಚಿನ್ನದ ಬಿಸ್ಕತ್‌ನ ಡೀಲ್

ಶಂಕರ್‌ಗೆ ಇರ್ಷಾದ್ ಗೋಲ್ಡ್ ಬಿಸ್ಕತ್‌ನ ಕತೆಯೊಂದನ್ನು ಹೇಳಿದ. ಹರಿಯಾಣದ ಹಳ್ಳಿಯಲ್ಲಿರುವ ತನ್ನ ಮನೆಯ ಗೋಡೆಯೊಂದನ್ನು ಕೆಡವಿದಾಗ ಚಿನ್ನದ ಬಿಸ್ಕತ್‌ಗಳು ಸಿಕ್ಕಿರುವುದಾಗಿಯೂ, ಅವನ್ನು ಚೀಪ್ ರೇಟಿಗೆ ಸೇಲ್ ಮಾಡಲು ರೆಡಿ ಎಂತಲೂ ನಂಬಿಸಿದ. ಆಗ ಈ ನಕಲಿ ಡಾಕ್ಟರ್ ತನ್ನ ಅಣ್ಣ ಸುರೇಶನ ಜೊತೆ ಮೀಟಿಂಗ್ ನಡೆಸಿದ. ಕೊನೆಗೆ ಕಳೆದ ತಿಂಗಳು ಜನವರಿ 29 ನೇ ತಾರೀಖು ಈ ಸುರೇಶ್- ಶಂಕರ್ ಸೋದರರು ಥೇಟ್ ಸ್ಮಗ್ಲರ್‌ಗಳಂತೆ ಹರಿಯಾಣ ತನಕ ಹೋಗಿಬಂದಿದ್ದಾರೆ. ಅಲ್ಲಿ ಫಾರೂಕ್ ಇವರಿಬ್ಬರಿಗೂ ಒರಿಜಿನಲ್ ಗೋಲ್ಡ್ ಬಿಸ್ಕತ್ ತೋರಿಸಿದ. ಅದನ್ನು ನೋಡಿ ಖುಷಿಯಾದ ಶಂಕರ್ ಸೀದಾ ಬೆಂಗಳೂರಿಗೆ ಬಂದವನೆ ಒಂದಷ್ಟು ಹಣ ಜೋಡಿಸಿಕೊಂಡು ಫೆಬ್ರವರಿ 11 ನೇ ತಾರೀಖು ಮತ್ತೆ ಹರಿಯಾಣಕ್ಕೆ ಹೋಗಿದ್ದಾನೆ. ಅಲ್ಲಿ ಹಣ ಹಾಗೂ ಗೋಲ್ಡ್ ಬಿಸ್ಕತ್ ಡೀಲ್‌ನಲ್ಲಿ ಏನೇನು ವ್ಯತ್ಯಾಸ ಬಂತೋ ಏನೋ ಫಾರೂಕನ ಗ್ಯಾಂಗ್ ಶಂಕರನನ್ನು ಹಿಡಿದು ಕಟ್ಟಿ ಹಾಕಿದೆ. ಈ ಸುದ್ದಿ ಸುರೇಶ್‌ಗೂ ತಿಳಿಸಿದ್ದಾರೆ. ಆದರೆ ಕಿಲಾಡಿ ಸುರೇಶ್ ಪೊಲೀಸರಿಗೆ ಅಸಲಿ ವಿಚಾರ ಹೇಳದೆ ಸುಳ್ಳು ದೂರು ಕೊಟ್ಟ. ತನ್ನ ಸೋದರ ಡಾ. ಶಂಕರ್ ಫಾರೂಕ್ ತಂದೆಯ ಜ್ವರಕ್ಕೆ ಔಷಧ ಕೊಡಲು ಹರಿಯಾಣಕ್ಕೆ ಹೋಗಿದ್ದಾಗ ಕಿಡ್‌ನ್ಯಾಪ್ ಆಗಿದ್ದಾನೆಂದು ಅರೆ ಸತ್ಯ ಅರೆ ಸುಳ್ಳಿನ ದೂರು ಕೊಟ್ಟ.

ಆಮೇಲೆ ಏನೇನಾಯಿತೆಂಬುದೆಲ್ಲಾ ಈಗ ಎಲ್ಲರಿಗೂ ಗೊತ್ತಾಗಿದೆ. ಇಲ್ಲಿ ನಮ್ಮ ಪ್ರಶ್ನೆ ಇಷ್ಟೆ. ಬೆಂಗಳೂರು ಪೊಲೀಸರು ಶಂಕರನ ಸುಳ್ಳುಗಳ ಬಗ್ಗೆ ಯಾಕೆ ತನಿಖೆ ಮಾಡುತ್ತಿಲ್ಲ? ಶಂಕರ್ ಒಬ್ಬ ಡಾಕ್ಟರ್ ಅಲ್ಲ ಎಂಬುದನ್ನು ಅವರು ಖಚಿತಪಡಿಸಿಕೊಂಡಿದ್ದಾರೆಯೆ? ಯಾವನಿಗೋ ಹರಿಯಾಣ ರಾಜ್ಯದಲ್ಲಿ ಜ್ವರ ಬಂದರೆ ಬೆಂಗಳೂರಿನಿಂದ ಡಾಕ್ಟರನ್ನು ಯಾರಾದರೂ ಕರೆಸುತ್ತಾರಾ? ಈ ಪ್ರಕರಣ ಕೇವಲ ಕಿಡ್‌ನ್ಯಾಪ್ ಕೇಸ್ ಅಲ್ಲ, ಬದಲಾಗಿ ಅಪಹರಣಕ್ಕೊಳಗಾದ ವ್ಯಕ್ತಿಯು ಅಪಹರಣಕಾರರೊಂದಿಗೆ ಶಾಮೀಲಾಗಿ ಚಿನ್ನದ ಬಿಸ್ಕತ್ ಡೀಲ್ ಕುದುರಿಸಿದ್ದಾನೆ. ಹಣದ ದುರಾಸೆಗೆ ಬಿದ್ದು ಡಾಕ್ಟರ್ ಅಲ್ಲದಿದ್ದರೂ ನರ್ಸಿಂಗ್ ಹೋಂ ನಡೆಸುತ್ತಿದ್ದಾನೆ. ಸುಲಭವಾಗಿ ಹಣ ಮಾಡಬೇಕೆಂದು ಹೊರಟು ಕ್ರಿಮಿನಲ್‌ಗಳ ಸಹವಾಸ ಮಾಡಿ ಪೊಲೀಸರಿಗೂ ಟೆನ್ಷನ್ ತಂದಿಟ್ಟಿದ್ದಾನೆ. ಈಗ ನೋಡಿದರೆ ಬೆರಳು ಚೀಪುವ ಮಗುವಿನಂತೆ 'ಪೊಲೀಸರಿಂದ ನನ್ನ ಪ್ರಾಣ ಉಳಿಯಿತು ಸಾರ್' ಅನ್ನುತ್ತಿದ್ದಾನೆ. ಇನ್ಸ್‌ಪೆಕ್ಟರ್ ವಾಸುದೇವ ನಾಯಕ್ ಈ ಪ್ರಕರಣ ಬಗೆಹರಿಸಲು ಕಷ್ಟ ಪಟ್ಟಿದ್ದಾರೆ, ಧೈರ್ಯ ಪ್ರದರ್ಶಿಸಿದ್ದಾರೆ. ಅದು ಸರಿ. ಆದರೆ ಡಾ. ಶಂಕರ್‌ನ ನಕಲಿ ದಂಧೆಗಳ ಬಗ್ಗೆಯೂ ಅವರು ಚೂರು ತನಿಖೆ ನಡೆಸಲಿ

• ಪಾರ್ವತೀಶ

ಡಾ. ಶಂಕರನೂ ಕೆ.ಆರ್ ಪುರಂನ ನಕಲಿ ಆಸ್ಪತ್ರೆಗಳೂ!

"ಸಾರ್ ನೀವು ಎಂಬಿಬಿಎಸ್ ಎಲ್ಲಿ ಓದಿದ್ದು?"

"ಅದ್ಯಾಕೆ ಬಿಡಿ ಈಗ."

"ಇರಲಿ ಹೇಳಿ??

"ಇಲ್ಲ ಸಾರ್, ನಾನು ಬಿಎಎಂಎಸ್ (ಆಯುರ್ವೇದ) ಮಾಡಿರೋದು"

"ಯಾವ ಕಾಲೇಜಿನಲ್ಲಿ?"

"ದೊಡ್ಡಬಳ್ಳಾಪುರದಲ್ಲಿ."

"ಅಲ್ಯಾವ ಆಯುರ್ವೇದಿಕ್ ಕಾಲೇಜಿದೆ!"

"ಇಲ್ಲ ಬಿಡಿ ಸಾರ್. ನಾನು ಪೋಸ್ಟಲ್ಲಿ (ಕರೆಸ್ಪಾಂಡೆನ್ಸ್) ಮೆಡಿಸನ್ ಓದ್ತಾ ಇದೀನಿ."


- ಇದು ಡಾ. ಶಂಕರ್‌ನ ಮೊಬೈಲ್ **9900610489** ಗೆ ಫೋನ್ ಮಾಡಿ ಮಾತನಾಡಿದಾಗ ಸಿಕ್ಕ ಉತ್ತರಗಳು. ತಾನು ಡಾಕ್ಟರ್ ಅಲ್ಲ ಎಂದು ಸ್ವತಃ ಶಂಕರನೇ ಒಪ್ಪಿಕೊಳ್ಳುತ್ತಿದ್ದಾನೆ. ನಿಮಗೂ ಗೊತ್ತಾಗಿದೆ. ಆದರೆ ಬೆಂಗಳೂರು ಪೊಲೀಸರು ಮಾತ್ರ ಡಾ. ಶಂಕರ್, ಶಂಕರ್ ನರ್ಸಿಂಗ್ ಹೋಂ ಎಂತಲೇ ಈಗಲೂ ತಪ್ಪು ತಪ್ಪಾಗಿ ಬಿಂಬಿಸುತ್ತಿದ್ದಾರೆ.

ಇನ್ಸ್‌ಪೆಕ್ಟರ್ ವಾಸುದೇವರವರು ಈಗಲಾದರೂ ಕೃಷ್ಣರಾಜಪುರ ಏರಿಯಾದಲ್ಲಿರುವ ವೈದ್ಯರು, ಲ್ಯಾಬ್‌ಗಳು ನರ್ಸಿಂಗ್ ಹೋಂಗಳ ಒಳಹೊಕ್ಕು, ಅಸಲಿ- ನಕಲಿಗಳನ್ನೆಲ್ಲಾ ಒಮ್ಮೆ ವಿಂಗಡಿಸಿ ನೋಡಿದರೆ ಉತ್ತಮ ಅನಿಸುತ್ತದೆ.

ಏಕೆಂದರೆ ಬೆಂಗಳೂರಿನಲ್ಲಿ ಬೇರೆ ಯಾವುದೇ ಕಡೆ ಇರುವುದಕ್ಕಿಂತಲೂ ಹೆಚ್ಚಿನ ನರ್ಸಿಂಗ್ ಹೋಂಗಳು ಇಲ್ಲಿವೆ.

ಮುತ್ತಪ್ಪರೈ-ಅಶೋಕ್ ಸಿಂಘಾಲ್ ಭೇಟಿಯಲ್ಲಿ ನಡೆದದ್ದೇನು?

"ಇದೊಂಥರ 'ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಏನ್ ಸಂಬಂಧ?' ಎಂದೆನಿಸುವಂತ ಭೇಟಿ.




ಒಬ್ಬ 'ನಾನೊಬ್ಬ ಮಾಜಿ ಡಾನ್' ಎಂದು ಹೇಳಿಕೊಳ್ಳುವ, ಹಾಲಿ ಜಯ ಕರ್ನಾಟಕ ಸಂಘಟನೆಯ ಮುಖಂಡ, ಸಮಾಜ ಸೇವಕನೆಂದು ಬಿರುದಾಂಕಿತ ರೈ. ಇನ್ನೊಬ್ಬ ಮನೆಹಾಳು ಮಾಡುವ 'ವಿಶ್ವ ಹಿಂದೂ ಪರಿಷತ್' ಎನ್ನುವ ಕೆಟ್ಟ ಜನರ ನಾಯಕ ಗುಂಪಿನ ಇವರಿಬ್ಬರು ಹೀಗೆ ಸಡನ್ನಾಗಿ ಯಾಕೆ ಭೇಟಿಯಾದರು ಅಲ್ಲೇನು ಚರ್ಚೆಯಾಯಿತು ಎಂಬ ಕುತೂಹಲ ಉಂಟಾಗುವುದು ಸಹಜ ತಾನೆ.

ಅಲ್ಲೇನು ನಡೆಯಿತೆಂಬ ವಿವರಗಳು ಇಲ್ಲಿವೆ ನೋಡಿ.

ಅಶೋಕ್ ಸಿಂಘಾಲ್ ಈ ಹಿಂದೆ ಬೆಂಗಳೂರಿಗೆ ಬಂದಾಗಲೆಲ್ಲಾ ಮೂರ್ನಾಲ್ಕು ಬಾರಿ ರೈ ಭೇಟಿಗೆ ಯತ್ನಿಸಿ ಆಗಿರಲಿಲ್ಲವಂತೆ. ಆದರೆ ಈ ಬಾರಿ ಇಬ್ಬರಿಗೂ ಪರಿಚಯವಿರುವ ಹಿರಿಯರೊಬ್ಬರು ರೈಗೆ ಫೋನ್ ಮಾಡಿ 'ಯಾಕೆ ಸಿಂಘಾಲ್‌ರನ್ನು ಅವಾಯ್ಡ್ ಮಾಡ್ತಿದ್ದೀರ, ಅವರೊಬ್ಬ ಹಿರಿಯ ಹಿಂದೂ ಮುಖಂಡ. ನಿಮ್ಮ ಜೊತೆ ಒಂದೆರಡು ವಿಚಾರ ಮಾತಾಡಬೇಕಂತೆ. ಒಮ್ಮೆ ಭೇಟಿಯಾಗಿ ಮಾತಾಡಿ, ಆಮೇಲೆ ಅದೇನೇ ವಿಚಾರವಿರಲಿ ನಿಮಗನಿಸಿದ್ದನ್ನು ಹೇಳಬಹುದು' ಅಂದಿದ್ದಾರೆ.

'ಸರಿ' ಅಂತ ರೈ ಹೇಳಿದ ಮೇಲೆ ಕಳೆದ ವಾರ ರೈ- ಸಿಂಘಾಲ್ ಭೇಟಿ ಆಯಿತು.

ಈ ಸಿಂಘಾಲ್ ಹೇಳಿಕೇಳಿ ಚಿದ್ದಿ ಬುದ್ಧಿಯವನು. ರೈಯನ್ನು ಎದುರಿಗೆ ಕೂರಿಸಿಕೊಂಡು ತನ್ನ ಹಳೇ ಪ್ಲೇಟ್ ಹಾಕಿದನಂತೆ. 'ನಮ್ಮದು ಹಿಂದೂ ದೇಶ, ಹಿಂದೂ ಸಂಸ್ಕೃತಿ. ಹಿಂದೂ ಡಾನ್ ಆದ ನೀವು ಮುಸ್ಲಿಂ ಡಾನ್ (ದಾವುದ್ ಇಬ್ರಾಹಿಂ ಬಗ್ಗೆ) ವ್ಯಾಲೆಂಟೇನ್ಸ್ ಡೇ ಅನ್ನು ವಿರೋಧಿಸಿ ಜಯ ಕರ್ನಾಟಕ ಸಂಘಟನೆಯಿಂದ ಹೇಳಿಕೆ ಕೊಡಿ.... ನಮ್ಮ ಜೊತೆ ಸೇರಿ ಬನ್ನಿ...., ಇತ್ಯಾದಿ ಗೀತೋಪದೇಶಗಳನ್ನೆಲ್ಲಾ ಮಾಡಿದ್ದಾನೆ.




ಇದನ್ನೆಲ್ಲಾ ತಣ್ಣಗೆ ಕೇಳಿಸಿಕೊಂಡ ರೈ 'ನೋಡಿ, ನಾವು ಹಾಗೆಲ್ಲಾ ಮಾಡೋಕಾಗಲ್ಲ, ಜಯ ಕರ್ನಾಟಕ ಸಂಘಟನೆಯಲ್ಲಿ ಹಿಂದೂ ಮುಸ್ಲಿಂ ಎಲ್ರೂ ಇದ್ದಾರೆ, ನಮಗೆ ಅಲ್ಪಸಂಖ್ಯಾತರ ಘಟಕವೂ ಇದೆ, ಅಂತೆಲ್ಲಾ ವಿವರಿಸಿದ್ದಾನೆ.


ಸಿಂಘಾಲ್ ಸುಮ್ಮನಾಗದೆ ಇನ್ನೂ ಏನೇನೊ ಕತೆ ಹೇಳಲು ಶುರು ಮಾಡಿದಾಗ ರೈ ಜೊತೆಗಾರನೊಬ್ಬ 'ಅಣ್ಣಾ ಟಿವಿನ್ಯೂಸ್ ಹಾಕಣ್ಣ' ಅಂದನಂತೆ. ಟಿವಿನ್ಯೂಸ್ ಹಾಕಲಾಗಿ ಅಲ್ಲಿ ಸಿಂಘಾಲ್‌ನ ಬ್ಜೂಜೆಪಿಯ ಮೂವರು ಸಚಿವರು ಸದನದಲ್ಲಿ ಬ್ಲೂ ಫಿಲಂ ನೋಡಿ ಸಿಕ್ಕಿಬಿದ್ದ ವಿಚಾರದ ಬಗ್ಗೆ ಚರ್ಚೆಯಾಗುತ್ತಿತ್ತು.

ಆ ರೈ ಜೊತೆಗಾರ 'ಸಿಂಘಾಲ್‌ಜೀ, ನಾವು ಇಂತವರ ಜೊತೆ ಸೇರಿದರೆ ಮರ್ಯಾದೆ ಇರುತ್ತಾ, ನೀವೇ ಹೇಳಿ?' ಅಂದನಂತೆ.

ಅಲ್ಲಿಗೆ ರೈ ಸಿಂಘಾಲ್ ಭೇಟಿ ಮುಗಿಯಿತು.



ಬಿಬಿಎಂಪಿ ಪೂರ್ತಿ ದಿವಾಳಿ! ಇಂದು ಕೆ.ಆರ್.ಮಾರ್ಕೆಟ್ ನಾಳೆ ಕಬ್ಬನ್ ಪಾರ್ಕ್?



ಬಿಜೆಪಿ ಸರ್ಕಾರದ ಕುಖ್ಯಾತಿಯ ಕಿರೀಟಕ್ಕೀಗ ಬಿಬಿಎಂಪಿಯನ್ನು ದಿವಾಳಿಯೆಬ್ಬಿಸಿದ ಗರಿಯೂ ಸೇರಿಕೊಂಡಿದೆ.

500 ಕೋಟಿಯ ಸಾಲಕ್ಕಾಗಿ ಪ್ರತಿಷ್ಠಿತ ಕೆ.ಆರ್.ಮಾರುಕಟ್ಟೆಯನ್ನೇ ಹುಡ್ಕೋ ಬ್ಯಾಂಕಿಗೆ ಒತ್ತೆಯಿಡುವಷ್ಟು ದಿವಾಳಿಕೋರತನವನ್ನು ಈ ಹಿಂದೆ ಆಳಿದ ಯಾವ ಸರ್ಕಾರಗಳೂ ಎದುರಿಸಿರಲಿಲ್ಲ. ಹೆಬ್ಬೆಟ್ಟು ಮೇಯರ್, ಕ್ರಿಮಿನಲ್ ಉಪಮೇಯರ್, ರಬ್ಬರ್ ಸ್ಟ್ಯಾಂಪ್ ಕಮೀಷನರ್ ಮತ್ತು ಕೀಲಿ ಕೊಟ್ಟ ಗೊಂಬೆಯಂತಾಡುವ ಆಡಳಿತ ಪಕ್ಷದ ನಾಯಕರೆಲ್ಲ ಸೇರಿ ಇವತ್ತಲ್ಲ ನಾಳೆ ಬಿಬಿಎಂಪಿಯ ಒಂದೊಂದೇ ಆಸ್ತಿಯನ್ನು ಅಡವಿಟ್ಟು ಕೈ ಎತ್ತುವ ಎಲ್ಲ ಸೂಚನೆಗಳೂ ನಿಚ್ಚಳವಾಗಿರುವುದು ಬಿಬಿಎಂಪಿಯ ಪಾಪರ್ ಚೀಟಿ ವೃತ್ತಾಂತದ ಮೂಲಕವೇ.




ಇಲ್ಲಿಗೆ ತಿಂಗಳ ಹಿಂದಷ್ಟೇ ಐನೂರಕ್ಕೂ ಅಧಿಕ ಮಂದಿ ಪಾಲಿಕೆ ಕಂಟ್ರ್ಯಾಕ್ಟರ್‌ಗಳು ಸೇರಿ ಮೇಯರ್ ಕಚೇರಿಯೆದುರು ಪ್ರತಿಭಟಿಸಿದ್ದು ತಮ್ಮ ಬಾಕಿ ಬಿಲ್ಲಿಗಾಗಿ. ಮರಗಳ ನಿರ್ವಹಣೆ ಮಾಡುವ ಗುತ್ತಿಗೆದಾರರಿಗೆ ಹತ್ತು ಕೋಟಿ ಬಾಕಿ, ಬೀದಿ ನಾಯಿಗಳ ನಿರ್ವಹಣೆ ಹೊತ್ತ ಎನ್‌ಜಿಓಗಳಿಗೆ ಐದು ಕೋಟಿ ಬಾಕಿ, ಪಾರ್ಕ್‌ಗಳನ್ನು ನಿಭಾಯಿಸುವ ನೂರಾರು ಕಂಟ್ರ್ಯಾಕ್ಟರುಗಳಿಗೆ ಇಪ್ಪತ್ತು ಕೋಟಿ, ಬೀದಿ ಬ್ಯಾನರ್‌ಗಳನ್ನು ನಿವಾಳಿಸುವವರಿಗೆ ಮೂರು ಕೋಟಿ, ಟ್ರಾವೆಲ್ಸ್ ಏಜೆನ್ಸಿಗಳಿಗೆ ಎರಡೂವರೆ ಕೋಟಿ, ಸೆಕ್ಯೂರಿಟಿ ಏಜೆನ್ಸಿಗಳಿಗೆ ಮೂರು ಕೋಟಿ, ಬೀದಿ ದೀಪಗಳ ನಿರ್ವಹಣೆದಾರರಿಗೆ ಐದು ಕೋಟಿ, ಬೀದಿ ಬದಿ ಸಸಿ ನೆಡುವವರಿಗೆ 2 ಕೋಟಿ... ಇವೆಲ್ಲವನ್ನೂ ಮೀರಿ ರಸ್ತೆ ಡಾಂಬರ್ ಪ್ಯಾಚ್‌ವರ್ಕ್‌ಪಾಲ್ಟಿಂಗ್, ಮೋರಿ ಸಿಲ್ಟು ಕಂಟ್ರ್ಯಾಕ್ಟರುಗಳಿಗೆ ಬರೋಬ್ಬರಿ ಸಾವಿರ ಕೋಟಿ....


ಹೀಗೆ ಸಾಗುವ ಬಾಕಿದಾರರ ಪಟ್ಟಿಯು ಬಿಬಿಎಂಪಿಯ ಘನ ದಾರಿದ್ರ್ಯದ ಕಾಳತೆಯನ್ನು ಬಿಚ್ಚಿಡುತ್ತದೆ. ಕಳೆದ ವಿಧಾನಸಭೆಯಲ್ಲಿ ಬೆಂಗಳೂರಿಗೆಂದೇ ಪ್ರತ್ಯೇಕ ಬಜೆಟ್ ಮಾಡುವ ಭರವಸೆ ಕೊಟ್ಟ ಬಿಜೆಪಿ ತಾನಿತ್ತ ಒಂದೇ ಒಂದು ಆಶ್ವಾಸನೆಯನ್ನು ಈಡೇರಿಸುವುದು ಹಾಳಾಗಲಿ ಪ್ರತಿಷ್ಠಿತ ಕೃಷ್ಣರಾಜೇಂದ್ರ ಮಾರುಕಟ್ಟೆಯನ್ನೇ ಬ್ಯಾಂಕ್ ಸಾಲಕ್ಕೆ ಒತ್ತೆಯಿಡಬಹುದೆಂಬ ನಿರೀಕ್ಷೆಯಾದರೂ ಯಾರಿಗಿತ್ತು?

ಈ ರೀತಿ ಐತಿಹಾಸಿಕ ಮಾರುಕಟ್ಟೆಯನ್ನೇ ಬ್ಯಾಂಕಿಗೆ ಅಡವಿಟ್ಟು ದಿವಾಳಿ ಮೆರೆದ ಬಿಜೆಪಿ ತನ್ನ ಒಂದೊಂದೇ ಆಸ್ತಿಯನ್ನು ಒತ್ತೆಯಿಟ್ಟು ಪಡೆದ ಸಾಲವನ್ನು ಏನು ಮಾಡುತ್ತದೆಯೆಂಬ ಪ್ರಶ್ನೆಯೇ ಬೆಂಗಳೂರಿಗಂಟಿದ ಅಪಾಯದ ಮುನ್ಸೂಚನೆಯಂತಿದೆ. ಬೆಂಗಳೂರಿಗೆ ಏನೂ ಮಾಡದೆ ಹೋದರೂ ಕತ್ತೆ ಬಾಲ, ಇಷ್ಟು ಅಳಿದುಳಿದ ಆಸ್ತಿಯನ್ನಾದರೂ ಅದರ ಪಾಡಿಗೆ ಉಳಿಸಿಬಿಡಲಿ ಎಂಬ ನಿರಾಶೆಗೆ ಬೆಂಗಳೂರಿನ ಜನ ಬಿದ್ದಿದ್ದಾರೆ. ಈ ಫೆಬ್ರವರಿ ಕಳೆಯಿತೆಂದರೆ ಮುಂಬರುವ ಮಾರ್ಚ್ ತಿಂಗಳಿಗೆ ತನ್ನ ನೌಕರರ ಸಂಬಳ ಕೊಡುವುದಕ್ಕೂ ಬಿಬಿಎಂಪಿಯಲ್ಲಿ ದುಡ್ಡಿಲ್ಲ. ಸ್ವಾತಂತ್ರ್ಯಾ ನಂತರ ಬಂದ ಏನೆಲ್ಲಾ ಬಂದ ಎಲ್ಲೋ ಸರ್ಕಾರಗಳು ಏನೆಲ್ಲಾ ಅಪರಾತಪರಾ ನಡೆಸಿದಾಗ್ಯೂ, ತನ್ನ ಆಸ್ತಿಪಾಸ್ತಿಯನ್ನೆ ಒತ್ತೆ ಇಟ್ಟು ಸಾಲ ಪಡೆಯುವಂತಾ ದುರ್ಗತಿ ಬಿಬಿಎಂಪಿಗೆ ಬಂದಿರಲಿಲ್ಲ.


ಇದಕ್ಕೆಲ್ಲ ಕಾರಣ ಹುಡುಕುತ್ತಾ ಹೋದರೆ once again ಉತ್ತರವಾಗಿ ಸಿಗುವುದು ಬಿಜೆಪಿ ಪುಢಾರಿಗಳ ಭ್ರಷ್ಟಾಚಾರ. ನೂರು ವಾರ್ಡ್‌ಗಳಿದ್ದದ್ದನ್ನು ಇನ್ನೂರು ವಾರ್ಡ ಮಾಡಿ ಎಲೆಕ್ಷನ್ನಿಗೆ ಹೋಗುವ ಮೊದಲೇ ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರೆಲ್ಲ ಬಿಬಿಎಂಪಿಯನ್ನು ಗುಡಿಸಿ ಗುಂಡಾಂತರ ಮಾಡಿಯಾಗಿತ್ತು. ಮೋರಿಯ ಹೂಳೆತ್ತುವುದು, ಚರಂಡಿ ಕಾಮಗಾರಿ ಮತ್ತು ರಸ್ತೆಗೆ ಟಾರ್ ಹಾಕುವುದಕ್ಕೆಂದೇ 2000 ಕೋಟಿ ರೂಪಾಯಿಗಳ ಟೆಂಡರ್ ಕರೆಯಲಾಯಿತು. ಇದು ಈ ವರ್ಷದ ಕತೆಯಾದರೆ ಇದರ ಹಿಂದಿನ ವರ್ಷ ಇದೇ ಕಾಮಗಾರಿಗಳ ಹೆಸರಲ್ಲಿ 4000 ಕೋಟಿ ರೂಪಾಯಿಗಳನ್ನು ಹುಡಿಹಾರಿಸಿದ್ದರು.




ಇದರಿಂದಾಗಿ ಸರಿಸುಮಾರು 6700 ಕೋಟಿ ರೂಪಾಯಿಗಳು ಪೋಲಾಗಿ ಹೋಗಿತ್ತು. ಮೋರಿ ಹೂಳೆತ್ತುವುದು ಅಂದರೆ ಆಯಾ ಶಾಸಕರ ಬಿಜೆಪಿ ನಾಯಕರ ಛೇಲಾಗಳಿಗೆ ಕಳ್ಳಬಿಲ್ಲು ಹಾಕಿ ಕೋಟಿಗಟ್ಟಲೆ ವರ್ಗಾಯಿಸುವುದು ಎಂದೇ ಅರ್ಥ. ಕಳೆದ ವರ್ಷ ಹೂಳೆತ್ತಿದ್ದ ಮೋರಿಗೆ ಮತ್ತೆ ಈ ವರ್ಷ ಹೂಳೆತ್ತಲಾಗಿದೆ ಎಂದರೆ ಅದನ್ನು ನೋಡುವವರ್‍ಯಾರು? ಮಾಡಿದ ಕಾಮಗಾರಿ ಅಸಲಿಯಾ ನಕಲಿಯಾ ಎಂದು ಪರೀಕ್ಷಿಸುವವರ್‍ಯಾರು?



ಒಳಚರಂಡಿ ಕಾಮಗಾರಿ ಮತ್ತು ರಸ್ತೆಗೆ ಟಾರ್ ಹಾಕಿಸಿದ್ದೂ ಇಂಥದ್ದೇ ಬೋಗಸ್ ಬಿಲ್ ಲೂಟಿಗೆ ಮೂಲವಾಯಿತೇ ಹೊರತು ಇದರಿಂದ ಬೆಂಗಳೂರಿಗೆ ಶಾಶ್ವತ ಪ್ರಯೋಜನವಾಗಲೇ ಇಲ್ಲ. ಕುಡಿವ ನೀರಿನ ಯೋಜನೆಗೋ, ರಸ್ತೆ ಅಗಲೀಕರಣಕ್ಕೋ, ಸಿಮೆಂಟ್ ರಸ್ತೆಗಳನ್ನು ನಿರ್ಮಿಸುವುದಕ್ಕೋ ಇಷ್ಟೇ ಹಣ ಹಾಕಿದ್ದರೆ ಇನ್ನು ಐದು ವರ್ಷಗಳ ಕಾಲ ಟಾರ್ ಹಾಕುವ ದುಡ್ಡನ್ನು ಉಳಿಸಬಹುದಿತ್ತು.



ಇದು ಒತ್ತಟ್ಟಿಗಿರಲಿ ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ಇಬ್ಬರು ಮೇಯರ್‌ಗಳಾದರಲ್ಲವೆ? ಪ್ರತಿವರ್ಷ 8 ಸಾವಿರ ಕೋಟಿ, ಏಳು ಸಾವಿರ ಕೋಟಿ ಎಂದು ಈ ಮೇಯರ್‌ಗಳು ಮಂಡಿಸಿದ ಬಜೆಟ್ಟಿಗೆ ಏನಾದರೂ ಅರ್ಥವಿರಬೇಕಲ್ಲವೆ?



ಕರ್ನಾಟಕ ಮುನ್ಸಿಪಲ್ ಆಕ್ಟ್ ಪ್ರಕಾರ ಯಾವುದೇ ಪುರಸಭೆ, ಪಾಲಿಕೆಗಳು ತಮ್ಮ ಆದಾಯ ಎಷ್ಟಿದೆಯೋ ಅದನ್ನು ಮೀರಿದ ಮೊತ್ತಕ್ಕೆ ಬಜೆಟ್ ಮಂಡಿಸುವಂತಿಲ್ಲ. ಆ ಪ್ರಕಾರ ಬಿಬಿಎಂಪಿ ಯಾವುದೇ ಕಾರಣಕ್ಕೂ 2200 ಕೋಟಿಗೂ ಮೀರಿದ ಬಜೆಟ್ ಮಂಡಿಸುವಂತೆಯೇ ಇಲ್ಲ. ಆದರೆ ಬಿಜೆಪಿಯ ಮೇಯರ್‌ಗಳು ಎಂಟು ಸಾವಿರ ಕೋಟಿಯ ಬಜೆಟ್ ಮಂಡಿಸುತ್ತಿದ್ದಾರೆ. ಇರುವ 2200 ಕೋಟಿಯ ಆದಾಯವನ್ನೂ ಮೂರು ಪಟ್ಟೋ ನಾಲ್ಕು ಪಟ್ಟೋ ಏರಿಸಿ ಏಕೆ ಬೋಗಸ್ ಬಜೆಟ್ ಮಂಡಿಸುತ್ತಾರೆಂದರೆ ಈ ರೀತಿ ಸಿಕ್ಕಾಪಟ್ಟೆ ಬಜೆಟ್ ಮೊತ್ತ ಏರಿಸಿದಷ್ಟೂ ಸಿಗುವ ಸಾಲದ ಮೊತ್ತವೂ ದುಪ್ಪಟ್ಟು ಮುಪ್ಪಟ್ಟಾಗುತ್ತದೆ. ಕೇವಲ 2000 ಕೋಟಿಯ ಬಜೆಟ್ ಮಾಡಿ ಹತ್ತೋ ಇಪ್ಪತ್ತೋ ಕೋಟಿಯ ಸಾಲ ಎತ್ತುವುದಕ್ಕಿಂತ ಅದೇ ಬಜೆಟ್ ಮೊತ್ತವನ್ನು 9000 ಕೋಟಿಗೆ ಏರಿಸಿಬಿಟ್ಟರೆ ಇನ್ನೂರೋ ಮುನ್ನೂರೋ ಕೋಟಿ ಸಾಲ ಎತ್ತಬಹುದಲ್ಲವೇ?

ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಮೇಯರ್‌ಗಳು ಮಂಡಿಸಿದ 8 ಸಾವಿರ 9 ಸಾವಿರ ಕೋಟಿಯ ಬಜೆಟ್ಟೆಲ್ಲವೂ ಬ್ಯಾಂಕ್ ಸಾಲದ ಆಸೆಗೆ ಬಿದ್ದು ನಡೆಸಿದ ಕಪಟ ನಾಟಕವೇ ಹೊರತು ಆ ಮೊತ್ತದ ಅಭಿವೃದ್ಧಿಯಾಗಲಿ, ಕಾಮಗಾರಿಗಳಾಗಲಿ ನಡೆಯಲೇ ಇಲ್ಲ. ಯಾವ ವರ್ಷವೂ 2200 ಕೋಟಿಗೂ ಮೀರಿದ ವಹಿವಾಟು ಸಾಧ್ಯವೇ ಇಲ್ಲ. ಇದಕ್ಕೆ ಮೀರಿ ನೂರೋ ಇನ್ನೂರೋ ಕೋಟಿ ಹೆಚ್ಚಾದರೂ ಅದು ಪಡೆದ ಬ್ಯಾಂಕ್ ಸಾಲದ ದುಡ್ಡೇ ಹೊರತು ಇನ್ನಾವ ಉತ್ಪತ್ತಿಯಾಗಲಿ ಲಾಭವಾಗಲಿ ಪಾಲಿಕೆಗೆ ಇಲ್ಲವೇ ಇಲ್ಲ.

ಇನ್ನು ಪ್ರತಿ ವರ್ಷ ಪಾಲಿಕೆಗೆ ಅಷ್ಟು ಸಾವಿರ ಕೊಡ್ತೀನಿ ಇಷ್ಟು ಸಾವಿರ ಮಂಜೂರು ಮಾಡ್ತೀನಿ ಎಂದು ಮುಖ್ಯಮಂತ್ರಿ ಯಾಗಿದ್ದ ಯಡಿಯೂರಪ್ಪ ಭಡಾಯಿ ಕೊಚ್ಚಿದರಲ್ಲವೆ?

ಯಡಿಯೂರಪ್ಪ ತಾನು ವಿಧಾನಮಂಡಲದಲ್ಲಿ ಘೋಷಿಸಿದ್ದ 1500 ಕೋಟಿ ರೂಪಾಯಿಗಳ ಅನುದಾನವನ್ನು ಕೊನೆಗೂ ಕೊಡಲೇ ಇಲ್ಲ. ಆನಂತರ ಬಂದ ಸದಾನಂದ ಗೌಡರೂ ವೀರಾವೇಶದಲ್ಲಿ ಘೋಷಿಸಿದ್ದ ಸಾವಿರ ಕೋಟಿ ಈತನಕ ಕೊಟ್ಟಿಲ್ಲ!

ಇದು ಬಿಜೆಪಿ ಸರ್ಕಾರದ ಬೆಂಗಳೂರು ನಿರ್ಮಾಣದ ವೈಖರಿಯಾದರೆ ಮತ್ತೊಂದೆಡೆ ಅಶೋಕ್ ಗ್ಯಾಂಗ್, ಮುನಿರಾಜು ಗ್ಯಾಂಗ್, ಯಲಹಂಕದ ವಿಶ್ವನಾಥ್ ಪಟಾಲಮ್, ಸೋಮಣ್ಣನ ಗ್ಯಾಂಗ್, ಕಟ್ಟಾ ಕೂಟಗಳು ಒಂದೊಂದು ದಿಕ್ಕಿನಿಂದ ಬಿಬಿಎಂಪಿಯ ಲೂಟಿಗೆ ನಿಂತವು. ಇನ್ನೊಂದೆಡೆ ಈಗಾಗಲೇ ಮಾಡಿದ ಸಾಲವೇ ಸಾವಿರ ಕೋಟಿಗೂ ಮೀರಿ ಕಳೆದ ವರ್ಷವಷ್ಟೇ ಹೈಕೋರ್ಟ್ ಬಿಬಿಎಂಪಿಯ ಆಸ್ತಿಯೊಂದನ್ನು ಹರಾಜಿಗಿಟ್ಟು ಬ್ಯಾಂಕ್ ಸಾಲ ಜಪ್ತಿ ಮಾಡುವಂತೆ ಆದೇಶ ನೀಡಿದ್ದು ಇಡೀ ಬಿಜೆಪಿಯ ದುರಾ ಡಳಿತಕ್ಕೆ ಹಿಡಿದ ಕನ್ನಡಿಯಂತಿತ್ತು.

ಇದರ ಪರಮಾವಧಿಯೇ ಈಗ ಹುಡ್ಕೋ ಬ್ಯಾಂಕಿಗೆ ಐನೂರು ಕೋಟಿಗೆ ಒತ್ತೆಯಿಟ್ಟಿರುವ ಐತಿಹಾಸಿಕ ಕೆ.ಆರ್. ಮಾರುಕಟ್ಟೆಯ ದುರ್ಗತಿ. ಬೆಂಗಳೂರಿನ ಸಾರ್ವಜನಿಕ ಸೊತ್ತನ್ನು ಒತ್ತೆ ಇಟ್ಟು ಸಾಲಕ್ಕೆ ಕೈಚಾಚುವ ಮಟ್ಟಿಗೆ ಬಿಜೆಪಿ ಸರ್ಕಾರ ಲಜ್ಜೆಗೆಟ್ಟಿದೆ. ಮುಂದೊಮ್ಮೆ ಸಾಲ ಕಟ್ಟದೆ ಹೋದರೆ ಕಲಾಸಿಪಾಳ್ಯದ ಮಾರುಕಟ್ಟೆ ಸಾಲಕ್ಕೆ ಜಪ್ತಾಗುತ್ತದೆ. ಆನಂತರ ಕಬ್ಬನ್ ಪಾರ್ಕ್, ಲಾಲ್‌ಭಾಗ್, ಕೋಟೆ ಮೈದಾನ, ವಿವಿಧ ಬಡಾವಣೆಗಳ ತರಕಾರಿ ಮಾರುಕಟ್ಟೆ, ಪಾರ್ಕ್, ಸ್ಮಶಾನಗಳನ್ನು ಬಂದಷ್ಟು ರೇಟಿಗೆ ಅಡವಿಟ್ಟು ಸಾಲ ಎತ್ತವುದಕ್ಕೂ ಹೇಸುವವರಲ್ಲ ಈ ಬಿಜೆಪಿ ನಾಯಕರು.

ಕಬ್ಬನ್ ಪಾರ್ಕ್ ಒತ್ತೆಯಿಟ್ಟರೆ ಕಮ್ಮಿಯೆಂದರೂ ಐದು ಸಾವಿರ ಕೋಟಿ ಸಾಲ ಹುಟ್ಟುತ್ತದೆ. ಲಾಲ್‌ಭಾಗ್ ಒತ್ತೆಯಿಟ್ಟರೂ ಅಷ್ಟೇ ಮೊತ್ತದ ಸಾಲ ಹುಟ್ಟುತ್ತದೆ. ಇನ್ನು ಪಾರ್ಕ್, ಆಟದ ಮೈದಾನ, ಆಯಾ ಬಡಾವಣೆಗಳ ಹಳೇ ಮಾರುಕಟ್ಟೆಗಳನ್ನು ಒತ್ತೆಯಿಟ್ಟರೆ ನೂರೋ ಇನ್ನೂರೋ ಕೋಟಿ ಗಿಟ್ಟುವುದು ಶತಸ್ಸಿದ್ಧ. ಎಲ್ಲಾ ಮುಗಿದು ಪಾಲಿಕೆಯ ಕೇಂದ್ರ ಕಚೇರಿ, ಐತಿಹಾಸಿಕ ಮೆಯೋಹಾಲ್ ಕೊನೆಗೆ ವಿಧಾನಸೌಧವನ್ನೂ ಬೇಕಾದರೂ ಸಾಲಕ್ಕೆ ಒತ್ತೆ ಇಡಲು ಬಿಜೆಪಿ ನಾಯಕರು ರೆಡಿ.

ಕೃಷ್ಣರಾಜೇಂದ್ರ ಮಾರುಕಟ್ಟೆಯನ್ನೇ ಅಡವಿಟ್ಟವರು ನಾಳೆ ಕಬ್ಬನ್ ಪಾರ್ಕನ್ನು ಅಡವಿಡಲಾರರು ಎಂಬುದಕ್ಕೆ ಏನು ಗ್ಯಾರಂಟಿ. ವಿರೋಧ ಪಕ್ಷಗಳಾಗಲಿ, ರಾಜಧಾನಿಯ ಯಾರೋ ಪ್ರಜ್ಞಾ ವಂತರಾಗಲಿ ಪ್ರತಿಭಟಿಸದೇ ಇನ್ನೂ ಬಾಯಿ ಮುಚ್ಚಿಕೂತಿದ್ದಾರಲ್ಲರೇ ಇದಲ್ಲವೇ ಅಸಲಿ ದುರಂತ?

• ರಾ. ಸೋಮನಾಥ್

ಗೆಳೆಯ ವೀರಣ್ಣ ಮಡಿವಾಳರಿಗೆ ಅಭಿನಂದನೆ ಮತ್ತು ಸಲಹೆ

ಕವಿಮಿತ್ರ ವೀರಣ್ಣ ಮಡಿವಾಳರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಇದೇ ಮೊದಲ ಬಾರಿಗೆ ಆರಂಭಿಸಿರುವ ಯುವ ಪ್ರತಿಭಾವಂತ ಸಾಹಿತಿ ಪ್ರಶಸ್ತಿ ಸಿಕ್ಕಿದೆ.

ಅವರಿಗೆ ಅಭಿನಂದನೆಗಳು.

ಬಹುಶಃ ಕವನಸಂಕಲನವೊಂದು ಗಳಿಸಬಹುದಾದ ಗರಿಷ್ಠ ಮಾನ್ಯತೆ ಹಾಗೂ ಪ್ರಶಸ್ತಿಗಳನ್ನು ವೀರಣ್ಣನ 'ನೆಲದ ಕರುಣೆಯ ದನಿ' ಸಂಕಲನ ಈಗಾಗಲೇ ಪಡೆದಿದೆ. ಬಹುಶಃ ಈಗಿನದ್ದು ನಾಲ್ಕನೇ ಪ್ರಶಸ್ತಿ ಇರಬಹುದು. ಕೇವಲ ಪ್ರಶಸ್ತಿ ಮಾತ್ರವಲ್ಲ ಕಾವ್ಯಾಸಕ್ತರಿಗೆ ವೀರಣ್ಣನ ಕವನ ಕಟ್ಟುವ ಪರಿಯೂ, ಅಂತರ್ಗತವಾಗಿ ಧ್ವನಿಸುವ ಜೀವಪರ ಕಾಳಜಿಗಳೂ ಇಷ್ಟವಾಗಿವೆ. ಜನ ಈ ಸಂಕಲನವನ್ನು ಕೊಂಡೂ ಓದಿದ್ದಾರೆ.

ಸಾಹಿತಿಯಾಗಲು ಬರಹಗಾರರೊಬ್ಬರಿಗೆ ಇದಕ್ಕಿಂತ ಇನ್ನೇನು ಬೇಕು. ಹೇಳಿ?

ಆದರೆ ವೀರಣ್ಣ ಎಚ್ಚೆತ್ತುಕೊಳ್ಳಬೇಕಿರುವುದು ಇಲ್ಲಿಯೆ! ಈ ಪ್ರಶಸ್ತಿಗಳು, Recognitionಗಳೆಲ್ಲಾ ಅವರಲ್ಲಿ ಇನ್ನಷ್ಟು ಸಂಕೋಚ ಹಾಗೂ ವಿನಯಗಳನ್ನು ಉಳಿಸಿ, ಬೆಳೆಸುವಂತಾಗಲಿ.



ಅತ್ಯಂತ ಸರಳ ಯುವಕನಾದ ವೀರಣ್ಣ ಹಳ್ಳಿಗಾಡಿನ ಪುಟ್ಟ ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳುತ್ತಿದ್ದಾರೆ. ಅವರು ಈ ಪ್ರಶಸ್ತಿಗಳ ಬಗ್ಗೆ ನಿರ್ವ್ಯಾಮೋಹವನ್ನೂ ಕಾವ್ಯದ ಬಗ್ಗೆ ಹೆಚ್ಚಿನ ವ್ಯಾಮೋಹವನ್ನೂ ಬೆಳೆಸಿಕೊಳ್ಳಲಿ ಎಂದು ಆಶಿಸುತ್ತೇವೆ.

ಈ ಮಧ್ಯೆ ಅಕಾಡಮಿಯ ಈ ಪ್ರಶಸ್ತಿ ಬಗ್ಗೆ ಪ್ರಕಟವಾಗಿರುವ ಪತ್ರಿಕಾ ವರದಿಗಳು ಕುತೂಹಲಕಾರಿಯಾಗಿವೆ. ಈ ಬಾರಿ ವೀರಣ್ಣ ಹಾಗೂ ವಿಕ್ರಮ್ ಸಂಪತ್ ಎಂಬಿಬ್ಬರಿಗೆ ಪ್ರಶಸ್ತಿ ಸಿಕ್ಕಿದೆ. ವಿಕ್ರಂ 'ಮೈ ನೇಮ ಈಸ್ ಗೌಹಾರ್‌ಜಾನ್' ಎಂಬ ಹೆಸರಿನ ಆಸ್ಥಾನ ಗಾಯಕಿಯೊಬ್ಬರ ಬಗ್ಗೆ ಬರೆದಿರುವ ಪುಸ್ತಕಕ್ಕೆ ಈ ಪ್ರಶಸ್ತಿ ಸಿಕ್ಕಿದೆ.

ಆಶ್ಚರ್ಯವೇನೆಂದರೆ ಬಹುತೇಕ ಕನ್ನಡ ಪತ್ರಿಕೆಗಳು ಇವರಿಬ್ಬರ ಬಗ್ಗೆಯೂ ವರದಿ ಪ್ರಕಟಿಸಿವೆ. ದಿ ಹಿಂದೂ ಕೂಡ ಹಾಗೇ ಬರೆದಿದೆ. ಆದರೆ ಟೈಮ್ಸ್ ಆಫ್ ಇಂಡಿಯಾ ಇಂಗ್ಲಿಷ್ ಪತ್ರಿಕೆ ಮಾತ್ರ ವೀರಣ್ಣನ ಹೆಸರೂ ಎತ್ತದೆ ಕೇವಲ ವಿಕ್ರಂ ಸಂಪತ್ ಬಗ್ಗೆ ಮಾತ್ರ ಸುದ್ದಿ ಪ್ರಕಟಿಸಿದೆ. ಜಾತಿ, ಬಣ್ಣ, ಇಂಗ್ಲಿಷ್ ಭಾಷೆ ಜೊತೆಗೆ ಹೈ ಸೊಸೈಟಿಯ ಪರವಿರುವ ಟೈಮ್ಸ್ ಪತ್ರಕರ್ತರ ಗಲೀಜು ಪ್ರವೃತ್ತಿ ಇದು.

ಅಥಣಿಯಲ್ಲಿ ಸವದಿಯ 'ಬ್ಲೂಫಿಲಂ' ರ್‍ಯಾಲಿ



ಸದನದಲ್ಲಿ ಸೆಕ್ಸ್ ಫಿಲ್ಮ್ ಪೌರುಷ ಮೆರೆದು ಮಾನದ ಜೊತೆಗೆ ಮಂತ್ರಿ ಪದವಿಯನ್ನೂ ಕಳೆದುಕೊಂಡ ಲಕ್ಷ್ಮಣ ಸವದಿ ಈಗ ವಿಲಕ್ಷಣ ದುಸ್ಸಾಹಸವೊಂದಕ್ಕೆ ಕೈ ಇಟ್ಟಿದ್ದಾನೆ.


ರೇಪ್ ಮಾಡಿ ಜೈಲು ಪಾಲಾದ ಹಾಲಪ್ಪ, ಹಾದರ ನಡೆಸಿಯೂ ಮಂತ್ರಿಯಾದ ರೇಣುಕಾಚಾರ್ಯ, ಈಗಲೂ ಜೈಲಲ್ಲಿರುವ ಗಾಲಿರೆಡ್ಡಿ, ಜೈಲು ನೋಡಿ ಬಂದ ಯಡ್ಡಿ ಮತ್ತು ಜೈಲು ಪಾಲಾಗದೇ ತನ್ನ ಕೀಚಕ ಚೇಷ್ಟೆ ಮುಂದುವರೆಸಿಕೊಂಡೇ ಬಂದ ನಿರಾಣಿ; ಹೀಗೆ ಬಿಜೆಪಿ ಸರ್ಕಾರದ ಕಳಂಕಿತ ಮಂತ್ರಿಸಮೂಹದ ಯಾರೊಬ್ಬರೂ ಕೈಹಾಕದ ಮಾನಗೇಡಿ ಕೃತ್ಯವೊಂದಕ್ಕೆ ಸವದಿ ಕೈಹಾಕಿದ್ದಾನೆ.

ಅದು ತನ್ನ ಕೊಳಕು ಮುಖಕ್ಕೆ ಜನಪ್ರಿಯತೆಯ ಗಂಧ ಲೇಪಿಸಿಕೊಳ್ಳುವ ಭಂಡ ಸಮಾವೇಶ!

ಬಹುಶಃ ಬಿಜೆಪಿ ಸರ್ಕಾರದ ಹಿರೀಕ ವಿ.ಎಸ್. ಆಚಾರ್ಯ ಮೊನ್ನೆ ತೀರಿಕೊಳ್ಳದೇ ಹೋಗಿದ್ದರೆ ಇದೇ ಫೆಬ್ರವರಿ 16 ರಂದು ಅಥಣಿಯ ಐಗಳಿ ಕ್ರಾಸ್‌ನ ಮಾಣಿಕ್ಯ ಪ್ರಭು ಮಠದ ಆವರಣದಲ್ಲಿ ಸರಿಸುಮಾರು 1 ಲಕ್ಷ ಮಂದಿ ಬಾಡಿಗೆ ರೈತರನ್ನು ಸೇರಿಸಿ ಮಾಡಿದ ಪಾಪವನ್ನು ಮುಚ್ಚಿಹಾಕುವ ಅದ್ದೂರಿ ರ್‍ಯಾಲಿಯೊಂದನ್ನು ಈ ಹೊತ್ತಿಗಾಗಲೇ ಸವದಿ ಮಾಡಿ ಮುಗಿಸಿರುತ್ತಿದ್ದ. ದುರಂತವೆಂದರೆ ಮುಖ್ಯಮಂತ್ರಿ ಸದಾನಂದ ಗೌಡರ ಸನ್ನಿಧಿಯಲ್ಲೇ ಇಂಥದೊಂದು ದುರಾಚಾರಿ ಸಮಾವೇಶ ಏರ್ಪಾಟಾಗಿದ್ದದ್ದು. ತನ್ನ ಗುರು ಮಾಜಿ ಮು.ಮಂ. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ, ಜಲಸಂಪನ್ಮೂಲ ಸಚಿವ ಬಸವರಾಜ ಬೊಮ್ಮಾಯಿ, ಮತ್ತೊಬ್ಬ ಮಂತ್ರಿ ಉಮೇಶ್ ಕತ್ತಿ, ಬಿಜೆಪಿ ಸರ್ಕಾರದ ಇತರೇ ಮಂತ್ರಿಗಳಾದ ಉದಾಸಿ, ಕಾರಜೋಳ, ನಿರಾಣಿ, ಜಾರಕಿಹೊಳಿ, ಸೋಮಣ್ಣ, ನಾರಾಯಣ ಸ್ವಾಮಿ ಇತ್ಯಾದಿಗಳಲ್ಲದೆ ಬಿಜೆಪಿಯ ಬರೋಬ್ಬರಿ 26 ಮಂದಿ ಶಾಸಕರನ್ನು ಅಥಣಿಗೆ ಕರೆಸಿಕೊಂಡು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಈ ಸಮಾವೇಶಕ್ಕೆ ಸವದಿ ಸುರಿಯುತ್ತಿರುವ ಹಡಬೆ ದುಡ್ಡಿನ ಮೊತ್ತವೇ ಮೂರು ಕೋಟಿ!

ಒಂದೇ ವೇದಿಕೆಯಲ್ಲಿ

ಸದ್ಯ ವಿ.ಎಸ್. ಆಚಾರ್ಯರ ನಿಧನದಿಂದಾಗಿ ಒಂದು ವಾರಕ್ಕೆ ಮುಂದೂಡಲ್ಪಟ್ಟ ಈ ಕಾರ್ಯಕ್ರಮದ



• ರಾ. ಸೋಮನಾಥ್

ಹುಚ್ಚಾಟ, ಅಸಹ್ಯ ಮತ್ತು ಪೇಚಾಟದ ವಿವರಗಳು ನಿಜಕ್ಕೂ ಕುತೂಹಲಕರ.

ಸವದಿ ಸದ್ಯ ಸದನದಲ್ಲಿ ಬ್ಲೂಫಿಲ್ಮ್ ವೀಕ್ಷಿಸಿ ಮಂತ್ರಿ ಪದವಿಗೆ ಸಂಚಕಾರ ತಂದುಕೊಂಡ ಕಳಂಕಿತ ಶಾಸಕ. ಕಾನೂನುಬದ್ಧವಾಗಿಯೇ ಸ್ಪೀಕರ್ ಭೋಪಯ್ಯ ಸವದಿ ಸಮೇತ ಮೂವರೂ 'ಸೆಕ್ಸ್ ಫಿಲ್ಮ್' ಮಂತ್ರಿಗಳನ್ನು ಅಮಾನತ್ತುಗೊಳಿಸಿದ್ದಾರೆ. ಹೀಗಾಗಿ ಸರ್ಕಾರವಾಗಲಿ, ಸರ್ಕಾರಿ ಅಧಿಕಾರಿಗಳಾಗಲಿ ಹಿಂದಿನಂತೆ ಸವದಿಯ ಅಣತಿಯನ್ನು ಪಾಲಿಸಬೇಕಿಲ್ಲ. ನೈತಿಕವಾಗಿ ಮುಖ್ಯಮಂತ್ರಿಯಾಗಲಿ, ಬಿಜೆಪಿ ಸರ್ಕಾರದ ಮಂತ್ರಿಗಳಾಗಲಿ ಈತನ ಜೊತೆ ವೇದಿಕೆ ಹಂಚಿಕೊಳ್ಳುವುದೇ ಅನಾಚಾರ. ಅದೂ ಎಂಥಾ ಪರಿಸ್ಥಿತಿಯಲ್ಲಿ ಸವದಿ ಒಂದು ಲಕ್ಷ ಜನ ಸೇರಿಸಿ ಜೈಕೂಗಿಸಿಕೊಳ್ಳುವ ಅಸಹ್ಯಕ್ಕೆ ಕೈಹಾಕಿದ್ದಾನೆಂದರೆ ಆತ ರೆಡ್‌ಹ್ಯಾಂಡ್ ಸಿಕ್ಕಿಬಿದ್ದೇ ಇನ್ನೂ ವಾರ ಕಳೆದಿಲ್ಲ.

ಅಷ್ಟಕ್ಕೂ ಕಾರ್ಯಕ್ರಮದ ವಿಷಯವಿದೆಯಲ್ಲ ಅದು ಇಡೀ ಅಥಣಿ ಮತ್ತು ಸುತ್ತಮುತ್ತಲ ಬೆಳಗಾವಿ, ಬಿಜಾಪುರ ಜಿಲ್ಲೆಗಳ ಜನರನ್ನು ಕಳಂಕದ ಗುಂಗಿನಿಂದ ಬೇರೆಡೆಗೆ ಹೊರಳಿಸುವ ಭಂಡತನವೇ ಹೊರತು ಮತ್ತೇನಲ್ಲ, ಫೆಬ್ರವರಿ 16 ರ ಗುರುವಾರ ಒಂದೇ ದಿನಕ್ಕೆ ಅಥಣಿಯೇ ಉದ್ಧಾರವಾಗಿ

ಸವದಿ ಸದ್ಯ ಸದನದಲ್ಲಿ ಬ್ಲೂಫಿಲ್ಮ್ ವೀಕ್ಷಿಸಿ ಮಂತ್ರಿ ಪದವಿಗೆ ಸಂಚಕಾರ ತಂದುಕೊಂಡ ಕಳಂಕಿತ ಶಾಸಕ. ಕಾನೂನುಬದ್ಧವಾಗಿಯೇ ಸ್ಪೀಕರ್ ಭೋಪಯ್ಯ ಸವದಿ ಸಮೇತ ಮೂವರೂ 'ಸೆಕ್ಸ್ ಫಿಲ್ಮ್' ಮಂತ್ರಿಗಳನ್ನು ಅಮಾನತ್ತುಗೊಳಿಸಿದ್ದಾರೆ. ಹೀಗಾಗಿ ಸರ್ಕಾರವಾಗಲಿ, ಸರ್ಕಾರಿ ಅಧಿಕಾರಿಗಳಾಗಲಿ ಹಿಂದಿನಂತೆ ಸವದಿಯ ಅಣತಿಯನ್ನು ಪಾಲಿಸಬೇಕಿಲ್ಲ. ನೈತಿಕವಾಗಿ ಮುಖ್ಯಮಂತ್ರಿಯಾಗಲಿ, ಬಿಜೆಪಿ ಸರ್ಕಾರದ ಮಂತ್ರಿಗಳಾಗಲಿ ಈತನ ಜೊತೆ ವೇದಿಕೆ ಹಂಚಿಕೊಳ್ಳುವುದೇ ಅನಾಚಾರ. ಆದರೆ ಬ್ಲೂಫಿಲ್ಮ್ ಕಳಂಕಿತ ಸವದಿಯ ಪಾಪ ಮುಚ್ಚಿಹಾಕಲು ಇಡೀ ಬಿಜೆಪಿ ಪಕ್ಷವೇ ಟೊಂಕಕಟ್ಟಿ ನಿಂತುಬಿಟ್ಟಿದೆ.

ಅಥಣಿಯ 'ಬ್ಲೂಫಿಲಂ'ನಲ್ಲಿ ಸವದಿಯ ಡ್ರೈವರ್!

ಇದನ್ನು ವಿಪರ್ಯಾಸವೆನ್ನಿ, ಕಾಕತಾಳೀಯವೆನ್ನಿ. ಲಕ್ಷ್ಮಣ ಸವದಿ ವಿಧಾನ ಸಭೆಯಲ್ಲೇ ಬ್ಲೂಫಿಲಂ ನೋಡಿ ಮಂತ್ರಿ ಪದವಿ, ಶಾಸಕ ಸ್ಥಾನ ಎರಡಕ್ಕೂ ಸಂಚಕಾರ ತಂದುಕೊಂಡನಲ್ಲವೇ? ಧಣಿಯೇ ಕಾಮುಕನಾದ ಮೇಲೆ ಇನ್ನು ಸವದಿಯ ಡ್ರೈವರ್‌ಗೆ ಅದರ ಸೋಂಕು ತಗುಲದೇ ಇರುವುದುಂಟಾ?

ಇತ್ತ ಬೆಂಗಳೂರಿನಲ್ಲಿ ಸವದಿ ಸೆಕ್ಸ್ ಫಿಲ್ಮ್ ಸಾಹಸ ಮೆರೆದ ಬೆನ್ನಲ್ಲೇ ಆತನ ಡ್ರೈವರ್‌ನ ಕೀಚಕ ಕಾಮವೂ ಕೆರಳಿಬಿಟ್ಟಿದೆ. ಧಣಿಗೆ ತಕ್ಕಂತೆ ಸವದಿಯ ಡ್ರೈವರ್ ತಾನೇ ಬ್ಲೂಫಿಲ್ಮ್ ತೆಗೆದು ಅದಕ್ಕೆ ತನಗೆ ಬಲಿಯಾದ ಹೆಂಗಸನ್ನೇ ಬಳಸಿಕೊಂಡು ಧಣಿಯ ವಿಕೃತಿಗೆ ಪ್ರತಿ ವಿಕೃತಿ ಮೆರೆದಿದ್ದಾನೆ. ಸದ್ಯ ಅಥಣಿಯಲ್ಲಿ ಕಂಡಕಂಡ ಪಡ್ಡೆಹುಡುಗರ ಮೊಬೈಲುಗಳ ತುಂಬೆಲ್ಲ ಸದ್ದಿಲ್ಲದೇ ಹರಿದಾಡುತ್ತಿರುವುದು ರಷ್ಮಿ ಸಂಜು ಮನ್ಸೂರ (ಹೆಸರು ಬದಲಿಸಿದೆ) ಎಂಬ ಮುಗ್ಧ ಹೆಂಗಸಿನ ಬೆತ್ತಲೆ ಚಿತ್ರಾವಳಿ!

30 ರ ಹರೆಯದ ಇಬ್ಬರು ಹೆಣ್ಣುಮಕ್ಕಳ ತಾಯಿ ರಷ್ಮಿ ಮನ್ಸೂರ ಅಥಣಿಯ ಸಮೀಪದ ಸತ್ತಿ ಗ್ರಾಮದವಳು. ಈಕೆಯ ಗಂಡ ಸಂಜು ಮನ್ಸೂರ ಅಂಗವಿಕಲ. ಅಥಣಿಯ ಶಾಸಕ ಲಕ್ಷ್ಮಣ ಸವದಿಯ ಮನೆ ಪಕ್ಕದಲ್ಲೇ ಈತನ ಮನೆಯಿತ್ತು, ಗಂಡ ಅಂಗವಿಕಲನಾದ್ದರಿಂದ ಬದುಕಲು ಬೇರೆ ಗತಿಯಿಲ್ಲದೆ ರಷ್ಮಿ ಮನ್ಸೂರ ಅಥಣಿಯ ಬಜಾರ್‌ನ ಆಲದಮರದ ಬುಡದಲ್ಲಿ ಕೂತು ಕಾಯಿಪಲ್ಲೆ ಮಾರಿ ಹೊಟ್ಟೆ ಹೊರೆಯಲಾರಂಭಿಸಿದ್ದಳು. ಆಕೆಯ ಸೌಂದರ್ಯವೋ ಈತನ ವಿಕೃತಿವೋ ಗೊತ್ತಿಲ್ಲ, ಮಂತ್ರಿ ಸವದಿಯ ಮನೆಗೆಂದು ಪ್ರತಿನಿತ್ಯ ತರಕಾರಿ ತರಲೆಂದು ಈಕೆಯ ಬಳಿಯೇ ಡ್ರೈವರ್ ಸಿದ್ದು ಮೋಟಗಿ ಬರುತ್ತಿದ್ದ.

ಮೂಲತಃ ಅಥಣಿಯವನಾದ ಸಿದ್ದು ಮೋಟಗಿ ಸವದಿಯ ಮನೆಗೆ ಡ್ರೈವರ್ ಕೆಲಸಕ್ಕೆ ಸೇರಿದ್ದು ಇಲ್ಲಿಗೆ ನಾಲ್ಕು ವರ್ಷದ ಹಿಂದೆ. ಈತನಿಗೂ 30 ರ ಹರೆಯ: ಮದುವೆಯಾಗಿದೆ. ಇಬ್ಬರು ಮಕ್ಕಳ ತಂದೆ. ಧಣಿಯ ವಿಕೃತಿ ಈತನಿಗೂ ಅಂಟಿರಬೇಕು. ಪ್ರತಿನಿತ್ಯ ಕಾಯಿಪಲ್ಲೆಗೆಂದು ರಷ್ಮಿ ಮನ್ಸೂರಳ ಬಳಿ ಬರುತ್ತಿದ್ದವನು ತಾನು ಮಂತ್ರಿ ಸಾಹೇಬರ ಡ್ರೈವರ್, ನಿನಗೇನೇ ಕೆಲಸವಿದ್ದರೆ ಹೇಳು ಮಾಡಿಸಿಕೊಡ್ತೀನಿ ಎಂದು ನಂಬಿಸಿದ್ದಾನೆ. ಇದೇ ಹೊತ್ತಿಗೆ ಆಕೆಯ ಗಂಡ ಸಂಜು ಮನ್ಸೂರ ಆಕೆ ತರಕಾರಿ ಮಾರಲು ಹೋಗುತ್ತಿದ್ದ ಹಾಗೆ ಯಾರೋ ಇನ್ನೊಬ್ಬಳು ಹೆಂಗಸನ್ನು ಮನೆಗೆ ಕರೆಸಿಕೊಂಡು ಕಳ್ಳಾಟ ಶುರುವಿಟ್ಟಿದ್ದಾನೆ. ಇದು ಹೇಗೋ ರಷ್ಮಿಗೆ ಗೊತ್ತಾಗಿ ಆಕೆ ತನ್ನ ಗಂಡ ಪರಸ್ತ್ರೀ ಜೊತೆ ಇದ್ದ ಗಳಿಗೆಯನ್ನೇ ಕಾದು ಆತನಿಗೆ ಬುದ್ಧಿ ಕಲಿಸುವಂತೆ ಸವದಿಯ ಡ್ರೈವರ್ ಸಿದ್ದು ಮೋಟಗಿಗೆ ಹೇಳಿದ್ದಾಳೆ.

ಸಿದ್ದುಗೂ ಇದೇ ಬೇಕಾಗಿತ್ತು, ನಿನ್ನ ಗಂಡನಿಗೆ ಸಾಹೇಬರು ಬಂದಿದ್ದೇ ಸರಿಯಾದ ಗತಿ ಕಾಣಿಸ್ತೀನಿ ಎಂದು ನಂಬಿಸಿದ್ದಾನೆ. ಇವತ್ತಲ್ಲ ನಾಳೆ ತನ್ನ ಗಂಡನನ್ನು ಸರಿದಾರಿಗೆ ತರಲು ಸಮಯ ಕಾಯುತ್ತಿದ್ದ ಆಕೆಯನ್ನು ಕ್ರಮೇಣ ಡ್ರೈವರ್ ಸಿದ್ದು ಮೋಟಗಿಯೇ ಪಳಗಿಸಿಕೊಂಡಿದ್ದಾನೆ. ಹೊತ್ತಲ್ಲದ ಹೊತ್ತಲ್ಲಿ ಆಕೆಯನ್ನು ಅಥಣಿಯ ಕೆಇಬಿ ಪಕ್ಕದ ಸಾಯಿಬಾಬಾ ಮಂದಿರದ ಬಾಜುವಿಗಿದ್ದ ನಿರ್ಜನ ಖಾಲಿ ಪ್ರದೇಶಕ್ಕೆ ಕರೆದೊಯ್ದು ತನ್ನ ಲಾಲಸೆಗೆ ಈಡು ಮಾಡಿದ್ದಾನೆ. ಸಾಲದ್ದಕ್ಕೆ ಆಗಾಗ ಮಂತ್ರಿ ಸಾಹೇಬರ ಕಾರಿನಲ್ಲೇ ಕಾಮಕೇಳಿ ಶುರುಹಚ್ಚಿಕೊಂಡಿದ್ದಾನೆ.

ಇಷ್ಟೇ ಆಗಿದ್ದರೆ ರಾದ್ಧಾಂತವಾಗುತ್ತಿರಲಿಲ್ಲ, ಆದರೆ ಡ್ರೈವರ್ ಸಿದ್ದುಗೆ ಧಣಿಯದ್ದೇ ಸೆಕ್ಸ್ ಫಿಲ್ಮ್ ಚಪಲ. ಮಂತ್ರಿ ಕಾರಿನಲ್ಲಿ ತಾನು ರಷ್ಮಿ ಜೊತೆ ನಡೆಸುತ್ತಿದ್ದ ಕಾಮಕೇಳಿಯನ್ನು ತನ್ನದೇ ಮೊಬೈಲಿನ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದಾನೆ. ಈ ರೀತಿ ತೆಗೆದ ಕಾಮಕೇಳಿಯ ವೀಡಿಯೋ ಅನ್ನೇ ಆಕೆಗೆ ತೋರಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದಾನೆ. ಏನೋ ಮಾಡಲು ಹೋಗಿ ಇನ್ನೇನೋ ಆಗಿದ್ದಕ್ಕೆ ಪರಿತಪಿಸಿದ ರಷ್ಮಿ ಹೇಗಾದರೂ ಮಾಡಿ ಈತನಿಂದ ಬಚಾವಾಗಲು ಪದೇಪದೇ ಈತನ ವಿಕೃತಿಗೆ ಬಲಿಯಾಗಿದ್ದಾಳೆ. ಕೊನೆಕೊನೆಗೆ ಈಕೆಯ ಸತ್ತಿ ಗ್ರಾಮದ ಮನೆಗೆ ಹೋಗಿ ಸಿದ್ದು ಪೀಡಿಸಲಾರಂಭಿಸಿದ್ದಾನೆ. ಇದು ಗೊತ್ತಾಗಿದ್ದೇ ಗಂಡ ಸಂಜು ಮನ್ಸೂರ ಈಕೆಯನ್ನು ಶಾಶ್ವತವಾಗಿ ಕೈಬಿಟ್ಟಿದ್ದಾನೆ. ಅಂತಿಮವಾಗಿ ಡ್ರೈವರ್ ಸಿದ್ದು ಸಾಹಸ ಬಯಲಾದದ್ದು ಇಲ್ಲಿಗೆ ವಾರದ ಹಿಂದೆ. ತನ್ನ ಮೊಬೈಲನ್ನು ಅಥಣಿಯ ಸಾಯಿ ಮೊಬೈಲ್‌ಗೆ ರಿಪೇರಿಗೆಂದು ಕೊಟ್ಟ ಸಿದ್ದುಗೆ ತಾನೇ ತೆಗೆದ ಸೆಕ್ಸ್ ಚಿತ್ರವನ್ನು ಮೊಬೈಲ್ ರಿಪೇರಿಯವನು ನೋಡಬಹುದೆಂಬ ಲೆಕ್ಕಾಚಾರವಾದರೂ ಎಲ್ಲಿತ್ತು?

ಹಾಗೇ ಸಾಯಿ ಮೊಬೈಲ್ಸ್ ಮೂಲಕ ಮೊಬೈಲ್ ಟು ಮೊಬೈಲ್ ಹರಿದಾಡಿದ ಡ್ರೈವರ್ ಸಿದ್ದೂನ ಕಾಮಕೇಳಿ ಇಡೀ ಅಥಣಿಗೆ ಗೊತ್ತಾಗುವ ಹೊತ್ತಿಗೆ ಧಣಿ ಸವದಿಯೇ ಸದನದಲ್ಲಿ ಕೂತು ಬ್ಲೂಫಿಲ್ಮ್ ನೋಡಿ ಸಿಕ್ಕಿಬಿದ್ದಿದ್ದ. ಇತ್ತ ಬೆಂಗಳೂರಿನಲ್ಲಿ ಮಂತ್ರಿ ಸವದಿಯ ಸೆಕ್ಸ್ ಫಿಲ್ಮ್ ಪೌರುಷವಾದರೆ ಅತ್ತ ಅಥಣಿಯಲ್ಲಿ ಡ್ರೈವರ್‌ನ ಕೀಚಕ ಚೇಷ್ಟೆ. ಅಥಣಿಯ ಜನ ಎಲ್ಲಿ ರೊಚ್ಚಿಗೆದ್ದು ಹೊಡೆದಾರೋ ಎಂದು ಸಿದ್ದು ಸದ್ಯಕ್ಕೆ ಅಥಣಿಯನ್ನೇ ಬಿಟ್ಟು ಪರಾರಿಯಾಗಿದ್ದಾನೆ. ಬಲಿಯಾದ ರಷ್ಮಿ ಬೀದಿಪಾಲಾಗಿದ್ದಾಳೆ.

ಧಣಿಯ ವಿಕೃತಿ ನೌಕರನಿಗೆ ಬಂತೆಂದರೆ ಇದಕ್ಕಿಂತ ಇನ್ನೇನಾಗಲು ಸಾಧ್ಯ. ತನ್ನ ಡ್ರೈವರ್‌ನ ಪಾಪಕ್ಕೆ ಬಲಿಯಾದ ರಷ್ಮಿ ಮನ್ಸೂರಳಿಗೆ ನ್ಯಾಯ ಕೊಡಿಸಲು ಸವದಿಗೆಲ್ಲಿ ಟೈಮಿದೆ? ಹಾಳಾಗಲಿ ಡ್ರೈವರ್ ಮಾಡಿದ ಅನಾಹುತಕ್ಕೆ ಪ್ರತ್ಯಕ್ಷವೋ ಪರೋಕ್ಷವೋ ತಾನು ಕೂಡ ಕಾರಣ ಎಂಬ ಕನಿಷ್ಠ ಪಾಪಪ್ರಜ್ಞೆಯೂ ಸವದಿಯನ್ನು ಕಾಡುತ್ತಿಲ್ಲವೆಂದರೆ ಸವದಿಯ ದುಷ್ಟತನಕ್ಕೆ ಏನೆನ್ನಬೇಕು? ಬೀದಿಗೆ ಬಿದ್ದ ಬಡಮಹಿಳೆಗೆ ನ್ಯಾಯ ಕೊಡಿಸುವವರ್‍ಯಾರು?

...ಯಿತು ಎಂಬಂತೆ ಫರೇವಾರಿ ಉದ್ಘಾಟನೆ, ...ಷ್ಠಾಪನೆ, ಗುದ್ದಲಿ ಪೂಜೆ ಇತ್ಯಾದಿ ...ಕ್ರಮಗಳನ್ನು ಸರ್ಕಾರ-ಬಿಜೆಪಿ-ಸವದಿ ...ಯಾಗಿ ರೂಪಿಸಿದ್ದಾರೆ.

ಪೈಕಿ ಮೊದಲನೆಯದು ಇಡೀ ಅಥಣಿಯನ್ನು ...ರಿಮಯ ಮಾಡುವ ಹಿಪ್ಪರಗಿ ನೀರಾವರಿ ...ನೆಯ ವಿವಿಧ ಉಪಯೋಜನೆಗಳ ಉದ್ಘಾಟನಾ ...ಕ್ರಮ. ಇದರಲ್ಲಿ ಸಾವಳಗಿ- ತುಂಗಳ ಏತ ...ರಿ ಯೋಜನೆಯನ್ನು ತನ್ನ ಗಾಡ್‌ಫಾದರ್ ...ಸಿ.ಎಂ. ಯಡ್ಡಿಯ ಕೈಯಾರೇ ...ಟಿಸುವುದು ಸವದಿಯ ಅಭಿಲಾಷೆ. ಇದಕ್ಕೆ ...ಕೊಂಡೇ ಸಿ.ಎಂ. ಸದಾನಂದ ಗೌಡರ ...ದ ಕರಿಮಸೂತಿ ಏತ ನೀರಾವರಿ ಯೋಜನೆ ...ಮತ್ತೊಂದು ನೀರಾವರಿ ಯೋಜನೆಯನ್ನು ...ಟಿಸುವ ಕಾರ್ಯಕ್ರಮ ರೂಪಿಸಲಾಗಿದೆ. ...! ಅಥಣಿಯ ಮಿನಿ ವಿಧಾನಸೌಧ, ತಾಲ್ಲೂಕು ...ಗಣ ಮತ್ತು ಸರಕಾರಿ ಪದವಿ ಮಹಾ...

ನೀರಾವರಿ ಇಲಾಖೆಯ ಮಹಾಭ್ರಷ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಳ್ಳಿ ಎಂಬಾತನನ್ನು ಛೂಬಿಟ್ಟು ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಖಾತೆಯ ಬಹುತೇಕ ಇಂಜಿನಿಯರ್‌ಗಳಿಂದ ಲಕ್ಷಗಟ್ಟಲೇ ಚಂದಾ ಎತ್ತಿದ್ದು ಒಂದೆಡೆಯಾದರೆ ಮತ್ತೊಂದೆಡೆ ಇಡೀ ಕರಿಮಸೂತಿ ಕಾಮಗಾರಿಯನ್ನು ಲೂಟಿ ಹೊಡೆದ ಖದೀಮ ಕಂಟ್ರಾಕ್ಟರ್ ಜಿ. ಶಂಕರ್ ಎಂಬಾತ ಇಡೀ ಹಿಪ್ಪರಗಿ ಪ್ರಾಜೆಕ್ಟ್‌ನ ಕಂಟ್ರಾಕ್ಟರುಗಳನ್ನು ಒಂದು ರೌಂಡ್ ಸುಲಿಗೆ ಮಾಡಿ ಅದನ್ನು ಸವದಿಯ ಕೈಗಿತ್ತಿದ್ದಾನೆ.

ಹಾಳಾಗಲಿ. ಮುಖ್ಯಮಂತ್ರಿ ಸದಾನಂದ ಗೌಡರಿಗಾಗಲಿ ಯಡ್ಡಿಗಾಗಲಿ ತಾವು ಉದ್ಘಾಟಿಸುತ್ತಿರುವ ಈ ನೀರಾವರಿ ಯೋಜನೆಗಳ ಕಪಟವಾದರು ಗೊತ್ತಿರಬೇಕಲ್ಲವೆ?

ಕಪಟ ನಾಟಕದ ಹಿಂದೆ

ಅಸಲಿಗೆ 1520 ಕೋಟಿಯ ಹಿಪ್ಪರಗಿ ನೀರಾವರಿ ...



...ಯದ ಕಟ್ಟಡವನ್ನೂ ಮುಖ್ಯಮಂತ್ರಿ ...ದ ಗೌಡರೇ ಉದ್ಘಾಟಿಸಬೇಕಂತೆ!


ಬೆಳ್ಳಿ ಕಿರೀಟ

...ವುಗಳ ಜೊತೆಜೊತೆಗೇ ಹಲ್ಯಾಳ ಏತನೀರಾವರಿ ...ಜನೆ ಎಂಬ ಮಗದೊಂದು ಯೋಜನೆಯನ್ನು ...ಟಿಸಲೆಂದೇ ಜಲಸಂಪನ್ಮೂಲ ಸಚಿವ ...ಮ್ಮಾಯಿ ಅದೇ ದಿನ ಅಥಣಿಗೆ ಬರುತ್ತಿದ್ದಾರೆ. ...ಪ್ಪರ ಸಮ್ಮುಖದಲ್ಲಿ ಅದೇ ವೇದಿಕೆಯಲ್ಲಿ ರಾಜ್ಯ ... ಅಧ್ಯಕ್ಷ ಕೆ.ಎಸ್. ಈಶ್ವರಪ್ಪ ಗಂಗಾಪೂಜೆಯನ್ನು ...ರಿಸಿಕೊಡಲಿದ್ದಾರೆ. ಮುಖ್ಯಮಂತ್ರಿ ಸದಾನಂದ ...ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ, ಮಾಜಿ ...ಮಂತ್ರಿ ಯಡಿಯೂರಪ್ಪ, ಮಂತ್ರಿಗಳಾದ ...ಮ್ಮಾಯಿ, ಸೋಮಣ್ಣ, ಕತ್ತಿ, ಸವದಿ, ಅರ್ಧ ... ಸಂಸದರು, ಎರಡು ಡಜನ್ ಶಾಸಕರು ...ಲ್ಮ್ ಕಳಂಕಿತ ಸವದಿಯ ಜೊತೆ ವೇದಿಕೆ ...ಕೊಳ್ಳುತ್ತಾರೆಂದರೆ, ಇದಕ್ಕೆಂದು ಬಿಜಾಪುರ, ...ವಿ, ಜಮಖಂಡಿ ಮತ್ತು ಅಥಣಿಗಳಿಂದ ಒಂದು ...ಷ್ಟು ಬಾಡಿಗೆ ರೈತರನ್ನು ಸೇರಿಸಿ ಸಮಾವೇಶ ...ಡುತ್ತಾರೆಂದರೆ ಇಡೀ ಸರ್ಕಾರ ಯಾವ ಮಟ್ಟಿಗೆ ...ಟ್ಟಿರಬೇಡ?


...ಲ್ಲಿಗೆ ಬ್ಲೂಫಿಲ್ಮ್ ಕಳಂಕಿತ ಸವದಿಯ ಪಾಪ ...ಹಾಕಲು ಇಡೀ ಬಿಜೆಪಿ ಪಕ್ಷವೇ ಟೊಂಕಕಟ್ಟಿ ...ಬಿಟ್ಟಿದೆ. ಕಾರ್ಯಕ್ರಮದ ಕರಪತ್ರ ಭಿತ್ತಿಪತ್ರಗಳ ...ಲ್ಲಿ ಸವದಿಯ ಉದ್ದುದ್ದದ ಭಾವಭಂಗಿಯ ...ಳಿವೆ. ಜೊತೆಗೆ ಯಡಿಯೂರಪ್ಪ ಮತ್ತು ...ನಂದ ಗೌಡರ ಫೋಟೋ ಕೂಡ ಇದೆ. ಫೆಬ್ರವರಿ ...ಂದು ಸೇರಿದ ಲಕ್ಷಾಂತರ ಬಾಡಿಗೆ ಜನರೆದುರು ...ಮುಂತ್ರಿ ಸದಾನಂದ ಗೌಡರಿಗೆ ಸವದಿಯೇ ... ಬೆಳ್ಳಿ ಕಿರೀಟ ತೊಡಿಸುತ್ತಿದ್ದ, ಜೊತೆಗೆ ...ಯೂರಪ್ಪನವರಿಗೊಂದು ...ಪ್ಪನವರಿಗೊಂದು ಬೆಳ್ಳಿಯ ಗದೆಯನ್ನೂ ...ಸಿಟ್ಟಿದ್ದ, ಹೀಗೆ ರಾಜ್ಯ ಬಿಜೆಪಿಯ ಸಕಲ ...ತಿಗಳೆಲ್ಲರನ್ನೂ ಅಥಣಿಯಲ್ಲಿ ವಿಜೃಂಭಿಸಿ, ಲಕ್ಷ ..., ಬಿಟ್ಟಿ ಊಟ ಹಾಕಿಸಿ ತನ್ನ ಅನಾಚಾರವನ್ನು ...ಚ್ಚಿಕೊಳ್ಳಲು ಹೊರಟ ಕಾಮುಕ ಸವದಿ ...ಂದು ನಡೆಸಿದ ವಸೂಲಿಯದ್ದೇ ಪ್ರತ್ಯೇಕ ...ಣವಾಗುತ್ತದೆ.

ಯೋಜನೆಯೇ ಇನ್ನೂ ಮುಗಿದಿಲ್ಲ, ಕೆಲ ಮುಖ್ಯ ಕಾಲುವೆಗಳಷ್ಟೇ ಮುಗಿದಿವೆ. ಬಹುತೇಕ ಕಿರುಕಾಲುವೆಗಳು, ಚಾನಲ್‌ಗಳ ಕೆಲಸ ಇನ್ನೂ ಬಾಕಿಯಿದೆ. ಹಾಗೊಮ್ಮೆ ಇಡೀ ಯೋಜನೆ ಮುಗಿದಿದ್ದೇ ಆಗಿದ್ದರೆ ಅದಕ್ಕೆ ಜಲಸಂಪನ್ಮೂಲ ಇಲಾಖೆ completion certificate ಕೊಟ್ಟ ನಂತರವಷ್ಟೇ ಇಡೀ ಯೋಜನೆ ಮುಗಿದಂತೆ ತಾನೆ?

ಆದರೆ ಇನ್ನೂ ನೀರಾವರಿ ಇಲಾಖೆ ಕಂಪ್ಲೀಷನ್ ಪ್ರಮಾಣಪತ್ರ ನೀಡದೆಯೇ ಅರೆಬರೆ ಕೆಲಸಗಳನ್ನೆಲ್ಲ ಮರೆಮಾಚಿ ಹಿಪ್ಪರಗಿ ಪ್ರಾಜೆಕ್ಟ್ ಉದ್ಘಾಟಿಸಲು ಹೊಂಟ ಸದಾನಂದ ಗೌಡರ ಸರ್ಕಾರಕ್ಕೆ ಸವದಿಯ ಬ್ಲೂಫಿಲ್ಮ್ ಪಾಪ ಮುಚ್ಚಿಹಾಕಲು ಇದಕ್ಕಿಂತ ಬೇರೆ ಕಾರಣವೇ ಸಿಗುತ್ತಿಲ್ಲ. ಅಷ್ಟಕ್ಕೂ ಹಿಪ್ಪರಗಿ ಯೋಜನೆಗೆ ಬಿಜೆಪಿಯ ಕೊಡುಗೆ, ಶ್ರಮ, ಪ್ರಯತ್ನ ಏನೇನೂ ಇಲ್ಲ. ಕೃಷ್ಣಾ ನದಿಗೆ ಹಿಪ್ಪರಗಿಯಲ್ಲಿ ಆಣೆಕಟ್ಟು ಕಟ್ಟಿ ಅಕ್ಕಪಕ್ಕದ ಬಾಗಲಕೋಟೆ, ಜಮಖಂಡಿ, ಅಥಣಿ, ಬೆಳಗಾವಿಯ ಕೆಲ ಭಾಗಗಳನ್ನು ಸಮೃದ್ಧಗೊಳಿಸುವ ಇಡೀ ಯೋಜನೆಯ ರೂವಾರಿ ಕಾಂಗ್ರೆಸ್ ನಾಯಕ ಎಚ್.ಕೆ. ಪಾಟೀಲರು. ಹೀಗೆ ರೂಪುಗೊಂಡ ಹಿಪ್ಪರಗಿ ನೀರಾವರಿ ಯೋಜನೆಯನ್ನು ಲೆಕ್ಕಹಾಕಿ ಅದರಿಂದ ಅಥಣಿಯ ಬಹುಭಾಗಕ್ಕೆ ಸಮೃದ್ಧಿಯಾಗುವಂತೆ ಕರಿಮಸೂತಿ ಏತ ನೀರಾವರಿ ಯೋಜನೆಯನ್ನು ರೂಪಿಸಿದ್ದು ಅಥಣಿಯ ಮಾಜಿ ಶಾಸಕ ಮತ್ತು ಕಾಂಗ್ರೆಸ್ ನಾಯಕ ಶಹಜಹಾನ್ ಡೊಂಗರಗಾಂವ್.



ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಭಾರೀ ನೀರಾವರಿ ಮಂತ್ರಿಯಾಗಿದ್ದ ಎಚ್.ಕೆ. ಪಾಟೀಲ್ ಹಿಪ್ಪರಗಿ ಯೋಜನೆಗೆಂದು 266 ಕೋಟಿಯನ್ನು ಮೀಸಲಿಟ್ಟಿದ್ದೇ ಕೊನೆ. ಆ ಹೊತ್ತಿಗೆ ಇಡೀ ಯೋಜನೆಯ ಒಟ್ಟು ಮೊತ್ತ 901 ಕೋಟಿ ರೂಪಾಯಿಯಾಗಿತ್ತು, 2001 ರ ಜೂನ್ 21 ರಂದು ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದೂ ಎಸ್.ಎಂ. ಕೃಷ್ಣರೆ.



2004 ರಲ್ಲಿ ಅಥಣಿಯ ಸಂತನಂತಿದ್ದ ಕಾಂಗ್ರೆಸ್ ನಾಯಕ ಶಹಜಹಾನ್ ಡೊಂಗರಗಾಂವ್‌ರನ್ನು ಜಾತಿ ಮತ್ತು ಗೂಂಡಾಗರ್ದಿ ಮಾಡಿಯೇ ಸೋಲಿಸಿದ ಲಕ್ಷ್ಮಣ ಸವದಿ ಆರೂವರೆ ವರ್ಷಗಳ ಕಾಲ ಕರಿಮಸೂತಿ-ಏತ ನೀರಾವರಿಗಾಗಲಿ, ಹಲ್ಯಾಳ ಏತ ನೀರಾವರಿಗಾಗಲಿ ಅಥವಾ ಸಾವಳಗಿ-ತುಂಗಳ ಏತ ಯೋಜನೆಗಾಗಲಿ ಒಂದೇ ಒಂದು ದಿನ ಬಾಯಿ ಬಿಟ್ಟವನಲ್ಲ. ಮೂಲತಃ ಹಿಪ್ಪರಗಿ ನೀರಾವರಿ ಯೋಜನೆಯ ಮಾಸ್ಟರ್ ಪ್ಲಾನ್‌ನಲ್ಲಿ ಅಥಣಿ ಮತ್ತು ಕೆಲಸಂಸ್ಥೆ ಹೋಬಳಿಗಳ ಒಟ್ಟು 28 ಗ್ರಾಮಗಳ 23,700 ಹೆಕ್ಟೇರ್ ಅಂದರೆ ಹೆಚ್ಚೂಕಮ್ಮಿ 80 ಸಾವಿರ ಎಕರೆಗಳಿಗೆ ನೀರುಣಿಸುವ ಕರಿಮಸೂತಿ ಯೋಜನೆಯ ಪರಿಕಲ್ಪನೆಯೇ ಇರಲಿಲ್ಲ. ಒಂದಲ್ಲ ಎರಡು ಬಾರಿ ಅಥಣಿಗೆ ಶಾಸಕರಾಗಿ ಗೆದ್ದಿದ್ದ ಡೊಂಗರಗಾಂವ್ ಅಥಣಿಯ ಭೀಕರ ಬರಗಾಲ, ಬಡರೈತರ ಬೇಗುದಿ ಮತ್ತು ನೀರಿನ ಹಾಹಾಕಾರವನ್ನು ಕಂಡು ಅಂದು ಮುಖ್ಯಮಂತ್ರಿಯಾಗಿದ್ದ ಎಚ್.ಎಂ. ಕೃಷ್ಣರೆದುರು ಕಣ್ಣೀರಿಟ್ಟಿದ್ದನ್ನು ಆಗ ನೀರಾವರಿ ಮಂತ್ರಿಯಾಗಿದ್ದ ಎಚ್.ಕೆ. ಪಾಟೀಲರು ಇವತ್ತಿಗೂ ಮರೆತಿಲ್ಲ. ಶಾಸಕ ಡೊಂಗರಗಾಂವ್‌ರ ಕಣ್ಣಿನಿಂದ ಬಿದ್ದ ನೀರಿನ ಹನಿಗಳು ಮುಖ್ಯಮಂತ್ರಿ ಕೃಷ್ಣರ ಬೂಟುಗಳ ಮೇಲೆ ಬಿದ್ದಿತ್ತು!

ಕಾಂಗ್ರೆಸ್ ಕಾಣಿಕೆ



ಶಹಾಜಾನ್

ಹಾಗೇ ಮುಖ್ಯಮಂತ್ರಿ ಕೃಷ್ಣರನ್ನು ಕಾಡಿಬೇಡಿ ಕರಿಮಸೂತಿ ಏತವನ್ನು ಅಥಣಿಗೆ ತಂದ ಡೊಂಗರಗಾಂವ್ ಅದರ ಪ್ರಮುಖ ಕಾಮಗಾರಿಯನ್ನು ಬಹಿರಂಗ ಟೆಂಡರ್ ಮೂಲಕ ವಹಿಸಿದ್ದು ಕೋರಮಂಡಲ್ ಕಂಪೆನಿಗೆ. ಅದೂ 14.92 ಕೋಟಿ ರೂ.ಗಳಿಗೆ. ಆ ಕಾಲಕ್ಕೇ ಅದು 0.5 ಪರ್ಸೆಂಟ್. ಕೊರತೆಯ ಟೆಂಡರಾಗಿತ್ತು. ಅಂದರೆ 100 ರೂಪಾಯಿಯ ಕಾಮಗಾರಿಯನ್ನು 95 ರೂ. ಗೆ ಮುಗಿಸಿಕೊಡುವುದು!

ಆದರೆ 2004 ರಲ್ಲಿ ಸವದಿ ಅಥಣಿಗೆ ಗೆದ್ದುಬಂದನಲ್ಲ; ಆತನ ದುಡ್ಡಿನ ದಾಹಕ್ಕೆ ಮೊದಲು ಬಲಿಯಾಗಿದ್ದೇ ಕರಿಮಸೂತಿ ಏತ ಯೋಜನೆ. 0.5 ಪರ್ಸೆಂಟ್ ಕೊರತೆಯ ಕಾಮಗಾರಿ ಪೂರೈಸಿಕೊಡಲು ಒಪ್ಪಿಕೊಂಡಿದ್ದ ಕೋರಮಂಡಲ್ ಕಂಪೆನಿಗೆ ವಹಿಸಿದ್ದ ಟೆಂಡರನ್ನು ಏಕಾಏಕಿ ರದ್ದುಗೊಳಿಸಲಾಯಿತು. ಅದನ್ನು ಬೆಂಗಳೂರಿನ ಮಹಾ ಖದೀಮ ಕಂಟ್ರಾಕ್ಟರ್ ಜಿ. ಶಂಕರ್ ಎಂಬಾತನಿಗೆ 39 ಕೋಟಿಗೆ ವಹಿಸಲಾಯಿತು. ಇದಾಗಿದ್ದು 2010 ರ ಏಪ್ರಿಲ್‌ನಲ್ಲಿ ಅಂದರೆ ಯಡಿಯೂರಪ್ಪ ಮುಖ್ಯಮಂತ್ರಿಯಾದ ನಂತರವೇ ಇದರಿಂದಾಗಿ ಈ ಹೊತ್ತಿಗಾಗಲೇ ಬಹುತೇಕ ಮುಗಿದಿದ್ದ ಯೋಜನೆಯ ವೆಚ್ಚ ಶೇ. 25 ರಷ್ಟು ಹೆಚ್ಚುವರಿಯಾಯಿತು. ಅಂದರೆ ಒಟ್ಟು 24 ಕೋಟಿ ರೂ.ಗಳ ಹೊರೆ ಸರ್ಕಾರಿ ಬೊಕ್ಕಸಕ್ಕೆ ಬಿತ್ತು!

ಹಾಳಾಗಲಿ ಇದಕ್ಕೆಂದು ಬಿಜೆಪಿ ಸರ್ಕಾರವಾಗಲಿ, ಮುಖ್ಯಮಂತ್ರಿಯಾಗಿದ್ದ ಯಡ್ಡಿಯಾಗಲಿ ನಯಾಪೈಸೆ ಬಿಡುಗಡೆ ಮಾಡಲಿಲ್ಲ. 2008 ರ ಏಪ್ರಿಲ್‌ನಲ್ಲಿ ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮುಗಿಯುವುದೇ ದುಸ್ಸಾಧ್ಯ ಎಂಬಂತಿದ್ದ ಇಡೀ ಹಿಪ್ಪರಗಿ ಯೋಜನೆಯನ್ನು ಪ್ರಧಾನಿಗಳ AIBP ಯೋಜನೆಗೆ ಸೇರಿಸಿದ ಫಲವಾಗಿ ಕೇಂದ್ರದಿಂದ ಸರಿಸುಮಾರು 710 ಕೋಟಿ ರೂಪಾಯಿ ಒದಗಿಬರದೇ ಹೋಗಿದ್ದರೆ ಇನ್ನು 10 ವರ್ಷವಾದರೂ ಹಿಪ್ಪರಗಿ ಯೋಜನೆ ಮುಗಿಯುತ್ತಿರಲಿಲ್ಲ. ಅಲ್ಲಿಗೆ ಹೆಚ್ಚೂಕಮ್ಮಿ 1000 ಕೋಟಿಯಷ್ಟು ಕಾಂಗ್ರೆಸ್ ಸರ್ಕಾರಗಳಿಂದಲೇ ಬಂದಿದೆ. ಈಗ ಅವಸರವಾಗಿ ಹಿಪ್ಪರಗಿ, ಕರಿಮಸೂತಿ, ಹಲ್ಯಾಳ, ತುಂಗಳ-ಸಾವಳಗಿ ಯೋಜನೆಗಳನ್ನು ಮುಗಿಸಿದ್ದೇವೆಂದು ಕೊಚ್ಚಿಕೊಂಡು ಅದನ್ನು ಸವದಿಯ ಬ್ಲೂಫಿಲಂ ಪಾಪ ಮುಚ್ಚಿಹಾಕಲು ಬಳಸುತ್ತಿರುವ ಬಿಜೆಪಿ ನಾಯಕರಿಗೆ ಕಾಟಾಚಾರಕ್ಕೂ ಕೇಂದ್ರಕ್ಕೆ ಒಂದು ಕೃತಜ್ಞತೆ ಹೇಳುವ ಸೌಜನ್ಯವಿಲ್ಲ

ದರೋಡೆಯೇ ಸಾಧನೆ?

ಇನ್ನೂ ಹೇಳಬೇಕೆಂದರೆ ತುಂಗಳ-ಸಾವಳಗಿ ಏತ ನೀರಾವರಿ ಯೋಜನೆಯ ಮೂಲ ಪುರುಷರಂತಿದ್ದದ್ದು ಆಗ ಜಮಖಂಡಿಗೆ ಕಾಂಗ್ರೆಸ್ ಶಾಸಕರಾಗಿದ್ದ ಆರ್.ಎಂ. ಕಲೂತಿ ಬೀಳಗಿಗೆ ಶಾಸಕರಾಗಿದ್ದ ಕಾಂಗ್ರೆಸ್‌ನ ಜೆ.ಟಿ. ಪಾಟೀಲ್. ಉತ್ತರ ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಗಳಲ್ಲೊಂದಾದ ಹಿಪ್ಪರಗಿ ನೀರಾವರಿ ಯೋಜನೆಯ ಹೆಸರಲ್ಲಿ ದುಡ್ಡು ಹೊಡೆದವನು ಸವದಿ. ಕಮ್ಮಿಗಿದ್ದ ಗುತ್ತಿಗೆಯನ್ನು ರದ್ದು ಮಾಡಿ ಹೆಚ್ಚುವರಿ ರೇಟಿಗೆ ಕೊಟ್ಟು ಕಮಿಷನ್ ಹೊಡೆದ. ಭ್ರಷ್ಟ ಇಂಜನಿಯರ್‌ಗಳನ್ನು ಹಾಕಿಸಿಕೊಂಡು ಕಂಟ್ರಾಕ್ಟರ್‌ಗಳನ್ನು ಸುಲಿದ. ಕಳಪೆ ಕಾಮಗಾರಿಗಳ ವಿರುದ್ಧ ಪ್ರಶ್ನಿಸಿದವರನ್ನು ರೌಡಿಗಳನ್ನು ಛೂಬಿಟ್ಟು ಬಾಯಿ ಮುಚ್ಚಿಸಿದ. ಹಿಪ್ಪರಗಿ ಹೆಸರಲ್ಲೇ ದೋಚಿ ನೂರಾರು ಕೋಟಿ ಆಸ್ತಿ ಖರೀದಿಸಿದ. ಬಿಜೆಪಿಯ ಪುಂಡರಿಗೆಲ್ಲ ಲಂಚದ ಹೊಲಸು ತಿನ್ನಿಸಿದ.

ಈಗ ತನ್ನ ವಿಕೃತಿಯನ್ನು ಮುಚ್ಚಿಕೊಳ್ಳುವುದಕ್ಕೆ ಯಾರೋ ಸಾಧಿಸಿದ ಅಭಿವೃದ್ಧಿಯನ್ನು ಅರೆಬರೆ ತೇಪೆ ಹಾಕಿ ಬಳಸುಕೊಳ್ಳುತ್ತಿದ್ದಾನೆ. ಈತನ ಬ್ಲೂಫಿಲ್ಮ್ ಪಾಪವನ್ನು ತೊಳೆಯಲು ಮುಖ್ಯಮಂತ್ರಿ ಸದಾನಂದ ಗೌಡರೇ ಲಜ್ಜೆಗೆಟ್ಟು ಅಥಣಿಗೆ ಬರುತ್ತಿದ್ದಾರೆಂದರೆ ಅದಕ್ಕೆ ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ, ಮಾಜಿ ಮು.ಮಂ. ಯಡಿಯೂರಪ್ಪ ಜೊತೆ ಬಿಜೆಪಿ ಸರ್ಕಾರದ ಅರ್ಧ ಡಜನ್ ಮಂತ್ರಿಗಳು, ಎರಡು ಡಜನ್ ಶಾಸಕರೂ ಸಾತು ಕೊಡುತ್ತಿದ್ದಾರೆಂದರೆ ಬ್ಲೂಫಿಲ್ಮ್ ನೋಡಿ ಸಿಕ್ಕಿಬಿದ್ದವನ ಪಾಪದಲ್ಲಿ ಇಡೀ ಬಿಜೆಪಿ ಸರ್ಕಾರವೇ ಪಾಲುದಾರನೆಂದಾಯ್ತು.

ಹಾಗಾದರೆ ರೇಪ್ ಮಾಡಿ ಜೈಲು ಪಾಲಾದ ಹಾಲಪ್ಪನಿಗೂ, ಹಾದರ ಮಾಡಿ ಮಂತ್ರಿಯಾದ ರೇಣುಕನಿಗೂ, ಸ್ತ್ರೀ ಲಂಪಟ ನಿರಾಣಿಗೂ, ಅವರೆಲ್ಲರ ಕಾಮ ವಿಕೃತಿಗಳಿಗೆ ತಕ್ಕಂತೆ 'ಕ್ಲೀನ್ ಚಿಟ್' ಯೋಜನೆಗಳನ್ನು ಬಿಜೆಪಿ ರೂಪಿಸಿರಲೇಬೇಕಲ್ಲವೆ?

ರಾಮುಬಾಬು 'ಇನ್ನು ಕಮುಕ ಕಾಮು'

ಕುದುರೆಮುಖದತ್ತ ಅಭಿವೃದ್ಧಿ ಬುಲ್ಡೋಜರ್

ಒಂದು ಪತ್ರ

ಬಳ್ಳಾರಿ ಗಣಿಗಾರಿಕೆಯಿಂದಾದ ಪರಿಸರ ನಾಶವನ್ನೂ ಹಾಗೂ ಬ್ರಹ್ಮಾಂಡ ಭ್ರಷ್ಟಾಚಾರವನ್ನೂ ಎದುರಿಗಿಟ್ಟುಕೊಂಡು, ನಮ್ಮ ಆರ್ಥಿಕಾಭಿವೃದ್ಧಿ ಪಂಡಿತರು ಕುದುರೆಮುಖ ಗಣಿಗಾರಿಕೆಗೆ ಇನ್ನೂ ಶಿಫಾರಸ್ಸು ಮಾಡುತ್ತಿದ್ದಾರೆಂದರೆ ಇವರಂಥ ಜನ ವಿರೋಧಿಗಳೂ ಎಲ್ಲಾದರೂ ಉಂಟೆ ಎಂದು ಕೇಳಬೇಕಾಗಿದೆ. ಪ್ರಸ್ತುತ ಡಾ.ವಿ.ಕೆ.ಬಹುಗುಣ ನೇತೃತ್ವದ ಸಮಿತಿ (ಎಚ್‌ಎಲ್‌ಇ)ಯು ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅಗತ್ಯವಿರುವಷ್ಟು ಮಾತ್ರ ಅದಿರು ತೆಗೆಯಲು ಶಿಫಾರಸ್ಸು ಮಾಡಿದ್ದಲ್ಲದೆ, 'ಸ್ವೀಡನ್ನಿನ ನೆಲದಾಳದ ಮಾದರಿಯಲ್ಲಿ ವಿಶೇಷ ತಂತ್ರಜ್ಞಾನ ಬಳಸಿ ಕುದುರೆಮುಖ ಗಣಿಗಾರಿಕೆ ನಡೆಸಬಹುದು' ಎಂದು ವರದಿ ನೀಡಿದೆ!

ಕೇಂದ್ರ ಉಕ್ಕು ಸಚಿವಾಲಯದ ಕಾರ್ಯದರ್ಶಿ ಪಿ.ಕೆ.ಮಿಶ್ರಾ ಎಂಬಾತನ ಸಮಿತಿಯು ಸಹ 12ನೆಯ ಪಂಚವಾರ್ಷಿಕ ಯೋಜನೆಯ ಭಾಗವಾಗಿ ಪಶ್ಚಿಮಘಟ್ಟದಲ್ಲಿ ಗಣಿಗಾರಿಕೆ ಪ್ರಾರಂಭಿಸಬಹುದೆಂದು ಶಿಫಾರಸ್ಸು ಮಾಡಿದೆ. ಆದರೆ ಪಶ್ಚಿಮಘಟ್ಟ ಪ್ರದೇಶ ಅನೇಕ ಅಪರೂಪದ ಜೀವ ತಳಿಗಳಿಂದಲೂ, ಸಸ್ಯ ತಳಿಗಳಿಂದಲೂ ಕೂಡಿದ್ದು ಜಗತ್ತಿನ 18 ಜೀವ ವೈವಿಧ್ಯದ ತಾಣಗಳಲ್ಲಿ ಒಂದಾಗಿದೆ. ಇಂಥ ಸೂಕ್ಷ್ಮತಾಣದಲ್ಲಿ ಪ್ರಕೃತಿಗೆ ಡ್ಯಾಮೇಜ್ ಆಗುವ ಯಾವ ಚಟುವಟಿಕೆಯನ್ನೂ ನಡೆಸಬಾರದು. ಹೀಗೆಂದು ಬಹಳ ಹಿಂದೆಯೇ ಡಾ.ಎಂ.ಗಾಡ್ಗಿಳ್ ಸಮಿತಿ ಶಿಫಾರಸ್ಸು ಮಾಡಿತ್ತು.

ಪರಿಸರವಾದಿಗಳಿಂದ ಹೋರಾಟಗಳು ನಡೆದು ಸುಮಾರು 33 ವರ್ಷಗಳ ಕಾಲ ಇಲ್ಲಿ ಅದಿರು ಬಾಚಿದ ಕುದುರೆಮುಖ ಅದಿರು ಕಂಪೆನಿ(ಕೆಐಒಸಿಎಲ್)ಯನ್ನು ಸುಪ್ರೀಂಕೋರ್ಟ್ 2005ರಲ್ಲಿ ಸ್ಥಗಿತಗೊಳಿಸಿತ್ತು, ಆದರೆ ಈಗ?

ಇಲ್ಲಿ ಬಗೆಬಗೆಯ ಅಪೂರ್ವ ಅದಿರು ನಿಕ್ಷೇಪಗಳು, ಗ್ರಾನೈಟ್ ಕಲ್ಲುಗಳು, ಜಂಬಿಟ್ಟಿಗೆ ಶ್ರೇಣಿಗಳೂ ಇದ್ದು ಅದಿರು ಕಂಪೆನಿಗಳಿಗೆ ಹಣದ ಖಜಾನೆಗಳಂತೆ ಕಂಡುಬರುತ್ತವೆ. ಜೊತೆಗೆ ಬಗೆಬಗೆಯ ವನೌಷಧಿಗಳೂ, ಬೆಲೆಬಾಳುವ ವೃಕ್ಷಗಳೂ ಇವೆ. ಮನುಷ್ಯ ಇವುಗಳ ಮೇಲಿನ ದುರಾಸೆಯಿಂದ ಚಿನ್ನದ ಮೊಟ್ಟೆ ಆಸೆಗೆ ಬಾತು ಕತ್ತರಿಸಿದ ಲೋಭಿಯಂತೆ, ಪಶ್ಚಿಮಘಟ್ಟ ಅರಣ್ಯಕ್ಕೆ ಯದ್ವಾತದ್ವಾ ಹಾನಿ ಮಾಡಿದರೆ ಅದು ದಕ್ಷಿಣಾಪಥಿಯರು ಭೂಮಿಗೆ ಬರೆವ ಮುನ್ನುಡಿಯೇ ಸರಿ.

ಆದುದರಿಂದ ಪಶ್ಚಿಮಘಟ್ಟದ ಮೇಲೆ ಮಳೆ ಸುರಿಯಬೇಕೆಂದರೆ, ಅರಣ್ಯಕ್ಕೆ ಯಾವ ಹಾನಿಯೂ ತಟ್ಟಬಾರದು. ಈಗಾಗಲೇ ಲಿಂಗನಮಕ್ಕಿ, ಕಾಳಿ ಜಲವಿದ್ಯುತ್ ಯೋಜನೆಗಳಿಂದ, ಕೃಷ್ಣಾ, ಕಾವೇರಿ ಕೊಳ್ಳದ ನೀರಾವರಿ ಅಣೆಕಟ್ಟೆಗಳಿಂದ ಸಂಪರ್ಕ ರಸ್ತೆ ಹಾಗೂ ವಿದ್ಯುತ್ ಕಂಬದ ಲೈನ್‌ಗಳನ್ನು ಎಳೆಯುವುದಕ್ಕಾಗಿ, ಕಾಫಿ, ಟೀ, ಏಲಕ್ಕಿ, ರಬ್ಬರ್ ಬೆಳೆಗಳಿಗಾಗಿ ಒತ್ತುವರಿ ಮಾಡಿ, ಇತ್ತೀಚೆಗೆ ವಿಶೇಷ ಆರ್ಥಿಕ ವಲಯಗಳಿಗಾಗಿ ಹಾಗೂ ಜಾಗತಿಕ ಪ್ರವಾಸಿ ರೆಸಾರ್ಟ್ ಸಂಸ್ಕೃತಿಯಿಂದಾಗಿ ಪಶ್ಚಿಮಘಟ್ಟ ಕಾಡು ಕ್ಷೀಣಿಸುತ್ತಾ ಬರುತ್ತಿದೆ.

ಇದರೊಂದಿಗೆ ಕಾಡು ಸಂರಕ್ಷಣೆಯಲ್ಲಿ ಅನುಕೂಲ ಜೀವಿಗಳಾಗಿದ್ದ ಆದಿವಾಸಿ, ಗಿರಿಜನ ಬುಡಕಟ್ಟುಗಳಿಗೆ ಆತಂಕವಾಗಿದೆ. ಆನೆ ಕಾರಿಡಾರ್, ಸಿಂಹಧಾಮ, ಹುಲಿ, ಕರಡಿ, ಚಿರತೆ, ಜಿಂಕೆ ಇತ್ಯಾದಿ ಪ್ರಾಣಿಗಳ ರಕ್ಷಿತಾರಣ್ಯ ಮುಂತಾದ ಅವೈಜ್ಞಾನಿಕ ನಿಲ್ದಾಣಗಳನ್ನು ರೂಪಿಸುತ್ತಿರುವುದರಿಂದ ಕಾಡುರಕ್ಷಣೆಯು ಕಣ್ಣೊರೆಸುವ ತಂತ್ರವಾಗಿದೆ. ಈ ಪ್ರದೇಶದಲ್ಲಿ ಶತಮಾನಗಳಿಂದ ಬದುಕು ಸಾಗಿಸುತ್ತಿರುವ ವನವಾಸಿ ಜನರಿಂದ ಕಾಡಿಗೆ ಅಪಾಯವೇನೂ ಆಗಿಲ್ಲ.

ಈ ನಿಟ್ಟಿನಲ್ಲಿ ನಾಡಿನ ಜನತೆ ಎಚ್ಚೆತ್ತುಕೊಳ್ಳಬೇಕು. ಒಗ್ಗಟ್ಟಾಗಿ ಬಹುಗುಣ, ಮಿಶ್ರಾ ಮುಂತಾದ ಸಮಿತಿಗಳು ನೀಡಿರುವ ಶಿಫಾರಸ್ಸುಗಳನ್ನು ತಿರಸ್ಕರಿಸುವಂತೆ ಸರ್ಕಾರವನ್ನು ಒತ್ತಾಯಿಸಬೇಕು. ಇಲ್ಲವಾದರೆ ಕರ್ನಾಟಕ ಇನ್ನೊಂದು ಮರುಭೂಮಿಯಾದೀತು.

-ಪ್ರೊ.ಶಿವರಾಮಯ್ಯ


ನಾಗರಬಾವಿ, ಬೆಂಗಳೂರು



ಗುಲ್ಬರ್ಗಾ ವಿಶ್ವವಿದ್ಯಾಲಯ ಕಟ್ಟಡದ ಚಿತ್ರ

ಗುಲ್ಬರ್ಗಾ 'ಜಾನುವರಸಿಟಿ'ಯಿಂದ ಖಂಡ್ರೆಗೆ ಗೌರವ ಡಾಕ್ಟರೇಟ್!


ಗುಲ್ಬರ್ಗಾ ಯುನಿವರ್ಸಿಟಿಯ ಅದ್ವಾನ ಆಡಳಿತವನ್ನು ನೋಡಿ ಬಹುತೇಕರು ಅದನ್ನು 'ಗುಲ್ಬರ್ಗಾ ಜಾನುವರಸಿಟಿ' ಎಂದೇ ಕರೆಯುತ್ತಾರೆ. ಅಂದಂತೆ ಈ ವಿಶ್ವವಿದ್ಯಾಲಯದಲ್ಲಿ ಆಗಾಗ ನಡೆಯುವ ಕಾರ್ಯ ಚಟುವಟಿಕೆಗಳು ಎಂಥವರಿಗೂ ಹೇಸಿಗೆ ಹುಟ್ಟಿಸುತ್ತವೆ. ಇದೆಲ್ಲ ಏನೇ ಆಗಿರಲಿ, ಇದೇ ತಿಂಗಳ 27 ರಂದು ನಡೆಯಲಿರುವ ವಿಶ್ವವಿದ್ಯಾಲಯದ ಘಟಿಕೋತ್ಸವದ ತಯಾರಿ ಬಲು ಜೋರಿನಿಂದ ನಡೆದಿದೆ. ಕಳೆದ ಸಲ ಎಂಟು ಜನರಿಗೆ ಗೌರವ ಡಾಕ್ಟರೇಟ್ ನೀಡಿ ತನ್ನ ಮಾನವನ್ನು ಕಳೆದುಕೊಂಡಿದ್ದ ಈ ವಿಶ್ವವಿದ್ಯಾಲಯ ಈ ಸಲವೂ ಮತ್ತದೆ ಕೆಲಸಕ್ಕೆ ಮುಂದಾಗಿರುವುದು ಅತ್ಯಂತ ಶೋಚನೀಯ.




ಸಮಾಜದಲ್ಲಿ ಯಾವುದೇ ಪ್ರತಿಫಲ, ಅಪೇಕ್ಷೆ ಇಲ್ಲದೆ ತಮ್ಮಷ್ಟಕ್ಕೆ ತಾವು ಮಾಡುವ ಕೆಲಸವನ್ನು ಅತ್ಯಂತ ನಿಷ್ಠವಾಗಿ ನಿರ್ವಹಿಸುವ ಯಾವುದೆ ವ್ಯಕ್ತಿಗೆ ಗೌರವ ಡಾಕ್ಟರೇಟ್ ನೀಡಿದರೆ ವಿಶ್ವವಿದ್ಯಾಲಯಕ್ಕೆ ಒಂದು ತುರಾಯಿ. ಆದರೆ ತನ್ನ ಜೀವನೋಪಾಯಕ್ಕಾಗಿ ಮುಖವಾಡಗಳನ್ನು ಹಾಕಿಕೊಂಡು; ಸಮಾಜ ಸೇವೆಯ ಹೆಸರಿನಲ್ಲಿ ತನ್ನ ಸಮಾಜದ ಜನರ ಜೇಬಿಗೆ ಕೈಹಾಕುವ ವ್ಯಕ್ತಿಗಳನ್ನು ಗೌರವಿಸಿದರೆ ಏನನ್ನಬೇಕು?

ತನ್ನ ಮೂಲ ಕರ್ತವ್ಯವನ್ನು ಮರೆತಿರುವ, ಬೌದ್ಧಿಕ ದಿವಾಳಿಯ ಅಂಚಿನಲ್ಲಿರುವ ಗುಲ್ಬರ್ಗಾ ವಿಶ್ವವಿದ್ಯಾಲಯವು ಈಗ ಅಬ್ಬೆ ತುಮಕೂರಿನ ಗಂಗಾಧರ ಸ್ವಾಮಿ ಹಾಗೂ ವೀರಶೈವ ಮಹಾಸಭಾದ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆಗೆ ಗೌರವ ಡಾಕ್ಟರೇಟ್ ಕೊಡಲು ಇನ್ನಿಲ್ಲದ ಕಸರತ್ತು ಆರಂಭಿಸಿದೆ.

ಹೇಳಿಕೇಳಿ ಅಬ್ಬೆ ತುಮಕೂರಿನ ಗಂಗಾಧರ ಸ್ವಾಮಿ ಒಬ್ಬ ಠಕ್ಕ ಮಠಾಧೀಶ. ವಿಶ್ವಾರಾಧ್ಯರೆಂಬ ಅವಧೂತರ ಹೆಸರನ್ನೆ ಮುಂದು ಮಾಡಿಕೊಂಡು ಯಾದಗಿರಿ ಭಾಗದಲ್ಲಿ ಈಗಾಗಲೇ ಈಗ ಎಲ್ಲರ ತಲೆಯನ್ನು ನುಣ್ಣಗೆ ಬೋಳಿಸಿಯಾಗಿದೆ. ವಿಶ್ವಾರಾಧ್ಯರು ಹಾವಾಗಿ ಬಂದರು, ಚೇಳಾಗಿ ನಿಂತರು ಎಂದೆಲ್ಲ ಹೇಳಿಕೊಂಡು ಯಾದಗಿರಿ ಜಿಲ್ಲೆಯ ಶಹಾಪುರ ಪಟ್ಟಣದ ಭೀಮರಾಯನಗುಡಿ ಎಂಬಲ್ಲಿ ಹತ್ತಾರು ಎಕರೆ ಜಮೀನನ್ನು ಪುಕ್ಕಟೆಯಾಗಿ ಹೊಡಕೊಂಡು ಕುಳಿತಿದ್ದಾನೆ. ಅಬ್ಬೆ ತುಮಕೂರು ವಿಶ್ವಾರಾಧ್ಯ ಶಾಖಾ ಮಠ ಎಂದು ಮುಖ್ಯ ರಸ್ತೆಗೆ ಬೋರ್ಡ್ ತಗಲು ಹಾಕಿಕೊಂಡು ಕುಳಿತುಕೊಂಡಿದ್ದಾನೆ. ಜೊತೆಗೆ ಮಟ್ಕಾ ದಂಧೆ ನಡೆಸುವ ಮೇಸ್ತ್ರಿಯ ಜೊತೆಗೆ ಈತ ಗಳಸ್ಯಕಂಠಸ್ಯ ಸಂಬಂಧ ಇಟ್ಟುಕೊಂಡಿದ್ದಾನೆ. ಆತನ ಎಂಜಲಿನಲ್ಲಿ ಈಗಾಗಲೇ ಅಬ್ಬೆ ತುಮಕೂರಿನ ಬಿಲ್ಡಿಂಗ್, ತಾನು ತಿರುಗಾಡುವ ವಾಹನಗಳೆಲ್ಲ ಇವೆ. ಜನಸಾಮಾನ್ಯರಿಗೆ ತಿಳಿಯದಂತೆ ಅವಡಾಸವಡಾ ಮಾತುಗಳನ್ನು ಆಡುತ್ತ ಮಟ್ಕಾ ನಂಬರ ಹೇಳುವಂತೆ ಜನ ಭ್ರಮಿಸಿಕೊಳ್ಳಲು ಕಾರಣನಾಗಿದ್ದಾನೆ. ಆದಾಗ್ಯೂ ತಾನು ಮಾತ್ರ ಮಟ್ಕಾ ನಂಬರ ಹೇಳಿಲ್ಲ ಎಂದೆಲ್ಲ ಬೋಂಗು ಬಿಡುತ್ತಾನೆ.



... ಗಂಗಾಧರ ಸ್ವಾಮಿ



ಅವಧೂತ ವಿಶ್ವಾರಾಧ್ಯ

ಪ್ರತಿ ಅಮಾವಾಸ್ಯೆ ಹುಣ್ಣಿಮೆಯ ದಿನ ವಿಶ್ವಾರಾಧ್ಯರ ಹೆಸರಿನಲ್ಲಿ ನಡೆಸುವ ಶಿವಾನುಭವ ಮೌಢ್ಯದ ಒಂದು ಪರಾಕಾಷ್ಠೆ ಮಾತ್ರವಾಗಿರುತ್ತದೆ. ಕಾಯಿ, ಕರ್ಪೂರ, ಊದುಬತ್ತಿಯ ಹೊಗೆಯಲ್ಲಿ ವಿಚಾರವಂತಿಕೆ ಇಲ್ಲಿ ಸತ್ತು ಹೋಗಿರುತ್ತದೆ. ಜರತಾರಿ ಬಟ್ಟೆಗಳನ್ನುಟ್ಟು ಜನತೆಯನ್ನು ಆಕರ್ಷಿಸುವ, ಹುಂಬ ಮಾತುಗಳನ್ನು ಆಡುತ್ತ ಕ್ರೇಜ್ ಹುಟ್ಟುವಂತೆ ನೋಡಿಕೊಳ್ಳುವ ಈ ಕಪಟ ಸನ್ಯಾಸಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡುವುದು ವಿಶ್ವವಿದ್ಯಾಲಯ ತನಗೇ ತಾನು ದ್ರೋಹ ಮಾಡಿಕೊಂಡಂತೆ.

ಇನ್ನು ಅಖಿಲ ಭಾರತ ವೀರಶೈವ ಮಹಾಸಭೆಯ ಮಾಜಿ ಅಧ್ಯಕ್ಷನಾಗಿರುವ ಭೀಮಣ್ಣ ಖಂಡ್ರೆ ಲಿಂಗಾಯತರಿಗೆ ಮಾಡಿದ ದ್ರೋಹ-ವಂಚನೆಗಳ ಕುರಿತು ಬರೆದರೆ ಅದೇ ಮಹಾಭಾರತದ ಕತೆಯಂತೆ ಬೆಳೆಯುತ್ತಾ ಸಾಗುತ್ತದೆ. ಭಾಲ್ಕಿಯ ಪೂಜ್ಯ ಶ್ರೀ ಚೆನ್ನಬಸವಪಟ್ಟದ್ದೇವರು ಸಂಸ್ಥಾಪಿಸಿ, ಬೆಳೆಸಿದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನು ಆ ಮಠದಿಂದ ಹೈಜಾಕ್ ಮಾಡಿಸಿ ತನ್ನ ಹೆಸರಿನಲ್ಲಿ ಮಾಡಿಕೊಂಡಿದ್ದಾಗಿದೆ. ಈ ಗುರುತರವಾದ ವಂಚನೆ ಹಾಗೂ ಮಠಕ್ಕೆ ಬಗೆದ ದ್ರೋಹವನ್ನು ಅಲ್ಲಿನ ಜನ ಇನ್ನೂ ಮರೆತಿಲ್ಲ.

ಚಿತ್ರದುರ್ಗದ ಮುರುಘಾ ಶರಣರು ಕಂಡರೆ ಬಸವಣ್ಣನವರೆ ನಮ್ಮ ಆರಾಧ್ಯ ದೈವ ಎಂದು ಎದೆ ಎದೆ ಬಡಕೊಳ್ಳುವುದು, ಪಂಚಪೀಠಗಳ ಜಗದ್ಗುರುಗಳ್ಯಾರಾದರೂ ಭೇಟಿ ಕೊಟ್ಟರೆ ಪಂಚಾಚಾರ್ಯರೆ ನಮ್ಮ ವೀರಶೈವಕ್ಕೆ ಮೂಲ ಎಂದು ಅಡ್ಡ ಬೀಳುವ ಖಂಡ್ರೆಯ ನಾಟಕಗಳನ್ನೆಲ್ಲ ಜನ ಗ್ರಹಿಸಿದ್ದಾರೆ. ವೀರಶೈವ ಮಹಾಸಭೆಯೆಂಬ ಊರುಗೋಲನ್ನು ಇಟ್ಟುಕೊಂಡು ತನ್ನ ರಾಜಕೀಯ ತೆವಲುಗಳನ್ನು ಈಡೇರಿಸಿಕೊಳ್ಳುವ ಈ ಡೋಂಗಿ ರಾಜಕಾರಣಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡುವುದು ಎಷ್ಟು ಸರಿ? ಈ ಬಗೆಗೆ ಇಲ್ಲಿನ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಮತ್ತು ರಾಜ್ಯದ ಘನತೆವೆತ್ತ ರಾಜ್ಯಪಾಲರು ಮೊದಲು ಪರಿಶೀಲಿಸಬೇಕು.


ವಿಶ್ವವಿದ್ಯಾಲಯದವರು ಸಂಬಂಧಿಸಿದವರ ಬಯೋಡಾಟಾ ಸಿದ್ಧಪಡಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸುವುದಾಗಲಿ ಅಥವ ತಮಗೆ ಬೇಕಾದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ ಕೊಡಿಸಲು ಈಗಾಗಲೇ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಸಂ ಸಂಸ್ಥೆಗಳ ಲಾಬಿಗಳನ್ನು ನೋಡಿದರೆ ಅಸ ಹುಟ್ಟುತ್ತದೆ.

ಸಮಾಜಕ್ಕೆ ಅವಿಸ್ಮರಣೀಯ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ತಾನೇ ಗುರುತಿಸಿ ಡಾಕ್ಟರೇಟ್ ನೀಡಿದರೆ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೂ ಒಂದು ಹಿರಿಮೆ. ಹಾಗೆ ಮಾಡದೆ ಗೌರವ ಡಾಕ್ಟರೇಟನ್ನು ಸಮಾಜದ್ರೋಹಿಗಳಿಗೆ ನೀಡಿದರೆ ಅದು ವಿವಿಗೇ ಮಾಡಿದ ಅವಮಾನ. ಇದನ್ನು ವಿವಿಯ ಮಂದಿ ಅರ್ಥಮಾಡಿಕೊಳ್ಳಲಿ. ಇಲ್ಲವಾದರೆ ಅದು ವಿವಿಯಲ್ಲ, ಬದಲಾಗಿ ನಿಜವಾಗಲೂ ಒಂದು 'ಜಾನುವರ್‌ಸಿಟಿ'ಯೇ ಸರಿ ಎಂದೆನಿಸುತ್ತದೆ.

• ವಿಶ್ವಾರಾಧ್ಯ ಸತ್ಯಂಪೇಟೆ

ವಿಶ್ವ ಹಿಂದೂ ಪರಿಷತ್‌ನಲ್ಲಿ ಕೀಚಕರು

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ 'ತನಿಖೆ' ಎಂಬ ಶಬ್ದಕ್ಕೆ 'ಆರೋಪಿಗಳ ರಕ್ಷಣೆ' ಎಂಬ ಹೊಸ ಅರ್ಥ ಚಾಲ್ತಿಗೆ ಬಂದಿದೆ. ಕೇಸರಿ ಪಕ್ಷದಲ್ಲಿನ 'ನೀಲಿ ಬಣ್ಣ' ಸದನದಲ್ಲಿ ರೆಡ್‌ಹ್ಯಾಂಡ್ ಆಗಿ ಬಯಲಾಗಿ ಇಡೀ ದೇಶಕ್ಕೆ ದೇಶವೇ ಛೀಮಾರಿ ಹಾಕುತ್ತಿರುವಾಗ ನೀಲಿಬಣ್ಣದವರನ್ನು ಒದ್ದುಹೊರಹಾಕಬೇಕಿದ್ದ ನಾಯಕರೇ 'ತನಿಖೆ'ಯ ಹೆಸರಿನಲ್ಲಿ ಅವರನ್ನು ರಕ್ಷಿಸಲು ಹೆಣಗುತ್ತಿರುವ ಅಸಹ್ಯಕರ ಕಸರತ್ತು ನಮ್ಮ ಕಣ್ಣ ಮುಂದಿದೆ. ಮತ್ತೊಂದು ಕಡೆ ಕೇಸರಿ ಬಣ್ಣದ ಕೀಚಕರು ಅಮಾಯಕ ಹೆಣ್ಣುಮಕ್ಕಳನ್ನು ರಕ್ಕಸರಂತೆ ಕಾಡುತ್ತಿದ್ದಾರೆ.



...ಇದು ಸಂಘ ಪರಿವಾರದ ಮತ್ತೊಬ್ಬ ...ನ ಹೀನ ವೃತ್ತಾಂತ. ಈತನ ಹೆಸರು ... ಸುವರ್ಣ. ಈತ ವಿಶ್ವ ಹಿಂದೂ ...ಷ್ ಎಂಬ ಢೋಂಗಿ ಹಿಂದೂ ...ಟನೆಯ ಸ್ಥಳೀಯ ಅಧ್ಯಕ್ಷ. ಈ ಕೀಚಕನ ...ಯಾವ ಹಂತ ತಲುಪಿದೆಯೆಂದರೆ, ...ಲೈಂಗಿಕ ಕಿರುಕುಳಕ್ಕೆ ಸಿಲುಕಿ ನಲುಗಿದ ...ಯಕ ಯುವತಿಯೊಬ್ಬಳು ಈ ಬದುಕೇ ...ದು ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಯಲ್ಲಿ ...ಗಾಗಿ ಹೆಣಗುತ್ತಿದ್ದಾಳೆ. ಪಡುಬಿದ್ರಿ ...ಸರು ಮಾಮೂಲಿಯಂತೆ ಪ್ರಕರಣ ...ಿಸಿಕೊಂಡು 'ತನಿಖೆ ಮಾಡುತ್ತಿದ್ದಾರೆ'. ...ದ್ಧಾರಕ ಕೇಶವ ಬಿಜೆಪಿ ಮತ್ತು ...ರದ ತನ್ನ ಎಲ್ಲಾ ಬೆಂಬಲಿಗರ ಪ್ರಭಾವ ...ಈ ಪ್ರಕರಣವನ್ನು ಮುಚ್ಚಿಹಾಕಲು ...ತ್ತಿದ್ದಾನೆ.

...ಪ್ರಕರಣದ ವಿವರಗಳನ್ನು ನೀವೇ ...; ಕರ್ನಾಟಕವನ್ನು ಕಾಡುತ್ತಿರುವ ಈ ...ಪರಿವಾರದ ಶನಿಗಳಿಗೆ ಯಾವ ರೀತಿ ಬುದ್ಧಿ ...ಕೆಂದು ನೀವೇ ನಿರ್ಧರಿಸಿ.

...ಕೀಚಕನ ಬಲಿಪಶು ಗೀತಾ ಎಂಬ 23 ವರ್ಷ ವಯಸ್ಸಿನ ಸುಂದರ ...ತಿ. ಈಕೆಯ ಹುಟ್ಟೂರು ಮುಲ್ಕಿ ಬಳಿಯ ಪಕ್ಷಿಕೆರೆ ಗ್ರಾಮ. ಅದೇ ಗ್ರಾಮದ ...ಎಂಬ ಹುಡುಗನನ್ನು ಕೆಲ ವರ್ಷಗಳ ಹಿಂದೆ ಈಕೆ ವಿವಾಹವಾಗಿದ್ದಾಳೆ. ... ಬಿಲ್ಲವ ಎಂಬ ಹಿಂದುಳಿದ ಜಾತಿಗೆ ಸೇರಿದವರು. ಮದುವೆಯ ನಂತರ ...ದಂಪತಿ ಸುಂದರ ಬದುಕಿನ ಕನಸು ಹೊತ್ತು ಹೆಜಮಾಡಿ ಗ್ರಾಮಕ್ಕೆ ಬಂದು ...ತಿ ರಸ್ತೆಯಲ್ಲಿ ಬಾಡಿಗೆ ಮನೆಯನ್ನು ಪಡೆದು ಸಂಸಾರನೌಕೆ ಪ್ರಾರಂಭಿಸಿದರು. ... ವೃತ್ತಿಯಿಂದ ಎಲೆಕ್ಟ್ರಿಷಿಯನ್. ಆದ್ದರಿಂದ ಆತ ಹೆಜಮಾಡಿಯಿಂದ ...ರು ಮೂರು ನಾಲ್ಕು ಕಿಲೋಮೀಟರ್ ದೂರದ ಪಡುಬಿದ್ರಿಯಲ್ಲಿ ...ವಾರ್ ವೈಂಡಿಂಗ್ ವರ್ಕ್‌ಶಾಪೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ಇತ್ತ ಗೀತ ...ಹೆಜಮಾಡಿಯಲ್ಲಿ ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಳು.

...ದ್ದಷ್ಟರಲ್ಲೇ ಹೊಂದಿಕೊಂಡು ಸಂತೃಪ್ತಜೀವನ ಸಾಗಿಸುತ್ತಿದ್ದ ಈ ಯುವ ...ತಿಯ ಬದುಕಿನಲ್ಲಿ ಒಬ್ಬ 'ಹಿಂದೂ ವೀರ'ನೊಬ್ಬನ ಪ್ರವೇಶವಾಯಿತು. ಅದು ...ದರೆ ಹೆಜಮಾಡಿ ಪೇಟೆಯಲ್ಲಿ ಕೇಶವ ಸುವರ್ಣನ ಮಾಲಿಕತ್ವದಲ್ಲಿ 'ಸುವರ್ಣ ...ಸ್ಟೋರ್' ಎಂಬ ಅಂಗಡಿಯೊಂದಿದೆ. ತನ್ನ ಬ್ಯೂಟಿ ಪಾರ್ಲರ್‌ಗೆ ಹೋಗುವ ...ದಲ್ಲೇ ಇರುವ ಈ ಶಾಪಿಗೆ ಬ್ಯೂಟಿ ಪಾರ್ಲರ್‌ಗೆ ಬೇಕಾದ ಪರಿಕರಗಳನ್ನು ...ಖರೀದಿಗಾಗಿ ಗೀತಾ ಹೋಗುತ್ತಿದ್ದಳು. ಅದೇ ಆಕೆಯ ಪಾಲಿಗೆ ...ವಾಗಿಹೋಯಿತು. ಏಕೆಂದರೆ ಸುಂದರ ಯುವತಿಯ ಮೇಲೆ ಈ ಕೇಶವನ ...ಕದೃಷ್ಟಿ ಬಿದ್ದಿತ್ತು.

...ಈತ ಹೇಳಿ ಕೇಳಿ ಸಂಘ ಪರಿವಾರದ ಕಟ್ಟಾಳು. ಆದ್ದರಿಂದ ಮಹಾಭಾರತದ ...ನ್ನು ಆತ ತಪ್ಪದೇ ಅಭ್ಯಾಸ ಮಾಡಿರಲೇಬೇಕು. ಅದರಲ್ಲೂ ಅಜ್ಞಾತವಾಸದಲ್ಲಿ ...ಹಾಯಕ ಸ್ಥಿತಿಯಲ್ಲಿದ್ದ ದ್ರೌಪದಿಗೆ ಕೀಚಕನೆಂಬ ಕಾಮುಕ ಕೊಟ್ಟ ...ಳಗಳಿಂದ ಕೇಶವ ಪ್ರಭಾವಿತನಾಗಿದ್ದಂತೆ ಕಾಣುತ್ತದೆ. ಹೇಗೂ ಹೊರ ...ನಿಂದ ಬಂದಿದ್ದ ಗೀತಾಗೆ ಈ ಊರಿನಲ್ಲಿ ಬಂಧುಬಳಗವಾಗಲಿ, ಬೆಂಬಲಿಗರಾಗಲಿ ಇಲ್ಲದ ಅಸಹಾಯಕ ಪರಿಸ್ಥಿತಿ. ಈ ವಿಹಿಂಪ ಕೀಚಕ ಗೀತಾಳ ರಾಶಿಗೆ ಇಳಿಯಲು ತೀರ್ಮಾನಿಸಿಬಿಟ್ಟ.

ಅಂಗಡಿಗೆ ವಸ್ತುಗಳ ಖರೀದಿಗಾಗಿ ಬಂದ ಗೀತಾಳನ್ನು ಮಾತಿಗೆಳೆದು ಆಕೆಯ ಸೌಂದರ್ಯವನ್ನು ಹೊಗಳಲು ಪ್ರಾರಂಭಿಸಿದ. ತಾನು ಎಲ್‌ಐಸಿ ಏಜೆಂಟ್ ಎಂಬುದಾಗಿಯೂ ಆಕೆಗೆ ಉತ್ತಮ ಲಾಭದಾಯಕ ಪಾಲಿಸಿಗಳನ್ನು ಕೊಡಿಸುವುದಾಗಿಯೂ ಪುಸಲಾಯಿಸಲು ಶುರು ಮಾಡಿದ. ಆದರೆ ಗೀತಾ ಅಗ್ರಿಗೋಲ್ಡ್‌ನಲ್ಲಿ ಕೆಲಸ ಮಾಡುತ್ತಿದ್ದ ಗೆಳತಿಯೊಬ್ಬಳ ಮೂಲಕ ಸಣ್ಣಪ್ರಮಾಣದ ಉಳಿತಾಯ ಮಾಡುತ್ತಿದ್ದೇವೆಂದೂ, ಎಲ್‌ಐಸಿ ಪಾಲಿಸಿ ಮಾಡಿಸಲು ತಮಗೆ ಹೆಚ್ಚಿನ ಆದಾಯವಿಲ್ಲವೆಂದೂ ಹೇಳಿ ತನ್ನಪಾಡಿಗೆ ತಾನು ಹೊರಟುಬಿಟ್ಟಳು. ನಂತರ ವರಸೆ ಬದಲಿಸಿದ ಕೇಶವ ಅಗ್ರಿಗೋಲ್ಡ್ ಕಂಪನಿಯಲ್ಲಿ ತಾನು ಸಹ ಹಣ ಹೂಡುತ್ತೇನೆ, ನನಗೆ ನಿಮ್ಮ ಗೆಳತಿಯ ಪರಿಚಯ ಮಾಡಿಕೊಡು ಎಂದು ಮಾತು ಶುರು ಮಾಡಿಕೊಂಡ.

ಹೇಗೋ ಮಾಡಿ ಆಕೆಯ ಫೋನ್ ನಂಬರ್ ಪಡೆದುಕೊಂಡ ಈ ದುಷ್ಟಜಂತು ಫೋನಿನಲ್ಲಿ ಮಾತಾಡಲು ಶುರುವಿಟ್ಟುಕೊಂಡ, ಮಾತಿನ ವರಸೆಯನ್ನೇ ಬದಲಿಸಿ ದ್ವಂದ್ವಾರ್ಥದ, ಅಶ್ಲೀಲ ಮಾತುಗಳನ್ನಾಡಲು ಪ್ರಾರಂಭಿಸಿದ. 'ನಿನ್ನ ಗೆಳತಿಯ ಕಂಪನಿಯಲ್ಲಿ ಹತ್ತು ಸಾವಿರ ಹಣ ಠೇವಣಿ ಇಡುತ್ತೇನೆ, ನಿನಗೂ ಹತ್ತು ಸಾವಿರ ಕೊಡುತ್ತೇನೆ.' ಇತ್ಯಾದಿ ಆಮಿಷದ ಮಾತುಗಳನ್ನಾಡಿದ. 'ನನ್ನ ಜೊತೆ ಉಡುಪಿಗೆ ಬಾ, ಅಲ್ಲಿ ಎಲ್ಲಾ ವ್ಯವಸ್ಥೆ ಇದೆ, ನಿನಗೆ ಎಷ್ಟು ಬೇಕಾದರೂ ಹಣ ಕೊಡುತ್ತೇನೆ, ನಿನ್ನ ಗಂಡನಿಂದ ನಿನಗೆ ಇನ್ನೂ ಮಕ್ಕಳಾಗಿಲ್ಲ, ನಾನು ನಿನಗೆ ಮಕ್ಕಳನ್ನು ಕೊಡುತ್ತೇನೆ' ಇನ್ನೂ ಮುಂತಾದ ಅಸಹ್ಯಕರ, ಅಶ್ಲೀಲ ಮಾತುಗಳನ್ನು ಕೇಳಿ ರೋಸಿ ಹೋದ ಗೀತಾ ಎಂಬ ಹೆಣ್ಣುಮಗಳು ಆತನಿಗೆ ಸರಿಯಾಗಿ ಛೀಮಾರಿ ಹಾಕಿ ಇನ್ನೊಮ್ಮೆ ಫೋನ್ ಮಾಡಿದರೆ ತನ್ನ ಗಂಡನಿಗೆ ತಿಳಿಸುವುದಾಗಿ ಹೇಳಿ ಫೋನ್ ಕಟ್ ಮಾಡಿಬಿಟ್ಟಳು.

ಆತನ ಅಂಗಡಿಯ ಕಡೆ ತಲೆ ಹಾಕಬಾರದೆಂದು ನಿರ್ಧರಿಸಿದಳು. ಈ ಕ್ರಿಮಿಯ ಕಿರುಕುಳದ ಬಗ್ಗೆ ಗೀತಾ ತನ್ನ ಹಿರಿಯ ಹಿತೈಷಿಯೊಬ್ಬರಲ್ಲಿ ಹೇಳಿಕೊಂಡಳು. ಈ ಕೇಶವನ ಕೀಚಕ ವೃತ್ತಾಂತವನ್ನು ತಿಳಿದಿದ್ದ ಆ ಹಿರಿಯರು ಆತ ಎಂಥಾ ದುಷ್ಟನೆಂಬುದನ್ನು ಈಕೆಗೆ ವಿವರಿಸಿ ಹೇಳಿ, ಮೊಬೈಲ್ ನಂಬರ್ ಬದಲಾಯಿಸಲು ಸಲಹೆ ನೀಡಿದರು. ಅದರಂತೆ ಮೊಬೈಲ್ ಸಿಮ್ ಬದಲಾಯಿಸಿದ ಗೀತಾ ತನ್ನ ಎಂದಿನ ಕಾರ್ಯದಲ್ಲಿ ತಾನು ಮಗ್ನಳಾದಳು.

ಅಲ್ಲಿಗೆ ಗೀತಾ ತನ್ನ ಕಾಮುಕ ಹಿಡಿತಕ್ಕೆ ದಕ್ಕದಿದ್ದುದರಿಂದ ಹತಾಶಗೊಂಡ ಕೇಶವ ತನ್ನ ಕ್ರಿಮಿನಲ್ ಮಿತ್ರನೊಬ್ಬನನ್ನು ಅಖಾಡಕ್ಕೆ ಇಳಿಸಿದ. ಹೇಗೂ ಒಂದೇ ಊರಿನಲ್ಲಿರುವಾಗ ಆಕೆಯ ನಂಬರ್ ಪಡೆದುಕೊಳ್ಳುವುದು ಈ ಹಿಂದೂ ಮುಖಂಡರಿಗೆ ಅಷ್ಟೇನೂ ಕಷ್ಟದ ಕೆಲಸವಾಗಿರಲಿಲ್ಲ. ನಾನಾ ಕ್ರಿಮಿನಲ್ ಹಿನ್ನೆಲೆಯಿರುವ, ಈ ಹಿಂದೆ ಹಲವು ಕೇಸುಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಈತನ ಆಪ್ತ ಮಿತ್ರನೊಬ್ಬ ಇದೇ ತಿಂಗಳ 13 ರಂದು ಈಕೆಯ ಹೊಸ ನಂಬರ್‌ಗೆ 8123368699 ಸಂಖ್ಯೆಯ ಫೋನ್‌ನಿಂದ ಕರೆಮಾಡಿ ಬೆದರಿಕೆ ಹಾಕಲು ಶುರುವಾದ. ಆತ ಆಡಿದ ಮಾತುಗಳಾದರೂ ಎಂಥವು? ಪುರುಷಾಧಿಪತ್ಯ ಮೌಲ್ಯಗಳಿಂದ ತುಂಬಿರುವ ನಮ್ಮ ಸಮಾಜದಲ್ಲಿ ಎಂಥಾ ಗಟ್ಟಿ ಗುಂಡಿಗೆಯ ಹೆಣ್ಣಾದರೂ ಕುಸಿದುಹೋಗುವಂಥಾ ಮಾತುಗಳು. ಕೇಶವನಿಗೂ ಗೀತಾಳಿಗೂ ಅನೈತಿಕ ಸಂಬಂಧವಿದೆ ಎಂಬಂತೆ ನಿಂದಿಸಿದ ಆ ನೀಚ 'ನಾನು ಹಣ ಕೊಡುತ್ತೇನೆ, ನನ್ನ ಜೊತೆಗೆ ಬಾ' ಎಂದು ಧಮಕಿ ಹಾಕಿದ್ದಾನೆ. 'ನಾವು ಹೇಳಿದಂತೆ ನೀನು ಕೇಳದೇ ಹೋದರೆ ನಿನ್ನ ಗಂಡನನ್ನು ಕೊಲೆ ಮಾಡುತ್ತೇವೆ' ಎಂದು ಬೆದರಿಕೆ ಹಾಕಿದ್ದಾನೆ.

ಮೊದಲೇ ಕೇಶವನ ಕಿರುಕುಳದಿಂದ ಹೈರಾಣಾಗಿದ್ದ ಈ ಅಸಹಾಯಕ ಮಹಿಳೆಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ತಾನು ಬದುಕಿದ್ದರೆ ಈ ದುಷ್ಟರಿಂದ ತನಗೆ ಅಪನಿಂದೆ ಬರುವುದು ಗ್ಯಾರಂಟಿ. ಅಷ್ಟು ಮಾತ್ರವಲ್ಲದೆ ತನ್ನ ಗಂಡನ ಜೀವಕ್ಕೂ ಸಂಚಕಾರವೆಂದು ಯೋಚಿಸಿದ್ದಾಳೆ. ತಾನು ಸಾಯುವುದೇ ಇದಕ್ಕೆಲ್ಲಾ ಉತ್ತಮ ಪರಿಹಾರವೆಂದು ತೀರ್ಮಾನಿಸಿ ಮನೆಯಲ್ಲಿದ್ದ ಅದೆಷ್ಟೋ ಮಾತ್ರೆಗಳನ್ನು, ಇನ್ನಿತರ ಔಷಧಿಗಳನ್ನು ಒಟ್ಟಿಗೆ ಕುಡಿದುಬಿಟ್ಟಿದ್ದಾಳೆ.

ಅದೇವೇಳೆಗೆ ಅದೃಷ್ಟವಶಾತ್ ಮನೆಗೆ ಬಂದ ಆಕೆಯ ಗಂಡ ಅನೀತ್ ಬಿದ್ದು ಒದ್ದಾಡುತ್ತಿದ್ದ ತನ್ನ ಪತ್ನಿಯನ್ನು ಸಮೀಪದ ಪಡುಬಿದ್ರಿಯ ಡಾಕ್ಟರ್ ಒಬ್ಬರ ಬಳಿಗೆ ಕರೆತಂದ. ಆದರೆ ಗೀತಾಳ ಸ್ಥಿತಿಯನ್ನು ಕಂಡ ಆ ವೈದ್ಯರು ತಮ್ಮಿಂದ ಇದು ಸಾಧ್ಯವಿಲ್ಲವೆಂದು ಕೈಚೆಲ್ಲಿಬಿಟ್ಟರು. ಬೇರೆ ದಾರಿಯಿಲ್ಲದೆ ಆಕೆಯನ್ನು ದೂರದ ಕಾರ್ನಾಡುವಿನಲ್ಲಿರುವ ಚೇತನಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಕಾಲಕ್ಕೆ ಚಿಕಿತ್ಸೆ ದೊರಕಿದ್ದರಿಂದ ಗೀತಾ ಪ್ರಾಣಾಪಾಯದಿಂದ ಪಾರಾಗಿದ್ದು ಸದ್ಯ ಚೇತರಿಸಿಕೊಳ್ಳುತ್ತಿದ್ದಾಳೆ.

ಈ ದುರ್ವಾರ್ತೆಯನ್ನು ಕೇಳಿದ ಗೀತಾ-ಅನೀತ್ ದಂಪತಿಯ ಬಂಧುಗಳು ಊರಿನಿಂದ ಧಾವಿಸಿ ಬಂದಿದ್ದಾರೆ. ಪೊಲೀಸ್ ಕಂಪ್ಲೈಂಟ್ ಕೊಡಲೆಂದು ಸೀದಾ ಪಡುಬಿದ್ರಿ ಠಾಣೆಗೆ ಹೋಗಿದ್ದಾರೆ. ಇದು ವಿಎಚ್‌ಪಿ ಮುಖಂಡನ ವಿರುದ್ಧದ ಕೇಸಾದ್ದರಿಂದ ಪಡುಬಿದ್ರಿ ಪೊಲೀಸರಿಗೆ ಕೇಸು ದಾಖಲಿಸುವುದು ಅಷ್ಟು ಸಲೀಸಲ್ಲ. ಅದೂಅಲ್ಲದೇ ಈ ಕೇಶವ ಸ್ಥಳೀಯ ಎಮ್ಮೆಲ್ಲೆ ಲಾಲಾಜಿ ಮೆಂಡನ್‌ರವರ ಸ್ವಜಾತಿ ಬಂಧು ಬೇರೇ! ಆದರೆ ಅಮಾಯಕರ ದುಸ್ಥಿತಿಯನ್ನು ಕಂಡು ಇವರ ಸಹಾಯಕ್ಕೆ ನಿಂತ ಕೆಲವು ಪತ್ರಕರ್ತರ ಬೆಂಬಲದಿಂದ ಹೇಗೋ ಕೇಸು ದಾಖಲು ಮಾಡಿದ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಪಡುಬಿದ್ರಿ ಠಾಣಾ ಅಪರಾಧ ಕ್ರಮಾಂಕ 12/2012 ಕಲಂ 507, 506, 509 ಜೊತೆಗೆ ಐಪಿಸಿ 34 ರ ಪ್ರಕಾರ ಪ್ರಕರಣ ದಾಖಲಿಸಲಾಗಿದೆ. ಆದರೆ ನಿರೀಕ್ಷೆಯಂತೆ ಆರೋಪಿ ಕೇಶವ 'ತಲೆಮರೆಸಿ'ಕೊಂಡಿರುವುದರಿಂದ ಪೊಲೀಸರ ಕೈಗೆ ಸಿಕ್ಕಿಲ್ಲವಂತೆ! ಕರ್ನಾಟಕದ ಪೊಲೀಸರು ಇತ್ತೀಚೆಗೆ ತಾನಾಗಿಯೇ ಬಲೆಗೆ ಬಿದ್ದು ಹರಿಯಾಣದಲ್ಲಿ ಒತ್ತೆಯಾಳಾಗಿದ್ದ ಒಬ್ಬ ಶತಮೂರ್ಖ ಡಾಕ್ಟರ್‌ನನ್ನು ಒಂದೇ ದಿನದಲ್ಲಿ ಸುರಕ್ಷಿತವಾಗಿ ಬಿಡಿಸಿಕೊಂಡು ಬಂದಿದ್ದಾರೆ. ಅದಕ್ಕೆಲ್ಲಾ ಅವರಿಗಿದ್ದ ಆಧಾರ ಕೇವಲ ಒಂದು ಫೋನ್ ಕರೆ ಮಾತ್ರ. ಈ 'ರಾಮ ಭಕ್ತ' ಕೇಶವನನ್ನು ಬಂಧಿಸಲು ರಾಶಿಗಟ್ಟಲೆ ಸುಳಿವುಗಳು, ಸಂಪರ್ಕಗಳಿದ್ದರೂ ಆತ 'ನಾಪತ್ತೆ'ಯಾಗಿದ್ದಾನಂತೆ. ಎಂದಿನಂತೆ ತನಿಖೆ ಪ್ರಗತಿಯಲ್ಲಿದೆ.

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ 'ತನಿಖೆ' ಎಂಬ ಶಬ್ದಕ್ಕೆ 'ಆರೋಪಿಗಳ ರಕ್ಷಣೆ' ಎಂಬ ಹೊಸ ಅರ್ಥ ಚಾಲ್ತಿಗೆ ಬಂದಿದೆ. ಕೇಸರಿ ಪಕ್ಷದಲ್ಲಿನ 'ನೀಲಿ ಬಣ್ಣ' ಸದನದಲ್ಲಿ ರೆಡ್‌ಹ್ಯಾಂಡ್ ಆಗಿ ಬಯಲಾಗಿ ಇಡೀ ದೇಶಕ್ಕೆ ದೇಶವೇ ಛೀಮಾರಿ ಹಾಕುತ್ತಿರುವಾಗ ನೀಲಿಬಣ್ಣದವರನ್ನು ಒದ್ದುಹೊರಹಾಕಬೇಕಿದ್ದ ನಾಯಕರೇ 'ತನಿಖೆ'ಯ ಹೆಸರಿನಲ್ಲಿ ಅವರನ್ನು ರಕ್ಷಿಸಲು ಹೆಣಗುತ್ತಿರುವ ಅಸಹ್ಯಕರ ಕಸರತ್ತು ನಮ್ಮ ಕಣ್ಣ ಮುಂದಿದೆ. ಮತ್ತೊಂದುಕಡೆ ಕೇಸರಿ ಬಣ್ಣದ ಕೀಚಕರು ಅಮಾಯಕ ಹೆಣ್ಣುಮಕ್ಕಳನ್ನು ರಕ್ಕಸರಂತೆ ಕಾಡುತ್ತಿದ್ದಾರೆ. ಹೀಗಿರುವಾಗ ಪಡುಬಿದ್ರಿ ಪೊಲೀಸರು ಸಹ 'ತನಿಖೆ' ನಡೆಸುತ್ತಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ! ಈ ರಾವಣರಾಜ್ಯದಲ್ಲಿ ಗೀತಾಳಂತಹ ಅಮಾಯಕ ಹೆಣ್ಣುಮಕ್ಕಳ ಮಾನ - ಪ್ರಾಣಗಳನ್ನು ಕಾಪಾಡುವವರಾರು???

-ದೊಡ್ಡಿಪಾಳ್ಯ ನರಸಿಂಹಮೂರ್ತಿ

ಹೆಜಮಾಡಿಯಲ್ಲಿ ಅಡ್ವಾಣಿಗೆ ಸ್ವಾಗತ...



ಹೆಜಮಾಡಿಯಲ್ಲಿ ಕೇಸರಿ ಬಣ್ಣ

...ಹೆದ್ದಾರಿ 66 ರಲ್ಲಿರುವ ಈ ಹೆಜಮಾಡಿ ಎಂಬ ... ಉಡುಪಿ ಮತ್ತು ಮಂಗಳೂರು ಜಿಲ್ಲೆಗಳ ಗಡಿ ಹಳ್ಳಿ. ಈ ... ರಾಗಾಯ್ತೆಂದಲೂ ಕೇಸರಿ ಕೂಟದ ಚಟುವಟಿಕೆಗಳು ... ಹೆಜಮಾಡಿ ಕಳೆದ ವರ್ಷ [illegible] ...ದಿದ್ದರು ಕಳೆದ ವರ್ಷ [illegible] ...ಗೊಂಡಿದ್ದು ಗೊತ್ತಲ್ಲವೆ? ಆ ಸಂದರ್ಭದಲ್ಲಿ ... ಗಿರುಕ್ ತೋರಿಸಿದರು. ಹೀಗೆ ... ಮಂಗಳೂರಿಗೆ ಬಂದಾಗ ಇಡೀ ಕರಾವಳಿಯ ಕೇಸರೀಕರಣ ... ಇದೇ ಹೆಜಮಾಡಿ ಗ್ರಾಮದ ಬಳಿ ಅದ್ದೂರಿ ಸ್ವಾಗತ ... ಕೋರಿದರು. ಹೀಗ ಹೆಜಮಾಡಿಗೂ ಕೇಸರಿ ಕೂಟಕ್ಕೂ ... ಸಂಬಂಧ ಹಣಗಾಡುಕೊಂಡಿದೆ.


ಫರ್‌ಫೆಕ್ಟ್ ಕೇಸರಿ ಕೇಡರ್!

ಇಷ್ಟೆಲ್ಲಾ ಓದಿದ ಮೇಲೆ ಈತ ಪಡ್ಡೆ ಹುಡುಗನಿರಬಹುದು ಎಂದು ಅನಿಸುವುದು ಸಹಜ. ಆದರೆ ನಮ್ಮ ಊಹೆ ತಪ್ಪು. ಸುಮಾರು 46-47 ವರ್ಷದ ಆಜುಬಾಜಿನಲ್ಲಿರುವ ಈತ ಇಬ್ಬರು ಮಕ್ಕಳ ತಂದೆ. ಇವನಿಗೆ ಈ ಕಾಯಕ ಹೊಸದೇನೂ ಅಲ್ಲ. ಈತನ ಕೀಚಕ ದಾಳಿಗೆ ಸಿಕ್ಕು ನಲುಗಿದ ಮಹಿಳೆಯರಿಗೆ ಲೆಕ್ಕವಿಲ್ಲ. ಸುಮಾರು 10-12 ವರ್ಷಗಳ ಹಿಂದೆ ದಲಿತ ಬಾಲಕಿಯೊಬ್ಬಳಿಗೆ ಈತ ನೀಡಿದ್ದ ಕಿರುಕುಳದಿಂದ ದೊಡ್ಡ ರಾದ್ಧಾಂತವೇ ಆಗಿತ್ತು. ದಲಿತರನ್ನು ಗೋಳು ಹುಯ್ದುಕೊಳ್ಳುವುದರಲ್ಲೂ ಈತ ನಿಸ್ಸೀಮ. ಈ ಹಿಂದೆ ಈತನ ವಿರುದ್ಧ ದಲಿತರ ಮೇಲಿನ ದೌರ್ಜನ್ಯಕ್ಕಾಗಿ ಅಟ್ರಾಸಿಟಿ ಕಾಯ್ದೆಯಡಿ ಕೇಸು ದಾಖಲಾಗಿತ್ತು. ಈ ಕೇಶವನೆಂಬ ಕೀಚಕ ಹೆಜಮಾಡಿಯ ಸುತ್ತಮುತ್ತಲ ಪರಿಸರವನ್ನು ಹಾಳುಗೆಡಹುವ ಕಾಯಕದಲ್ಲಿ ತೊಡಗಿರುವ ಕೇಸರಿಪಡೆಯ ಮುಖ್ಯಪಾತ್ರಧಾರಿಗಳಲ್ಲೊಬ್ಬ. ಹೀಗೆ ಸಕಲಗುಣಸಂಪನ್ನನಾಗಿರುವ ಕೇಶವ ಚಡ್ಡಿಪಡೆಗೆ ಫರ್‌ಫೆಕ್ಟ್ ಕೇಡರ್! ಆದ್ದರಿಂದಲೆ ಈತ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಅಧ್ಯಕ್ಷ. ಸಾರ್ವಜನಿಕ ಸತ್ಯನಾರಾಯಣ ಪೂಜಾ ಸಮಿತಿಯ ನಾಯಕ. ಆ ಎರಡೂ ಸಮಿತಿಗಳು ನೇರವಾಗಿ ವಿಶ್ವ ಹಿಂದೂ ಪರಿಷತ್‌ನಡಿ ಕಾರ್ಯನಿರ್ವಹಿಸುತ್ತವೆ. ಅಷ್ಟು ಮಾತ್ರವಲ್ಲದೆ ಈತ ಹಾಗೂ ಗ್ರಾಮದ ಮಹಾಲಿಂಗೇಶ್ವರ ಸ್ವಾಮಿ ದೇವಸ್ಥಾನದ ಟ್ರಸ್ಟಿ. ಈ ಟ್ರಸ್ಟ್‌ನಲ್ಲಿ ಬಹುಪಾಲು ಮಂದಿ ಇಂಥ ಆಸಾಮಿಗಳೇ ಸೇರಿಕೊಂಡಿದ್ದಾರೆಂದು ಭಕ್ತಾದಿಗಳು ಅಲವತ್ತುಕೊಂಡಿದ್ದಾರೆ.

ಈ ದೇವಸ್ಥಾನವು ಪುತ್ತಿಗೇ ಮಠದ ವ್ಯಾಪ್ತಿಗೆ ಬರುತ್ತದೆ. ಈ ದೇವಸ್ಥಾನವನ್ನು ತಮ್ಮ ನೇತೃತ್ವದ ಟ್ರಸ್ಟ್‌ಗೆ ವಹಿಸಿಕೊಡಬೇಕೆಂದು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಆದರೆ ಸುಗುಣೇಂದ್ರ ಸ್ವಾಮಿಗೆ ಈ ಟ್ರಸ್ಟ್‌ನಲ್ಲಿರುವ ಆಸಾಮಿಗಳ ಬಗ್ಗೆ ಸ್ವಲ್ಪವೂ ನಂಬಿಕೆಯಿಲ್ಲವಾದ್ದರಿಂದ ಇವರ ಸುಪರ್ದಿಗೆ ದೇವಸ್ಥಾನವನ್ನು ಬಿಟ್ಟುಕೊಟ್ಟಿಲ್ಲ.

ಇಷ್ಟೆಲ್ಲಾ ಬರುದು ಬಾವಲಿಗಳನ್ನು ಪಡೆದಿರುವ ಈ ಕೇಸರಿ ಕುನ್ನಿಯನ್ನು ಆತನ ಪರಿವಾರದವರು ಹೇಗಾದರೂ ಮಾಡಿ ಉಳಿಸಲು ಹೆಣಗಾಡುವುದು ಸಹಜ ತಾನೆ?

ಜೆಮ್ ಕಾರ್ಬೆಟ್‌ನ 'My India' ಪುಸ್ತಕದ ಒಂದು ಬರಹ ಇದು.
'ಆ ಕಾಲ ಮತ್ತೆ ಬರಬಾರದೆ, ಅಂತಾ ಜನ ಮತ್ತೆ ಸಿಗಬಾರದೆ' ಅಂತೆನಿಸುವಷ್ಟು ಚಂದನೆಯ ಬರಹ ಇದು.
ಕಾರ್ಬೆಟ್‌ನ ಜೀವನದೃಷ್ಟಿ, ಗ್ರಹಿಕೆ ಹಾಗೂ ಮಾನವೀಯ ವ್ಯಕ್ತಿತ್ವವನ್ನು 'ಲಾಲಾಜಿ' ಬಹಳ ಚೆನ್ನಾಗಿ ಬಿಂಬಿಸುತ್ತದೆ.
ಈ ಬರಹ ಖಂಡಿತಾ ನಿಮಗಿಷ್ಟವಾಗುತ್ತದೆ.



ಲಾಲಾಜಿ

ಪ್ರಯಾಣಿಕರನ್ನು ಹೊತ್ತು ತರುವ ಹಡಗು ಸಮೇರಿಯಾಘಾಟನಿಂದ ಬರುವುದು ನಿಧಾನವಾಗಿತ್ತು. ಜನ ಇಳಿದು ಆತುರದಿಂದ ಇಳಿಜಾರಿನ ಮೇಲೇರಿ ಬ್ರಾಡ್‌ಗೇಜು ರೈಲು ಹತ್ತಲು ಹೋಗುತ್ತಾ ಇದ್ದುದನ್ನು ನೋಡುತ್ತಾ ನಾನು ನಿಂತಿದ್ದೆ. ಅವರಿಗೋಸ್ಕರ ರೈಲು ಹಲವಾರು ನಿಮಿಷ ನಿಧಾನವಾಗಿ ಹೊರಡಲು ಏರ್ಪಾಡು ಮಾಡಿದ್ದೆ. ಹಿಂದೆಂದೋ ಬಣ್ಣ ಹೊಂದಿದ್ದು ಈಗ ಅದನ್ನು ಕಳೆದುಕೊಂಡಿದ್ದ, ತೇಪೆ ಹಾಕಿದ್ದ ಸೂಟ್ ಧರಿಸಿ, ಕಣ್ಣುಗಳು ಗುಳಿ ಬಿದ್ದಿದ್ದು ಬಣ್ಣದ ತೆಳ್ಳನೆಯ ಕರವಸ್ತ್ರದಲ್ಲಿ ಕಟ್ಟಿದ್ದ ಒಂದು ಗಂಟು ಹಿಡಿದ ಒಬ್ಬಾತ ಕೊನೆಯಲ್ಲಿ ಹೊರಬಿದ್ದ. ಹಡಗಿನ ದಾರಿಯ ಪಕ್ಕದಲ್ಲಿ ಹಿಡಿದುಕೊಳ್ಳಲು ಹಾಕಿದ್ದ ಕಂಬಿ ಹಿಡಿದುಕೊಂಡು ಇಳಿಯುವ ಭಾಗ ಸೇರಿದ. ಇಳಿಜಾರಿನ ಬಳಿ ತಿರುಗಿ ನಿಧಾನವಾಗಿ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆದು ನದಿಯ ದಡ ಸೇರಿದ. ಆತ ಮರುಕಳಿಸುವ ಯಾವುದೋ ಭಯಂಕರ ಕಾಯಿಲೆಗೆ ಗುರಿಯಾಗಿದ್ದಂತೆ ಕಾಣಬರುತ್ತಿತ್ತು, ಮುಖ ತೊಳೆದುಕೊಳ್ಳಲು ಬಗ್ಗಿ, ಗಂಟು ಬಿಚ್ಚಿ, ಅದರಿಂದ ಒಂದು ಹಚ್ಚಡ ಹೊರತೆಗೆದು, ದಡದ ಮೇಲೆ ಅದನ್ನು ಹಾಸಿ, ಅಂಗಾಲುಗಳನ್ನು ನದಿಯ ನೀರಿನಲ್ಲಿ ಮುಳುಗುವಂತೆ ಇಟ್ಟು, ಅದರ ಮೇಲೆ ಮಲಗಿಕೊಂಡುಬಿಟ್ಟ. ರೈಲು ಹಿಡಿದು ಪ್ರಯಾಣ ಮಾಡುವ ಯೋಚನೆ ಆತನಿಗಿದ್ದಂತೆ ಕಾಣಬರಲಿಲ್ಲ. ರೈಲು ಹೊರಡುವ ಸೂಚನೆಗಳಾದರೂ ಆತ ಹೊರಡಲಿಲ್ಲ, ಅಲುಗಾಡಲೂ ಇಲ್ಲ, ಬೆನ್ನು ಕೆಳಗೆ ಮಾಡಿ ಮಲಗಿಯೇ ಇದ್ದ. ರೈಲು ತಪ್ಪಿಹೋಯಿತೆಂದು ಆತನಿಗೆ ನಾನು ಹೇಳಿದಾಗ, ಗುಳಿಬಿದ್ದ ಕಣ್ಣುಗಳನ್ನು ಬಿಟ್ಟು ನನ್ನ ಕಡೆ ನೋಡಿ, 'ಸಾಹೇಬರೇ, ನಾನು ಸಾಯುತ್ತಿದ್ದೇನೆ. ಆದುದರಿಂದ ರೈಲುಗಳ ಅವಶ್ಯಕತೆಯೇ ನನಗಿಲ್ಲ?' ಎಂದ.

ಅದು ಮಾವಿನ ಹಣ್ಣಿನ ಕಾಲ. ಈ ಕಾಲದಲ್ಲಿ ವಿಪರೀತ ಬಿಸಿಲಿದ್ದು ವಾಂತಿ, ಬೇಧಿ ಅತಿಯಾಗಿ ಹೆಚ್ಚಿ ಹೋಗಿರುತ್ತದೆ. ಆ ಮನುಷ್ಯ ಹಡಗಿನಿಂದ ಬರುತ್ತಿದ್ದಾಗ, ಓಡಾಟಕ್ಕಾಗಿ ಬಿಟ್ಟಿದ್ದ ದಾರಿಯ ಮೊದಲಲ್ಲಿ ನನ್ನನ್ನು ದಾಟಿ ಮುಂದಕ್ಕೆ ಹೋದಾಗಲೇ ಆತ ಕಾಲರಾಪೀಡಿತನಾಗಿರಬಹುದೆಂಬ ಸಂಶಯ ನನಗೆ ಬಂತು. ಅವನು ವಿಪರೀತ ನಿಶ್ಶಕ್ತನಾಗಿದ್ದುದನ್ನು ನೋಡಿ ಅದು ನನಗೆ ಖಚಿತವಾಯಿತು. ನನ್ನ ಪ್ರಶ್ನೆಗಳಿಗೆಲ್ಲಾ ಉತ್ತರವಾಗಿ ಒಬ್ಬನೇ ಪ್ರಯಾಣ ಮಾಡುತ್ತಿರುವುದಾಗಿಯೂ, ಮೊಖಾಮೆಯಲ್ಲಿ ಸ್ನೇಹಿತರಾರೂ ಇಲ್ಲವೆಂದೂ ಹೇಳಿದ. ಆತನಿಗೆ ನಿಲ್ಲಲು ಸಹಾಯಮಾಡಿ ಗಂಗಾ ನದಿಯಿಂದ ಇನ್ನೂರು ಗಜ ದೂರ ನಡೆಯಿಸಿಕೊಂಡು ನನ್ನ ಬಂಗಲೆಗೆ ಕರೆದೊಯ್ದೆ. ನನ್ನ ಹಂಖದಾಳಿನ ಮನೆ ಸೇವಕರ ಬಿಡಾರದಿಂದ ಬೇರೆಯಾಗಿದ್ದುದಲ್ಲದೆ ಖಾಲಿಯಾಗಿತ್ತು, ಅಲ್ಲಿ ಆತ ನೆಮ್ಮದಿಯಿಂದಿರಲು ಸೌಕರ್ಯ ಕಲ್ಪಿಸಿದೆ.

ಮೊಖಾಮೆಘಾಟಗೆ ಬಂದು ಹತ್ತು ವರ್ಷ ಆಗಿತ್ತು, ಅನೇಕ ಕೂಲಿಯಾಳುಗಳನ್ನು ಗೊತ್ತುಮಾಡಿಕೊಂಡಿದ್ದೆ. ನನ್ನ ಮೇಲ್ವಿಚಾರಣೆಯಲ್ಲಿ ನಾನು ಅವರಿಗೆ ಒದಗಿಸಿಕೊಟ್ಟಿರುತ್ತಿದ್ದ ಮನೆಗಳಲ್ಲಿ ಕೆಲವರು ವಾಸಿಸುತ್ತಿದ್ದರು. ಉಳಿದವರು ಸುತ್ತ ಮುತ್ತಲಿದ್ದ ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ನನ್ನ ಮೇಲ್ವಿಚಾರಣೆಯಲ್ಲಿದ್ದವರೂ, ಹಳ್ಳಿಯಲ್ಲಿ ವಾಸಿಸುವವರಲನೇಕರೂ ಕಾಲರಾ ಬೇನೆಯಿಂದ ನರಳಿದ್ದನ್ನು ಬೇಕಾದಷ್ಟು ನೋಡಿದ್ದೆ, ದುರದೃಷ್ಟವಶಾತ್ ನನಗೇನಾದರೂ ಆ ಕೆಟ್ಟ ಕಾಯಿಲೆ ಬಂದಿದ್ದರೆ ಯಾರಾದರೊಬ್ಬ ಪುಣ್ಯಾತ್ಮ ನನ್ನ ಮೇಲೆ ಕನಿಕರದಿಂದ ಗುಂಡು ಹೊಡೆದೋ ಅಥವಾ ಅತಿಯಾಗಿ ಅಫೀಮು ತಿನ್ನಿಸಿಯೋ ನನ್ನನ್ನು ಕೊಂದುಬಿಡಲೆಂದು ದೇವರನ್ನು ಪ್ರಾರ್ಥಿಸುತ್ತಿದ್ದೆ.

ಪ್ರತಿ ವರ್ಷ ಕಾಲರಾದಿಂದ ಮರಣ ಹೊಂದಿದವರೆಂದು ಪ್ರಕಟವಾಗುವ ಹತ್ತಾರು ಸಾವಿರ ಜನರಲ್ಲಿ ಅರ್ಧದಷ್ಟು ಜನ ಭಯದಿಂದಲೇ ಸಾಯುತ್ತಾರೆಂದು ನಾನು ಹೇಳಿದರೆ ಯಾರೂ ಒಪ್ಪಲಾರರು. ಭಾರತ ದೇಶಕ್ಕೆ ಬಂದು ಸ್ವಲ್ಪ ಹೆಚ್ಚು ಅಥವಾ ಕಡಿಮೆ ಕಾಲ ಇಲ್ಲೇ ಇದ್ದು ಹೊರಟುಹೋಗುವವರಿಗೂ ಇಲ್ಲಿಯೇ ವಾಸಿಸುವವರಿಗೂ ವ್ಯತ್ಯಾಸವೇನೆಂದರೆ, ಇಲ್ಲಿ ವಾಸಿಸುವವರು ದೈವವಾದಿಗಳು, ಆಯುಷ್ಯ ಮುಗಿಯುವವರೆಗೆ ಮನುಷ್ಯ ಸಾಯುವುದಿಲ್ಲವೆಂದು ಅವರ ನಂಬಿಕೆ. ಅಂದರೆ ಸಾಂಕ್ರಾಮಿಕ ರೋಗಗಳ ಬಗ್ಗೆ ಉದಾಸೀನತೆ ಇರುತ್ತದೆಯೆಂದು ಅರ್ಥವಲ್ಲ, ಇಡೀ ದೇಶದಲ್ಲಿ ಕಾಲರಾ ಬಗ್ಗೆ ಜನರಿಗೆ ವಿಪರೀತ ಭಯ. ಅದು ಸಾಂಕ್ರಾಮಿಕ ಜಾಡ್ಯವಾಗಿ ಬಂದಾಗ ರೋಗ ಬಂದು ಸಾಯುವಷ್ಟೇ ಜನ ಬರೀ ಭಯದಿಂದ ಸಾಯುತ್ತಾರೆ.

ನಾನು ನನ್ನ ಆಳಿನ ಮನೆಗೆ ಕರೆದುಕೊಂಡು ಹೋದಾತ ಕಾಲರಾ ಅಂಟಿದ್ದುದರಿಂದ ಸಂಕಟಪಡುತ್ತಿದ್ದನೆಂಬುದರಲ್ಲಿ ಸಂಶಯ ಇರಲಿಲ್ಲ. ಆತ ಉಳಿಯಬೇಕಾದರೆ ಆತನಿಗೆ ಆತ್ಮವಿಶ್ವಾಸ ಮತ್ತು ನನ್ನ ವೈದ್ಯದಿಂದ ಮಾತ್ರ ಸಾಧ್ಯವಿತ್ತು. ವೈದ್ಯಕೀಯ ಸಹಾಯ ದೊರಕುತ್ತಿದ್ದ ಒಂದೇ ಒಂದು ಸ್ಥಳ ಹಲವು ಮೈಲಿಗಳ ದೂರದಲ್ಲಿತ್ತು, ಅಲ್ಲಿದ್ದ ವೈದ್ಯನೆಂದು ಕರೆಯಲ್ಪಡುತ್ತಿದ್ದವನು ಒಂದು ಮೃಗ. ಎಷ್ಟುಮಟ್ಟಿಗೆ ದಕ್ಷತೆ ಇಲ್ಲದವನಾಗಿದ್ದನೋ, ಅಷ್ಟೇ ಕಲ್ಲೆದೆಯವನೂ ಆಗಿದ್ದ. ಅವನ ಗೊಗ್ಗರು ಗಂಟಲನ್ನು ಒಂದಲ್ಲ ಒಂದು ದಿನ ನಾನೇ ಕತ್ತರಿಸಿಹಾಕಿ ಸಂತೋಷಪಡಬೇಕೆಂದು ನನಗೆ ಅನ್ನಿಸುತ್ತಿತ್ತು, ಹಾಗೆಯೇ ಮಾಡಿಯೂಬಿಡುತ್ತಿದ್ದೆನೋ ಏನೋ ಗೊತ್ತಿಲ್ಲ, ಅದಕ್ಕೆ ಅವಕಾಶವಾಗದಂತೆ, ನನ್ನ ಬಳಿ ನೌಕರಿ ಕಲಿಯಲು ಬಂದಿದ್ದ ಗುಮಾಸ್ತರೊಬ್ಬರು ಅಷ್ಟು ಜೊಂಜಾಟವಿಲ್ಲದ ಒಂದು ವಿಧಾನದಿಂದ ಅವನು ಓಡಿಹೋಗುವಂತೆ ಮಾಡಿಬಿಟ್ಟರು. ಕೆಲಸದವರಿಗೆ ಆ ವೈದ್ಯನನ್ನು ಕಂಡರೆ ಆಗುತ್ತಿರಲಿಲ್ಲ, ಆತನೂ ಆತನ ಪತ್ನಿಯೂ ಸರಿಯಾದ ನಡತೆಯವರಾಗಿರಲಿಲ್ಲ, ಗುಮಾಸ್ತರು ಉಪಾಯದಿಂದ ಇವರ ನಂಬಿಕೆಯನ್ನು ಗಳಿಸಿದರು. ಗುಮಾಸ್ತರು ಅವರ ಸಂಗಡ ಮಾತನಾಡುತ್ತಾ ಕುಳಿತಿದ್ದಾಗ, ತಾವು ಈಜಿಪ್ಟಿನಲ್ಲಿ ವಾಸಮಾಡುತ್ತಿದ್ದಾಗ ನಡೆಸುತ್ತಿದ್ದ ತಮ್ಮ ಕಾಮಕೇಳಿ, ಭೋಗ ಜೀವನ ಮೊಖಾಮೆಗೆ ಬಂದಾಗಿನಿಂದ ತಪ್ಪಿಹೋಗಿದೆಯೆಂದು ಹೇಳಿಕೊಂಡಿದ್ದರು. ಇದಾದ ಸ್ವಲ್ಪ ದಿವಸ ಗುಮಾಸ್ತರು ಯೋಚನೆ ಮಾಡಿ, ಒಂದು ಹಂಚಿಕೆ ಮಾಡಿದರು. ಒಂದು ದಿನ ಪ್ರಯಾಣಿಕರ ದೋಣಿ ಸಮೇರಿಯಾಘಾಟ್ ಬಿಡಬೇಕಾಗಿದ್ದ ವೇಳೆಗೆ ಸ್ವಲ್ಪ ಮುಂಚೆ ವೈದ್ಯ ಸಖತ್ ಕಾಯಿಲೆಯ ರೋಗಿಯನ್ನು ನೋಡುವ ಸಲುವಾಗಿ ಸಮೇರಿಯಾಘಾಟಗೆ ಹೋಗಬೇಕೆಂದೂ, ರಾತ್ರಿ ಮನೆಗೆ ಬರುವುದಿಲ್ಲವೆಂದೂ ಮನೆಯಲ್ಲಿ ಹೇಳಿ ಹೊರಟ. ಹೊರಡುವಾಗ ಬಹಳ ಠೀಕಾಗಿ ಬಟ್ಟೆಬರೆ ಧರಿಸಿಕೊಂಡಿದ್ದ. ಗುಮಾಸ್ತರು ಅವನಿಗೆ ಹೊರಗಡೆ ಕಾಯುತ್ತಿದ್ದು, ಗುಟ್ಟಾಗಿ ಒಂದು ಕೋಣೆಗೆ ಕರೆದೊಯ್ದರು. ಈ ಕೋಣೆ ಅನೇಕ ಕಟ್ಟಡಗಳ ಮಧ್ಯೆ ಇತ್ತು, ಇದರಲ್ಲಿ ಕೆಲವು ದಿವಸಗಳ ಹಿಂದೆ, ಒಂದು ರಾತ್ರಿ, ರೈಲ್ವೆ ಕಂಬಿಗಳನ್ನು ಬದಲಾಯಿಸುತ್ತಿದ್ದ ರೈಲ್ವೆ ನೌಕರನೊಬ್ಬ ಕೋಲ್‌ಗ್ಯಾಸ್ ಸೇವನೆಯಿಂದ ಮೃತನಾಗಿದ್ದ. ಅದಕ್ಕೆ ಒಂದೇ ಒಂದು ಗಟ್ಟಿಯಾದ ಬಾಗಿಲು ಹಾಗೂ ಬರೀ ಸಲಾಕೆಗಳ ಸಣ್ಣ ಕಿಟಕಿ ಇತ್ತು. ವೈದ್ಯ ಕೋಣೆಯೊಳಗೆ ಹೋಗಿ ಸ್ವಲ್ಪ ಕಾದ ನಂತರ, ಕೋಣೆಯ ಬಾಗಿಲು ತೆರೆಯಿತು. ಚೆನ್ನಾಗಿ ಬುರುಕಿ ಹಾಕಿಕೊಂಡಿದ್ದ ಒಬ್ಬ ವ್ಯಕ್ತಿ ಒಳಹೊಕ್ಕಮೇಲೆ, ಹೊರಗಿನಿಂದ ಅದಕ್ಕೆ ಬಲವಾದ ಬೀಗ ಹಾಕಲಾಯಿತು.

ನಾನು ಆ ರಾತ್ರಿ ಗೂಡ್ಸ್ ಷೆಡ್ ಮೂಲಕ ಹೊತ್ತಾದ ಮೇಲೆ ಹಿಂದಿರುಗುತ್ತಿದ್ದಾಗ, ಮೇಲೆ ಹೇಳಿದ ಗುಮಾಸ್ತರಿಗೂ ಅವರು ಕೆಲಸದಿಂದ ಬಿಡುಗಡೆ ಮಾಡಬೇಕಾಗಿದ್ದ ಅವರ ಸ್ನೇಹಿತರಿಗೂ ನಡೆಯುತ್ತಿದ್ದ ಸ್ವಾರಸ್ಯ ಸಂಭಾಷಣೆ ಹೊಂಚಿ ಕೇಳಿದೆ.

ಮಾರನೆಯ ಬೆಳಿಗ್ಗೆ ಕೆಲಸಕ್ಕೆ ಹೋಗುತ್ತಿದ್ದಾಗ ವೈದ್ಯ ರಾತ್ರಿ ಹೋಗಿದ್ದ ಕೋಣೆಯ ಬಳಿ ಅನೇಕ ಜನ ಸೇರಿದ್ದರು. ಕೃತ್ರಿಮವೇನೂ ಅರಿಯದ ಒಬ್ಬಾತ, ಒಳಗೆ ಯಾರೋ ಇರುವುದಾಗಿಯೂ ಹೊರಗೆ ಬೀಗ ಹಾಕಿದೆಯೆಂದೂ ನನಗೆ ಹೇಳಿದರು. ಸುತ್ತಿಗೆ ತಂದು ಬೀಗ ಒಡೆಯಲು ಆತನಿಗೆ ಹೇಳಿ ಅವಸರದಿಂದ ನನ್ನ ಕೆಲಸದ ಕಡೆಗೆ ಗಮನ ಕೊಡಲು ಹೊರಟುಹೋದೆ. ಬೀಗ ಒಡೆದು ತೆಗೆದಾಗ ಒಳಗಿದ್ದ ವೈದ್ಯ ಮತ್ತು ಆತನ ಹೆಂಡತಿಯ ಶೀರಾ ಪೇಚಿನ ಪರಿಸ್ಥಿತಿಯನ್ನು - ಅವರಿಗಾದ ಶಾಸ್ತಿ ಎಷ್ಟೇ ತಕ್ಕುದಾಗಿದ್ದರೂ - ನೋಡಲು ನನಗೆ ಮನಸ್ಸಾಗಲಿಲ್ಲ. ನನ್ನ ಆ ದಿನದ ದಿನಚರಿಯಲ್ಲಿ ಹೀಗೆ ಬರೆದಿಟ್ಟೆ: 1) ವೈದ್ಯರು ಪತ್ನೀ ಸಮೇತ ಖಾಸಗಿ ಕೆಲಸದ ಮೇಲೆ ಹೊರ
ಹೋದರು; 2) ಶಿವದೇವ್ - ಕೆಲಸ ಕಲಿಯಲು ಬಂದ
ಗುಮಾಸ್ತ-ಕೆಲಸವನ್ನು ಖಾಲಿ ಗುಮಾಸ್ತನಾಗಿ ತಿಂಗಳ
ಇಪ್ಪತ್ತೈದು ರೂಪಾಯಿಗಳ ವೇತನದ ಮೇಲೆ ಕಾಯ
ಮಾಡಲಾಯಿತು; ಮತ್ತು 3) ಎಂಜಿನ್ ಹಾದುಹೋದ
ಜಖಂ ಆದವುಗಳೆನ್ನಲಾದ ಬೀಗ, ಪಾಯಿಂಟುಗಳ
ಬದಲಾಯಿಸಲಾಯಿತು. ವೈದ್ಯವೃತ್ತಿ ಅತಿ ಘನವಾ
ಗಣ್ಯವೃತ್ತಿ, ಆ ವೃತ್ತಿಗೆ ಅವಮಾನಗೊಳಿಸಿದ್ದ ಮನುಷ್ಯನ
ಮೊಖಾಮೆಘಾಟಿನ ಜನಗಳು ನೋಡಿದ್ದು ಅದೇ ಕೊನೆ
ಸಲ.

ನಾನು ಮೂರು ಜನ ಕಾಲರಾ ರೋಗಿಗಳನ್ನು
ನೋಡುತ್ತಿದ್ದುದರಿಂದ ಈ ಬಡಕಲು ಮನುಷ್ಯನ ಕಡೆ
ಹೆಚ್ಚು ಗಮನ ಕೊಟ್ಟು ಶುಶ್ರೂಷೆ ಮಾಡ
ಅವಕಾಶವಿರಲಿಲ್ಲ, ನನ್ನ ಆಳುಗಳಿಂದ ಹೆಚ್ಚು ಸಹಾ
ನಿರೀಕ್ಷಿಸುವಂತಿರಲಿಲ್ಲ, ಕಾರಣ ಅವರೀರ್ವರ ನಡುವ
ಜಾತಿಭೇದ, ಅಲ್ಲದೆ ರೋಗದ ಸೋಂಕು ಹರಡು
ಸಾಧ್ಯತೆ. ಅದಕ್ಕೆ ಅವರನ್ನು ಗುರಿಪಡಿಸುವುದು ಸರಿಯಾ
ದಾಗಿರಲಿಲ್ಲ. ನನ್ನ ವೈದ್ಯದ ಬಗ್ಗೆ ಆತನಿಗೆ ಭರವ
ಉಂಟುಮಾಡಿದರೆ ಸಾಕಿತ್ತು ಇನ್ನೇನೂ ಮಾಡಬೇಕಾದ್ದಿರಲಿ
ಆತನನ್ನು ನಾನು ಕರೆತಂದುದು ಆತ ತೀರಿಹೋರ
ಅಂತ್ಯಕ್ರಿಯೆ ಮಾಡುವ ಸಲುವಾಗಿ ಅಲ್ಲವೆಂದ
ಗುಣಪಡಿಸುವುದಕ್ಕಾಗಿ ಕರೆ ತಂದಿರುವುದರಿಂದ ಆ
ಸಹಕಾರ ಬಹಳ ಅಗತ್ಯವೆಂದೂ ಆತನಿಗೆ ಸ್ಪಷ್ಟವಾ
ತಿಳಿಸಿದೆ. ಆತನ ಮತ್ತು ನನ್ನ ಪ್ರಯತ್ನ ವಿಫಲವಾ
ಮೊದಲನೆಯ ರಾತ್ರಿಯೇ ಆತ ತೀರಿಹೋಗಬಹುದೆಂ
ಹೆದರಿದ್ದ. ಆದರೆ ಬೆಳಿಗ್ಗೆ ಹೊತ್ತಿಗೆ ಆತನ ಸ್ಥಿತಿ ಸ್ವ
ಸುಧಾರಿಸಿತು ಹಾಗೂ ಕ್ರಮೇಣ ಉತ್ತಮಗೊಳ್ಳ
ಹೋಯಿತು. ನಿಶ್ಶಕ್ತನಾಗಿದ್ದುದರಿಂದ ಸ್ವಲ್ಪ ಬಲ ಬರುವ
ಮಾಡಬೇಕಾಗಿದ್ದುದು ಅವಶ್ಯಕವಾಗಿದ್ದಿತು.
ಕಾಯಿಲೆಗಳಿಗಿಂತಲೂ ಕಾಲರಾದಿಂದ ಮನುಷ್ಯ ವಿಪರೀ
ಬಲಹೀನನಾಗುತ್ತಾನೆ. ಒಂದು ವಾರದ ನಂತರ
ನನಗೆ ತನ್ನ ಕಥೆ ಹೇಳಲು ಶಕ್ತನಾದ.

ಅವನೊಬ್ಬ ಲಾಲಾ, ಒಬ್ಬ ವ್ಯಾಪಾರಿ. ಒಂದು ಕಾಲದ
ಉಚ್ಛ್ರಾಯ ಸ್ಥಿತಿಯಲ್ಲಿದ್ದಾತ. ಅವನು ಮಾಡುತ್ತಿದ್ದು
ದವಸಧಾನ್ಯಗಳ ವ್ಯಾಪಾರ. ತನಗೆ ಯಾವ ರೀತಿಯಲ್ಲಿ
ಪರಿಚಯವೇ ಇಲ್ಲದ ಒಬ್ಬ ಮನುಷ್ಯನ
ಪಾಲುದಾರನನ್ನಾಗಿ ಸೇರಿಸಿಕೊಂಡದ್ದೇ ಈತ ಮಾಡಿ
ತಪ್ಪು ಕೆಲಸ. ಆತ ಸೇರಿಕೊಂಡ ಹಲವಾರು ವ
ವ್ಯಾಪಾರ ಚೆನ್ನಾಗಿಯೇ ನಡೆಯಿತು. ಎಲ್ಲವೂ ಸರಿಯಾ
ಇತ್ತು. ಒಂದು ಸಲ ಲಾಲಾ ಬಹಳ ದೂರ
ಪ್ರಯಾಣಮಾಡಿ ಹಿಂದಿರುಗಿದಾಗ ಆತನ ಸಂಗಡಿಗ ಇರ
ಇಲ್ಲ, ಅಂಗಡಿ ಖಾಲಿ ಆಗಿತ್ತು. ಆತನ ಬಳಿಯಿದ್ದ
ಸ್ವಲ್ಪ ಹಣ ವೈಯಕ್ತಿಕ ಸಾಲ ತೀರಿಸಲು ಸಾಕಾಯಿ
ಸಾಲದಿಂದ ಪೂರ್ತಿ ಬಿಡುಗಡೆ ಹೊಂದಲಿಲ್ಲ. ಬೇ
ಕೆಲಸ ಹುಡುಕಬೇಕಾಗಿ ಬಂತು. ತಾನು ಒಳ್ಳೆ
ಸ್ಥಿತಿಯಲ್ಲಿದ್ದಾಗ ವ್ಯಾಪಾರವಹಿವಾಟುಗಳ ಸಂಪ
ಹೊಂದಿದ್ದ ಇನ್ನೊಬ್ಬ ವರ್ತಕನ ಬಳಿ ಕೆಲಸ ಸಿಕ್ಕಿ
ಹತ್ತು ವರ್ಷಗಳಿಂದ ತಿಂಗಳಿಗೆ ಏಳು ರೂಪಾಯಿ ವೇತ
ಮೇಲೆ ಕೆಲಸ ಮಾಡುತ್ತಿದ್ದ. ಅದು ಅವನ ಮತ್ತು ಅ
ಮಗ ಇವರುಗಳ ಜೀವನಕ್ಕೆ ಸಾಕಾಗಿತ್ತು. ಪಾಲುಗಾ
ಈತನಿಗೆ ಮೋಸಮಾಡಿ ಹೊರಟುಹೋದ ಕೂಡ
ಲಾಲಾನ ಪತ್ನಿ ತೀರಿಕೊಂಡಳು. ಈಗ ತನ್ನ ಯಜಮಾ
ಕೆಲಸದ ಸಲುವಾಗಿ ಮುಜಫರ್‌ಪುರದಿಂದ ಗಯ
ಪ್ರಯಾಣ ಮಾಡುತ್ತಿದ್ದ. ರೈಲಿನಲ್ಲಿ ಕಾಲರಾ ಅಂಟಿ
ಹಡಗು ಹತ್ತಿದ ಮೇಲೆ ಅದು ತೀವ್ರವಾಯಿತು. ಪ
ಗಂಗಾನದಿಯ ದಡದ ಮೇಲೆ ಸಾಯಲು ತೆವಳಿಕೊಂ
ಬಂದಿದ್ದಾಗ ನನ್ನ-ಆತನ ಭೇಟಿ ಆಗಿತ್ತು.

ಲಾಲಾಜಿ - ಆತನನ್ನು ಬೇರೆ ಹೆಸರಿನಿಂದ ನಾ
ಅರಿತಿರಲಿಲ್ಲ- ನನ್ನ ಸಂಗಡ ಸುಮಾರು ಒಂದು ತಿಂ
ಪರ್ಯಂತ ಇದ್ದರು. ಒಂದು ದಿವಸ ಗಯೆಗೆ ಪ್ರಯಾ
ಮಾಡಲು ಅಪ್ಪಣೆ ಕೇಳಿದರು. ನಾನು ಪ್ರತಿನಿತ್ಯ ಕೆಲ
ಹೊರಡುವಾಗ ನನ್ನ ಸಂಗಡ ಸ್ವಲ್ಪ ದೂರ ನಡೆದುಬರುವ
ಶಕ್ತಿ ಆತನಿಗೆ ಬಂದಿತ್ತು. ಒಂದು ದಿನ ಈ ರ
ಹೋಗುತ್ತಿದ್ದಾಗಲೇ ಆತ ಹೊರಡಲು ಅಪ್ಪಣೆ ಕೇಳಿ
ಲಾಲಾಜಿ ವಾಪಸ್ಸಾಗುವ ಹೊತ್ತಿಗೆ ವರ್ತಕ ಬೇರೆಯವ
ಕೆಲಸಕ್ಕೆ ನೇಮಿಸಿಕೊಂಡಿದ್ದರೆ ಲಾಲಾಜಿ ಏನು ಮಾಡ

ಅವರನ್ನು ಕೇಳಿದೆ. ಬೇರೆ ಕೆಲಸ ಹುಡುಕಬೇಕಾಗು ಮು ಉತ್ತರಿಸಿದರು. ಇನ್ನಾರದಾದರೂ ಸಹಾಯ ು ಪುನಃ ವ್ಯಾಪಾರಿಯಾಗುವ ಪ್ರಯತ್ನ ಏಕೆ ಭಿಸಬಾರದೆಂದು ನಾನು ಆತನನ್ನು ಕೇಳಿದೆ. 'ಪುನಃ ರ ಮಾಡಿ ನನ್ನ ಮಗನನ್ನು ಓದಿಸಬೇಕೆಂಬ ಆಸೆ ಹಗಲೂರಾತ್ರಿ ಇದೆ. ಒತ್ತೆ ಇಡಲು ಆಸ್ತಿ ಏನೂ ಏಳು ರೂಪಾಯಿ ವೇತನಗಳಿಸುವ ಸೇವಕನಾದ ವ್ಯಾಪಾರ ಆರಂಭಿಸಲು ಬೇಕಾಗುವ ಐನೂರು ಾಯಿಗಳನ್ನು ಕೊಡುವವರು ಇಡೀ ಪ್ರಪಂಚದಲ್ಲಿ ೂ ಇಲ್ಲ?' ಎಂದು ಅವರು ಹೇಳಿದರು.

ಲು ಗಯೆಗೆ ರಾತ್ರಿ ಎಂಟು ಗಂಟೆಗೆ ಹೊರಡುತ್ತಿತ್ತು. ಮುಂಚೆ ಬಂಗಲೆಗೆ ನಾನು ಬಂದೆ. ಲಾಲಾಜಿ ಒಗೆದ ಬಟ್ಟೆ ಹಾಕಿಕೊಂಡು, ತಾನು ಇಲ್ಲಿಗೆ ುಗ ತಂದಿದ್ದ ಗಂಟಗಿಂತಲೂ ಸ್ವಲ್ಪ ದೊಡ್ಡ ಗಂಟನ್ನು ಲ್ಲಿ ಹಿಡಿದು ನನ್ನನ್ನು ಬೀಳ್ಕೊಡಲು ಸನ್ನದ್ಧರಾಗಿ ದ್ದರು. ಗಯೆಗೆ ಒಂದು ರೈಲ್ವೆ ಟಿಕೇಟನ್ನೂ, ಐದುನೂರು ಾಯಿಗಳ ನೋಟುಗಳನ್ನೂ ನಾನು ಆತನ ಕೈಯಲ್ಲಿ ಗ, ಇದ್ದಿಲಿನಿಂದ ಕಪ್ಪಾಗಿದ್ದ ಮುಖದ ಬುಧೂ ಹನಾದಂತೆ ಈತನೂ ಘೂಕನಾದನು. ಐದು ಷಗಳಲ್ಲಿ ರೈಲು ಹೊರಡುತ್ತದೆಂಬ ಎಚ್ಚರಿಕೆಯ ಗಂಟೆ ಟಯುವವರೆಗೆ, ಕೈಲಿದ್ದ ನೋಟುಗಳನ್ನು ಒಂದು ಮನ್ನನ್ನು ಒಂದು ಸಲ ಸುಮ್ಮನೆ ನೋಡುತ್ತಾ ನಿಂತರು. ಯನ್ನು ನನ್ನ ಕಾಲುಗಳ ಮೇಲಿಟ್ಟು, 'ಇನ್ನು ಒಂದು ದಲ್ಲಿ ನಿಮ್ಮ ಗುಲಾಮ ನಿಮ್ಮ ಋಣ ರುಗಿಸುತ್ತಾನೆ?' ಎಂದು ಮಾತ್ರ ಹೇಳಿದರು.

ನಾನು ಗಳಿಸಿದ್ದ ಹಣದ ಭಾಗ ತೆಗೆದುಕೊಂಡು ಾಜಿ ನನ್ನನ್ನು ಬಿಟ್ಟು ಹೊರಟರು. ಆತನನ್ನು ಪುನಃ ತುತ್ತೇನೆಂಬುದರ ಬಗ್ಗೆ ನಾನು ಸಂಶಯಪಡಲಿಲ್ಲ. ಶದೇಶದ ಬಡಜನರು ಯಾರೇ ಆಗಲಿ, ಅವರಿಗೆ ರಿಸಿರಬಹುದಾದ ಉಪಕಾರವನ್ನು ಎಂದಿಗೂ ಯುವುದಿಲ್ಲ. ನಾನು ಹೊಂದಿದ್ದ ಈ ಅಭಿಪ್ರಾಯವೇ ಕಾರಣ. ಆದರೂ ಲಾಲಾಜಿ ಮಾಡಿದ್ದ ವಾಗ್ದಾನದಂತೆ ಯುವುದು ಆತನ ಶಕ್ತಿಗೆ ಮೀರಿದ್ದೆಂದು ನನಗೆ ಅನ್ನಿಸಿತ್ತು. ಅಂದುಕೊಂಡು ನಾನು ತಪ್ಪು ಮಾಡಿದ್ದೆ. ಏಕೆಂದರೆ, ು ಸಾಯಂಕಾಲ ಎಂದಿಗಿಂತ ತಡವಾಗಿ ಮನೆಗೆ ಾಗ, ಅಚ್ಚಬೆಳ್ಳಗಿನ ಬಟ್ಟೆಗಳನ್ನು ಹಾಕಿಕೊಂಡಿದ್ದ ಬ್ಬರು ನನಗಾಗಿ ವರಾಂಡದಲ್ಲಿ ಕಾದಿದ್ದರು. ಅವರ ಇದ್ದ ಕೋಣೆಯಿಂದ ಬೆಳಕು ನನ್ನ ಕಣ್ಣಿನ ಮೇಲೆ ುತ್ತಿತ್ತಾಗಿ ಅವರು ಮಾತನ್ನಾರಂಭಿಸುವವರೆಗೂ ಅವರನ್ನು ಗುರ್ತಿಸಲಾರದವನಾದೆ. ತನಗೆ ತಾನೇ ನಿಗದಿ ಕೊಂಡಿದ್ದ ಕಾಲಾವಧಿಗೆ ಮುಂಚೆಯೇ ಲಾಲಾಜಿ ದ್ದರು. ನನ್ನ ಕುರ್ಚಿಯ ಬಳಿಯೇ ನೆಲದ ಮೇಲೆ ತು, ತನ್ನ ವ್ಯಾಪಾರ ವಹಿವಾಟು ಹಾಗೂ ಅದರಲ್ಲಿ ಪಡೆದ ಯಶಸ್ಸು, ಇವುಗಳ ಬಗ್ಗೆ ವಿಷಯಗಳನ್ನೆಲ್ಲಾ ದರು. ಆರಂಭದಲ್ಲಿ ಹಲವಾರು ಚೀಲಗಳ ಧಾನ್ಯ ಡು, ಚೀಲವೊಂದಕ್ಕೆ ನಾಲ್ಕಾಣೆ ಲಾಭ ಬಂದರೆ ಪಡೆಯುತ್ತಿದ್ದರು. ಕ್ರಮೇಣ ವ್ಯಾಪಾರ ಕುದರಿತು. ವತ್ತು ಟನ್ ತೂಕದ ಸರಕು ವ್ಯಾಪಾರ ಮಾಡಿ ಒಂದಕ್ಕೆ ಮೂರು ರೂಪಾಯಿ ಲಾಭಗಳಿಸಿದರು. ಒಳ್ಳೆ ಪಾಠ ಶಾಲೆಗೆ ಸೇರಿದ್ದ. ಹೆಂಡತಿಯನ್ನು ಾಡುವ ಶಕ್ತಿ ಬಂದಿದ್ದರಿಂದ ಪಾಟ್ನಾದ ಭಾರೀ ಾರಿಯೊಬ್ಬರ ಮಗಳನ್ನು ಮದುವೆಯಾದರು. ಹನ್ನೆರಡು ಳುಗಳಲ್ಲಿ ಆತ ಇಷ್ಟೆಲ್ಲಾ ಸಾಧಿಸಿದ್ದರು. ರೈಲು ರಡುವ ಕಾಲ ಸಮೀಪಿಸಿದಾಗ ನನ್ನ ಮೊಳಕಾಲ ಲೆ ಐನೂರು ರೂಪಾಯಿಗಳನ್ನಿಟ್ಟರು. ನಂತರ ಜೇಬಿನಿಂದ ು ಚೀಲ ಹೊರತೆಗೆದು ಅದನ್ನು ನನಗೆ ತೋರಿಸಿ, ು ಶೇಕಡ ಇಪ್ಪತ್ತೈದರ ಲೆಕ್ಕ ಹಾಕಿದ ಬಡ್ಡಿ. ನೀವು ಟ್ಟಿದ್ದ ಸಾಲಕ್ಕೆ ನಾನು ಇದನ್ನ ಕೊಡಲೇಬೇಕು?' ು ಹೇಳಿದರು. 'ಸ್ನೇಹಿತರಿಂದ ಬಡ್ಡಿ ತೆಗೆದುಕೊಳ್ಳುವುದು ಸಂಪ್ರದಾಯವಲ್ಲ?' ಎಂದು ನಾನು ಅವರಿಗೆ ಹೇಳಿ ಗ, ನನ್ನನ್ನು ಭೇಟಿ ಮಾಡಿದಾಗ ಅವರಿಗೆ ಆದ ೋಪದಲ್ಲಿ ಅರ್ಧಭಾಗ ಇಳಿದುಹೊಯಿತು.

ನನ್ನನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, 'ನಾನು ಸಂಗಡ ಇದ್ದ ಒಂದು ತಿಂಗಳಲ್ಲಿ ನಿಮ್ಮ ಆಳುಗಳು, ಸದವರು, ಇವರ ಸಂಗಡ ಮಾತನಾಡುತ್ತಿದ್ದಾಗ ನೀವು ದು ಚಪಾತಿ, ಬೇಯಿಸಿದ ಸ್ವಲ್ಪ ಬೇಳೆಕಾಳು ತಿಂದಿರುತ್ತಿದ್ದ ವೊಂದಿತ್ತೆಂದು ತಿಳಿದು ಬಂತು. ಪರಮೇಶ್ವರ ಪುನಃ ದಿಗೂ ನಿಮಗೆ ಆ ರೀತಿ ಮಾಡದಿರಲಿ, ಪುನಃ ಥಹ ಕಾಲ ಬಂದರೆ, ಈ ಗುಲಾಮ ತನ್ನಲ್ಲಿ ಇರುವದ ನಿಮ್ಮ ಪಾದದಡಿ ಇಡಲು ಸಿದ್ಧನಿದ್ದಾನೆ?' ಎಂದು ಳಿದರು.

ಇದಾದ ಹನ್ನೊಂದು ವರ್ಷಗಳ ನಂತರ ನಾನು ಬಾಪು ಬಿಡುವವರೆಗೂ ಪ್ರತಿವರ್ಷವೂ ಲಾಲಾಜಿ ತೋಟದಲ್ಲಿ ಬೆಳೆದಿದ್ದ ಆರಿಸಿದ ದೊಡ್ಡ ಮಾವಿನಹಣ್ಣು ಬುಟ್ಟಿಯಲ್ಲಿ ನನಗೆ ಕಳುಹಿಸುತ್ತಿದ್ದರು. ಕಾರಣ ವ್ಯಾಪಾರಿಯಾಗಬೇಕೆಂಬ ಆತನ ಆಸೆ ಫಲಿಸಿತ್ತು. ಸ್ನೇಹಿತ ದರೋಡೆ ಮಾಡಿ ಹೊರಟುಹೋದಾಗ ಾಗಿದ್ದ ತಮ್ಮ ಸ್ವಂತ ಮನೆಗೇ ಹಿಂದಿರುಗಲು ಸಾಗಿತ್ತು.

❧

▶2 ಕೇಸರೀಕರಣ

ಪರಸ್ಪರ ಪೂರಕವಾಗಿ ಒಟ್ಟು ಸಂಸ್ಕೃತಿಯಾಗಿ ರೂಪುಗೊಳ್ಳಲು ಸೌಹಾರ್ದ ಕೊಡುಕೊಳೆಯನ್ನು ನಡೆಸಿತು ಎಂದು ಅರ್ಥ ಮಾಡಿಕೊಳ್ಳಲು ಅನುವು ಮಾಡಿಕೊಡಬೇಕು ಎಂಬುದು ಅದರ ಆಶಯ ವಾಗಿತ್ತು. ಹಾಗೆಯೇ ಈ ಬಗೆಯಲ್ಲಿ ವಿಕೇಂದ್ರೀಕೃತವಾಗಿ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ಹೊತ್ತಿನಲ್ಲೇ ಅತ್ಯಂತ ದಮನಿತರಾದ ಜನಗಳ ಇತಿಹಾಸದತ್ತ ಹೆಚ್ಚು ಒತ್ತಿರಬೇಕೆಂಬುದು ನ್ಯಾಷನಲ್ ಫ್ರೇಂವರ್ಕ್ ಮತ್ತು ರಾಜ್ಯ ಡಿಎಸ್‌ಇಆರ್‌ಟಿ ಸಿಲಬಸ್ ನಿರ್ದೇಶನಗಳು ಹೇಳುತ್ತವೆ.



ಆದರೆ ಬಿಜೆಪಿ ಸರ್ಕಾರ ಈ ಸಂದರ್ಭವನ್ನೂ ಬಳಸಿಕೊಂಡು ಪ್ರದೇಶವಾರು ಇತಿಹಾಸ ಚಿತ್ರಣದಲ್ಲಿ ಕೆಲವು ಚಿತ್ರಗಳನ್ನು ಬಿಟ್ಟು ಕೆಲವಕ್ಕೆ ಒತ್ತು ಕೊಟ್ಟು ಒಟ್ಟಾರೆಯಾಗಿ ಹಲವು ಸಂಸ್ಕೃತಿಗಳ, ಧರ್ಮಗಳ ನೆಲೆವೀಡಾದ ಕರ್ನಾಟಕವನ್ನು ಪ್ರಧಾನವಾಗಿ ಹಿಂದೂ ಬ್ರಾಹ್ಮಣ ಸಂಸ್ಕೃತಿಯ ಆಡೊಂಬಲವಾಗಿ ಚಿತ್ರಿಸಿದೆ. ವೈದಿಕ ಹಿಂದೂ ಧರ್ಮಗಳ ವಿರುದ್ಧ ಬಂಡಾಯವೆದ್ದ ಜೈನ ಮತ್ತು ಬೌದ್ಧ ಮತಗಳನ್ನು ಹಿಂದೂ ಧರ್ಮದ ಶಾಖೆಯೆಂಬಂತೆ ಚಿತ್ರಿಸುತ್ತದೆ. ಹಿಂದೂ ಅರಸರು ಮಾಡಿದ-ಮಾಡದ ಎಲ್ಲಾ ಕೆಲಸಗಳನ್ನು ಜನಹಿತ ಕೆಲಸವೆಂದು ಚಿತ್ರಿಸುವ ಇತಿಹಾಸದ ಪಠ್ಯವು ಟಿಪ್ಪು ಹೈದರ್‌ರಂತವರು ತಂದ ಕ್ರಾಂತಿಕಾರಕ ಸಾಮಾಜಿಕ ಸುಧಾರಣೆಗಳ ಬಗ್ಗೆ ಚಕಾರವೆತ್ತುವುದಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಇತಿಹಾಸ ಕಲಿಯುವ ಉದ್ದೇಶವೇ ಮಕ್ಕಳಲ್ಲಿ ತಮ್ಮ ಚರಿತ್ರೆಯ ಬಗ್ಗೆ ಹೆಮ್ಮೆ ಉಂಟುಮಾಡುವುದು ಎಂಬ ಉದ್ದೇಶದ ನೆರಳಲ್ಲಿ - ಆ ಹೆಮ್ಮೆಯೆಂದರೆ ಹಿಂದೂ ಹೆಮ್ಮೆಯೆಂಬ ರೀತಿ - ಇಡೀ ಈ ಭಾಗದ ಇತಿಹಾಸ ಚಿತ್ರಿತವಾಗಿದೆ. ಅದರಲ್ಲೂ ಹಿಂದೂ ಎಂದು ಉಲ್ಲೇಖವಾದಾಗಲೂ ಅದರ ವಿಶಾಲ ಚೌಕಟ್ಟಿನೊಳಗೆ ಬರುವ ಆದರೆ ವೈದಿಕ ಕರ್ಮಠತನದ ವಿರುದ್ಧ ಬಂಡಾಯವೆದ್ದ ಅವಧೂತ ಸಂಪ್ರದಾಯಗಳ ಅಥವಾ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಪೊರೆದ ಸೂಫಿ ಸಂತರ ಉಲ್ಲೇಖವೇ ಈ ಭಾಗಗಳಲ್ಲಿ ಮಾಯವಾಗಿದೆ.

ಇದು ಎಲ್ಲಾ ವಿಭಾಗಗಳ ಇತಿಹಾಸ ಪರಿಚಯದಲ್ಲೂ ಢಾಳಾಗಿ ಇದ್ದರೂ ಅತ್ಯಂತ ಪ್ರಮುಖವಾಗಿ ಎದ್ದು ಕಾಣುವುದು ಗುಲ್ಬರ್ಗಾ ವಿಭಾಗದ ಇತಿಹಾಸ ಪರಿಚಯದಲ್ಲಿ. ವಾಸ್ತವವಾಗಿ ಮೊಘಲರ ಕಾಲದ ಭಾರತದ ಅಧ್ಯಯನ ಮಾಡುವಾಗ ಹಿಂದೂ ರಾಷ್ಟ್ರೀಯವಾದಿ ಇತಿಹಾಸಕಾರರು ತೋರುವ ಎಲ್ಲಾ ಮತಾಂಧ ದೃಷ್ಟಿಕೋನವನ್ನೂ ಹೈದರಾಬಾದ್-ತೆಲಂಗಾಣದ ಇತಿಹಾಸ ರಚನೆಯಲ್ಲೂ ತೋರುತ್ತಾ ಬಂದಿದ್ದಾರೆ. ಅದರಲ್ಲಿ ಸೂರ್ಯನಾಥ್ ಕಾಮತ್, ಚಿದಾನಂದ ಮೂರ್ತಿ ಪ್ರಣೀತ ಇತಿಹಾಸ ದೃಷ್ಟಿಕೋನ ತುಂಬಾ ಪ್ರಭಾವ ಬೀರುತ್ತಾ ಬಂದಿದೆ. ಈ ದೃಷ್ಟಿಕೋನದ ಅಂಥತ್ವ ಎರಡು ಬಗೆಯಲ್ಲಿದೆ. ಇದು ಹಿಂದೂಯೇತರ ಅರಸರು ಮಾಡಿದ ಯಾವುದೇ ಜನೋಪಯೋಗಿ ಕೆಲಸಗಳನ್ನು ಗುರುತಿಸುವುದಿಲ್ಲ. ಹಾಗೆಯೇ ಅವರು ಇಲ್ಲಿಯೇ ಹುಟ್ಟಿ ಬೆಳೆದಿದ್ದರೂ ಭಾರತ ರಾಷ್ಟ್ರದ ಆಕ್ರಮಣಕಾರರನ್ನಾಗಿಯೇ ಚಿತ್ರಿಸುತ್ತದೆ. ಎಲ್ಲಕ್ಕಿಂತ ಇತಿಹಾಸವನ್ನು ಹಿಂದೂ, ಮುಸ್ಲಿಮ್ ಮತ್ತು ಬ್ರಿಟಿಷ್ ಎಂದು ವಿಭಜನೆ ಮಾಡಿ ನೋಡುವುದರಿಂದ ಧರ್ಮದ ತರ್ಕದ ಆಚೆ ಇತಿಹಾಸದ ಗತಿ ಅವರ ಕಣ್ಣಿಗೆ ಬೀಳುವುದೇ ಇಲ್ಲ. ಎರಡನೆಯದಾಗಿ ಅರಸರು ಮತ್ತು ಪ್ರಜೆಗಳ ನಡೆಯುವ ಸಂಘರ್ಷವನ್ನೂ ಅವರು ಎರಡು ಧರ್ಮೀಯರ ಮಧ್ಯೆ ನಡೆಯುವ ಸಂಘರ್ಷವನ್ನಾಗಿಯೇ ನೋಡಿ ಇತಿಹಾಸಕ್ಕೆ ಧರ್ಮದ ರಕ್ತ ಬಳಿಯುತ್ತಾರೆ.

❧

ಪುಸ್ತಕ ಪರಿಚಯ



ಚಂದ್ರಶೇಖರ್ ಐಜೂರ್

ದೌರ್ಜನ್ಯವನ್ನು ಹತ್ತಿಕ್ಕಲಿಕ್ಕೊಂದು ಮಸೂದೆ

ಮೊನ್ನೆ ಸುಪ್ರೀಂ ಕೋರ್ಟ್ ಗುಜರಾತ್ ಹತ್ಯಾಕಾಂಡಕ್ಕೆ ಸಂಬಂಧಿಸಿದ್ದಂತೆ ನರೇಂದ್ರ ಮೋದಿಗೆ ಕ್ಲೀನ್ ಚಿಟ್ ನೀಡಿದಾಗ ದೇವನೂರ ಮಹಾದೇವರ ಮಾತೊಂದು ನೆನಪಾಯಿತು: "ಕೊಲೆ ಅತ್ಯಾಚಾರ ಲೂಟಿಗಳನ್ನು ದೇಶಪ್ರೇಮದ ಹೆಸರಿನಲ್ಲಿ ನಡೆಸಿ ಈ ದೊಡ್ಡ ದೇಶದಲ್ಲಿ ಬಚಾವಾಗಬಹುದು." ದಲಿತರು ಮತ್ತು ಮುಸ್ಲಿಮರನ್ನು ಗುರಿಯಾಗಿಸಿಕೊಂಡು ನಡೆಸುವ ಅನೇಕ ಕ್ರೌರ್ಯಗಳಿಗೆ ಈ ದೇಶದಲ್ಲಿ ಶಿಕ್ಷೆಯಾಗುವುದಿಲ್ಲ. ದಲಿತರನ್ನು ಅವಮಾನಿಸುವ, ಮುಸ್ಲಿಮರನ್ನು ಅನುಮಾನಿಸುವ ಕಣ್ಣುಗಳನ್ನು ಈ ಭಗ್ನ ಸಮಾಜ ಹೊಂದಿರುವುದರಿಂದಲೇ ಇಲ್ಲಿ ಕೋಮುಹಿಂಸೆ ಎಂಬುದು ನಿರಾತಂಕವಾಗಿ ಜರುಗುತ್ತಲೆ ಇದೆ. ಕಳೆದ ವರ್ಷ ಕೇಂದ್ರ ಸರ್ಕಾರ **Prevention of Communal and Targeted Violence (Access to Justice and Reparations) Bill-2011'** ಅನ್ನು ಜಾರಿಮಾಡಲು ಹೊರಟಾಗ ತಮ್ಮ ಅಸ್ತಿತ್ವದ ಬುಡಕ್ಕೆ ಬೆಂಕಿ ಬಿದ್ದಂತೆ ಬಲಪಂಥೀಯ ವಲಯದ ಸೈತಾನರ ಕಾರ್ಖಾನೆಗಳಲ್ಲಿ ತಯಾರಾಗುವ ನೀಚರು ಬೊಬ್ಬೆ ಹಾಕಿದರು.

ಲೇಖಕ ಫಕೀರ್ ಮುಹಮ್ಮದ್ ಕಟ್ಪಾಡಿ ಕೋಮುಹಿಂಸೆ ನಿಯಂತ್ರಣಾ ಮಸೂದೆಯ ಬಹುಮುಖ್ಯ ಭಾಗಗಳನ್ನು ಕನ್ನಡಕ್ಕೆ ತರುವ ಮೂಲಕ ಇಂಥದೊಂದು ಅಧಿನಿಯಮದ ಅವಶ್ಯಕತೆಯನ್ನು ಸೂಚಿಸುವ ಅನೇಕ ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನವನ್ನು 'ಕೋಮುಹಿಂಸೆ ನಿಯಂತ್ರಣಾ ಮಸೂದೆ-2011' ಕೃತಿಯಲ್ಲಿ ಮಾಡಿದ್ದಾರೆ. ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಸ್ಫೋಟಗೊಂಡ ಕೋಮುಹಿಂಸೆಯ ಬೀಜಗಳು; ಧರ್ಮ, ಜಾತಿ ಮತ್ತು ದೇಶಪ್ರೇಮದ ಹೆಸರಿನಲ್ಲಿ ಯಾವುದೇ ಅಳುಕಿಲ್ಲದೆ ನಡೆದ ದಲಿತ, ಸಿಖ್ ಮತ್ತು ಮುಸ್ಲಿಮರ ಮಾರಣಹೋಮಗಳು; -ಈ ದೇಶದ ಭೂತ, ವರ್ತಮಾನ ಮತ್ತು ನಾಳೆಗಳು ಹೇಗಿರಲಿವೆ ಎಂಬುದಕ್ಕೆ ನಿದರ್ಶನ ಕೊಡುವಂತಿವೆ. ಈ ಕೃತಿಯಲ್ಲಿ ಲೇಖಕರು ಮಸೂದೆಯ ಸ್ಥೂಲ ಪರಿಚಯ ಮಾಡಿಕೊಡುವುದರ ಜತೆಗೆ ಸದರಿ ಮಸೂದೆಯ ಲಕ್ಷಣ ಮತ್ತು ಕೆಲವು ಲೋಪದೋಷಗಳನ್ನು ಸರಳ ಭಾಷೆಯಲ್ಲಿ ತಿಳಿಸಿಕೊಟ್ಟಿದ್ದಾರೆ. ಎಡಪಕ್ಷಗಳು ಈ ಮಸೂದೆಯನ್ನು ಏಕೆ ಅನುಮಾನಿಸುತ್ತಿವೆ ಹಾಗೂ ಈ ಮಸೂದೆ ಕುರಿತು ಕೋಮುವಾದಿಗಳ ವಿರೋಧ ಎಂಥದ್ದು ಎಂಬುದನ್ನು ವಿವರಿಸುವ ಎರಡು ಪುಟ್ಟ ಲೇಖನಗಳು ಈ ಕೃತಿ ಚಾಚಿಕೊಂಡಿರುವ ವಿಶಾಲತೆಯನ್ನು ತೋರಿಸುತ್ತವೆ. ಜಿ.ರಾಜಶೇಖರರ ಮೊನಚಾದ ಮುನ್ನುಡಿಯಿರುವ ಈ ಕೃತಿಯನ್ನು ಮನುಷ್ಯತ್ವ ಮತ್ತು ಮಾನವ ಹಕ್ಕುಗಳ ಬಗ್ಗೆ ನಂಬಿಕೆ ಇಟ್ಟಿರುವ ಪ್ರತಿಯೊಬ್ಬರು ಓದಲೇಬೇಕಿದೆ.



ಕೋಮುಹಿಂಸೆ ನಿಯಂತ್ರಣಾ ಮಸೂದೆ-2011

ಲೇಖಕರು: ಫಕೀರ್ ಮುಹಮ್ಮದ್ ಕಟ್ಪಾಡಿ


ಪ್ರಕಾಶಕರು: ಲಡಾಯಿ ಪ್ರಕಾಶನ, ? 21, ಪ್ರಸಾದ್ ಹಾಸ್ಟೆಲ್, ಗದಗ -582 101

ಪುಟಗಳು: 70, ಬೆಲೆ: ರೂ.60, ಪ್ರಕಟಣೆ: 2011

ವರ್ತಮಾನ ಹುಟ್ಟುಹಾಕಿದ ಚಿಂತನೆಗಳು ಮತ್ತು ತಲ್ಲಣಗಳು

'ಐಡೆಂಟಿಟಿ ಹಾಗೂ ಕಾಲ-ಮಾನದ ಚಿಂತನೆಗಳು' ಡಾ.ಮುಜಾಫರ್ ಅಸ್ಸಾದಿಯವರ ಈಚಿನ ಕೃತಿ. ಇವತ್ತಿನ ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳನ್ನು ಪಶ್ಚಿಮದ ಶ್ರೇಷ್ಠ ಚಿಂತಕರೊಂದಿಗೆ ಗಾಂಧಿ, ಅಂಬೇಡ್ಕರ್, ಲೋಹಿಯಾರ ಚಿಂತನೆಗಳ ಪಡಿಯಚ್ಚಿನೊಂದಿಗೆ ನೋಡುವ ವಿಶಿಷ್ಟ ಕ್ರಮವನ್ನು ಅಸ್ಸಾದಿಯವರ ಅನೇಕ ಬರಹಗಳಲ್ಲಿ ಕಾಣಬಹುದು.

ಬರಾಕ್ ಒಬಾಮಾ ಭಾರತಕ್ಕೆ ಬರುವುದನ್ನೇ ಸಂಭ್ರಮದಿಂದ ನೋಡುತ್ತಿದ್ದ ಮಂದಿಗೆ ಅಸ್ಸಾದಿಯವರು ಒಬಾಮಾನ ಸಂಬಂಧಿಗಳು ಅಮೆರಿಕಾದ ಸ್ಲಮ್ಮುಗಳಲ್ಲಿ ಕೊಳೆಯುತ್ತಿರುವ ಮನಕಲಕುವ ಚಿತ್ರಗಳನ್ನು ತೋರಿಸಬಲ್ಲರು.



'ಇಲ್ಲಿನ ಲೇಖನಗಳು ಯಾವುದನ್ನು ಹಾಗೂ ಏನನ್ನೂ ಕೂಡ ವೈಭವೀಕರಿಸುವುದಿಲ್ಲ. ಅದು ಜಾತೀಯ ಪ್ರಶ್ನೆಯಾಗಲೀ, ಮೀಸಲಾತಿಯ ಪ್ರಶ್ನೆಯಾಗಲೀ ಅಥವಾ ಗಾಂಧಿ ಅಥವಾ ದೇವರಾಜ ಅರಸರ ಪ್ರಶ್ನೆಯಾಗಲೀ - ಇಲ್ಲೆಲ್ಲಾ ವೈಭವೀಕರಣದ ಬದಲು ತಕರಾರುಗಳನ್ನು ನೋಡಬಹುದು. ಈ ತಕರಾರುಗಳ ನಡುವೆ ಹುಡುಕಾಟವಿದೆ' ಎನ್ನುವ ಲೇಖಕರ ಮಾತಿನಂತೆ ಇಲ್ಲಿನ ಅನೇಕ ಲೇಖನಗಳು ನಮ್ಮ ಕಾಲದ ಐಡೆಂಟಿಟಿಯ ಪ್ರಶ್ನೆಗಳನ್ನು ಹೊಸ ತಕರಾರಿನೊಂದಿಗೆ ಮುಖಮಾಡಿ ನಿಲ್ಲುತ್ತವೆ. ಮರುಹುಡುಕಾಟದಲ್ಲಿ ಗಾಂಧಿ, ಅಂಬೇಡ್ಕರರಿಂದ ದಕ್ಕಿದ ಅನೇಕ ಪಾಠಗಳನ್ನು ಲೇಖಕರು ವಿಮರ್ಶಾತ್ಮಕವಾಗಿಯೇ ತೂಗಿ ನೋಡಿದ್ದಾರೆ. 'ಚೋಮ ಸಾಲಕ್ಕಾಗಿ ತನ್ನ ಭೂಮಿಯನ್ನು ಕಳೆದುಕೊಂಡರೆ ಮಂಗಳೂರಿನ ಗ್ರೆಗೋರಿ ಪತ್ರಾವೋ ದೇಶದ ಅಭಿವೃದ್ಧಿಯ ಹೆಸರಿನಲ್ಲಿ ಭೂಮಿಯನ್ನು ಕಳೆದುಕೊಳ್ಳುತ್ತಾನೆ. ಗ್ರೆಗೋರಿಯ ಹೋರಾಟ ಅಭಿವೃದ್ಧಿಯ ಪರ್ವಕಾಲದಲ್ಲಿ ಹಾಗೂ ಅಭಿವೃದ್ಧಿ ಪರಿಕಲ್ಪನೆಗಳ ಮುಖಾಮುಖಿ ಸಂದರ್ಭದಲ್ಲಿ ಹುಟ್ಟಿಕೊಂಡಿತು ಆದರೆ ಚೋಮನಿದ್ದ ಕಾಲದಲ್ಲಿ ಅಭಿವೃದ್ಧಿಯ ಪರಿಕಲ್ಪನೆ ಇನ್ನೂ ಹುಟ್ಟಿಕೊಂಡಿರಲಿಲ್ಲ' ಎಂದು ಹೇಳುತ್ತಲೇ ಲೇಖಕರು ನೆಲ ನುಂಗುವುದನ್ನೇ ರಾಜಕಾರಣವೆಂದುಕೊಂಡಿರುವ ಈ ಹೊತ್ತಲ್ಲಿ ದೇವರಾಜ ಅರಸರ ನೆನಪನ್ನು ಮತ್ತೆ ಮತ್ತೆ ಓದುಗರ ಮುಂದೆ ತಂದಿರಿಸುತ್ತಾರೆ.

ಅಸ್ಸಾದಿಯವರು ಈ ಚಿಂತನಾ ಕೃತಿಗೆ ಅವರ ವಿದ್ಯಾರ್ಥಿ ಐವನ್ ಫ್ರಾನ್ಸಿಸ್ ಲೋಬೋರ ಮುನ್ನುಡಿಯಿದೆ.

ಐಡೆಂಟಿಟಿ ಹಾಗೂ ಕಾಲ-ಮಾನದ ಚಿಂತನೆಗಳು


ಲೇಖಕರು: ಡಾ.ಮುಜಾಫರ್ ಅಸ್ಸಾದಿ

ಪ್ರಕಾಶಕರು: ಮುದ್ದುಶ್ರೀ ಗ್ರಂಥಮಾಲೆ, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್-ಕೃಷ್ಣಾಪುರದೊಡ್ಡಿ, ನಂ.119, 3ನೇ ತಿರುವು, 8ನೇ ಮುಖ್ಯರಸ್ತೆ ಹಂಪಿನಗರ, ಬೆಂಗಳೂರು-560104

ಪುಟಗಳು: 148, ಬೆಲೆ: ರೂ.100, ಪ್ರಕಟಣೆ: 2011



ಡಿಸೈನರ್ ಲಂಕೇಶ್ ಕಳ್ಳಬೆಕ್ಕು ಆದದ್ದು



• ಇಂದಿರಾ ಲಂಕೇಶ್

ನಾನು ಹೇಗೆ ಲಂಕೇಶರ ಹುಟ್ಟುಹಬ್ಬದಂದು ಅವರಿಗೆ ಹೊಸ ಬಟ್ಟೆ ಹೊಲಿಸಿ ಅವರ ಕಪಾಟಿನಲ್ಲಿ ಇಡುತ್ತಿದ್ದೆನೋ, ಹಾಗೆಯೇ ಲಂಕೇಶರು ಕೂಡ ನನಗೆ ನನ್ನ ಹುಟ್ಟುಹಬ್ಬದಂದು ರೇಷ್ಮೆ ಸೀರೆ ಕೊಡಿಸುತ್ತಿದ್ದರು (ನಮ್ಮ ದಾಂಪತ್ಯ ಜೀವನದ ಆರಂಭದಲ್ಲಲ್ಲ, ಬದಲಾಗಿ ಪತ್ರಿಕೆ ಪ್ರಾರಂಭಿಸಿದ ನಂತರ ಅವರ ಕೈಯಲ್ಲಿ ಒಂದಿಷ್ಟು ಹಣ ಬಂದ ನಂತರದ ವರ್ಷಗಳಲ್ಲಿ). ಆದರೆ ಲಂಕೇಶರು ನನಗೆ ಸೀರೆ ಕೊಳ್ಳಲು ಅಂಗಡಿಗೆ ತಾವೇ ಹೋಗುತ್ತಿರಲಿಲ್ಲವಾದ್ದರಿಂದ ನನ್ನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವ ಮಾತು ಎಲ್ಲಿಂದ ಬಂತು? ಬದಲಾಗಿ ಅವರು ಏನು ಮಾಡುತ್ತಿದ್ದರೆಂದರೆ ತಮ್ಮ ಸಹಾಯಕ ಗಿರಿಯನ್ನು ನಾರಾಯಣ ರಾವ್ ಅವರ ಸಿದ್ದೋಜಿ ಅಂಗಡಿಗೆ ಕಳುಹಿಸಿ, ಆ ಅಂಗಡಿಯಿಂದ ಒಂದಷ್ಟು ಸೀರೆಗಳನ್ನು ತಮ್ಮ ಆಫೀಸಿಗೆ ತರಿಸಿಕೊಳ್ಳುತ್ತಿದ್ದರು. ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿ ಅದನ್ನು ನನ್ನ ಅಂಗಡಿಗೆ ಅದೇ ಗಿರಿಯ ಮೂಲಕ ಕಳುಹಿಸುತ್ತಿದ್ದರು.

ಇದೆಂತಹ ತಮಾಷೆ ನೋಡಿ: ನಾನೇ ರೇಷ್ಮೆ ಸೀರೆ ಅಂಗಡಿ ನಡೆಸುತ್ತಿದ್ದಾಗ ನನ್ನ ಪತಿ ಬೇರೆಯವರ ಅಂಗಡಿಯಿಂದ ನನಗೆ ಸೀರೆ ಕೊಡಿಸುತ್ತಿದ್ದರು!

ಲಂಕೇಶರಿಗೆ ರೇಷ್ಮೆ ಸೀರೆಗಳ ಬಗ್ಗೆ ಅಷ್ಟು ಗೊತ್ತಿರಲಿಲ್ಲ, ಅದರಲ್ಲಿ ಹೆಚ್ಚು ಜರಿ ಇದ್ದರೆ ಸಾಕು, ಅದನ್ನೇ ಆಯ್ಕೆ ಮಾಡುತ್ತಿದ್ದರು. ಆದ್ದರಿಂದ ಅವರು ನನಗಾಗಿ ಕಳುಹಿಸಿದ ಸೀರೆಯನ್ನು ನಾನು ಸಿದ್ದೋಜಿ ಅಂಗಡಿಯಲ್ಲಿ ಎಕ್ಸ್‌ಚೇಂಜ್ ಮಾಡಿಕೊಳ್ಳುತ್ತಿದ್ದೆ. ಅಥವಾ ಆ ಸೀರೆಯನ್ನು ನನ್ನ ಅಂಗಡಿಯಲ್ಲಿ ಮಾರಿ ನನ್ನ ಅಂಗಡಿಯಿಂದಲೇ ನನಗೆ ಇಷ್ಟವಾದ ಸೀರೆಯನ್ನು ಲಂಕೇಶರು ಕೊಟ್ಟ ಉಡುಗೊರೆ ಎಂದು ತೆಗೆದಿಟ್ಟುಕೊಳ್ಳುತ್ತಿದ್ದೆ.

ನಾನು ನನ್ನ ಹುಟ್ಟುಹಬ್ಬದಂದು ಲಂಕೇಶರು ಹೀಗೆ 'ಪರೋಕ್ಷವಾಗಿ' ಕೊಡಿಸಿದ್ದ ಸೀರೆಯನ್ನು ಉಡುತ್ತಿದ್ದೆ.

****

ಲಂಕೇಶರ ಹಲವು ಪ್ರಯೋಗಗಳ ಬಗ್ಗೆ ಹೇಳಲೇಬೇಕು. ಒಮ್ಮೆ ಲಂಕೇಶರು ತಾವು ಧರಿಸುವ ಬಟ್ಟೆಗಳನ್ನು ತಾವೇ ಡಿಸೈನ್ ಮಾಡಿಕೊಳ್ಳುವ ಪ್ರಯೋಗ ಮಾಡಿದರು. ಒಂದು ದಿನ ಲಂಕೇಶರು ತಮ್ಮ ಕೈಯಲ್ಲಿ ಒಂದು ದೊಡ್ಡ ಪ್ಯಾಕೆಟ್ ಹೊತ್ತು ಬಂದರು. ಏನದು ಎಂದು ನಾವೆಲ್ಲ ಕೇಳಿದಾಗ "ಮಿಯಾಂವ್" ಎನ್ನುತ್ತಾ ಅವರು ಅದನ್ನು ತೆರೆದರು. ಅದರಲ್ಲಿ ಒಂದೇ ನಮೂನೆಯ ಹಲವಾರು ಬಣ್ಣಬಣ್ಣದ ಉಡುಗೆಗಳಿದ್ದವು. ಅವನ್ನು ಉಡುಗೆ ಎಂದು ಯಾಕೆ ಹೇಳುತ್ತಿದ್ದೇನೆಂದರೆ ಅವು ಇತ್ತ ಶರ್ಟ್ ತರಹವೂ ಇರಲಿಲ್ಲ, ಅತ್ತ ಜುಬ್ಬಾ ತರಹವೂ ಇರಲಿಲ್ಲ, ಅವುಗಳಿಗೆ ಮೊಣಕೈ ತನಕ ತೋಳು ಇದ್ದವು, ಕಾಲರ್ ಇರಲಿಲ್ಲ, ಜುಬ್ಬಕ್ಕಿಂತ ಮೋಟ ಆದರೆ ಶರ್ಟ್‌ಗಿಂತ ಉದ್ದ ಇದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಅವುಗಳಿಗೆ ಹೊಟ್ಟೆ ಮೇಲೆ ಒಂದು ಜೇಬು ಇತ್ತು ಆ ಉಡುಪುಗಳು ಎಷ್ಟು ವಿಚಿತ್ರವಾಗಿದ್ದವೆಂದರೆ ಅವು ಒಂದು ರೀತಿಯಲ್ಲಿ ಹಳ್ಳಿಗಾಡಿನ ರೈತರು ಧರಿಸುವ ಬನಿಯನ್ ತರಹ ಇದ್ದವು! ಮಕ್ಕಳಂತೂ ಲಂಕೇಶರು ಡಿಸೈನ್ ಮಾಡಿದ್ದ ಬಟ್ಟೆಯನ್ನು ನೋಡಿ ನಕ್ಕರು. ಆದರೂ ಲಂಕೇಶರು ಸುಮ್ಮನಿರಬೇಕಲ್ಲ, ಮಾರನೆ ದಿನ ಅವರು ತಮ್ಮ ಒಂದು ಕಲಾಕೃತಿಯನ್ನು ಧರಿಸಿ ಆಫೀಸಿಗೆ ಹೊರಟರು. ಆ ಬಟ್ಟೆ ಎಷ್ಟು ತೆಳುವಾಗಿತ್ತೆಂದರೆ ಲಂಕೇಶರ ಮಧ್ಯವಯಸ್ಸಿನ ದೇಹಾಕೃತಿ ಅದರಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿತ್ತು ಅಮ್ಮ ಆಫೀಸಿನಲ್ಲಿದ್ದವರು ಲಂಕೇಶರ ಧಿರಿಸು ನೋಡಿ ಏನೆಂದು ಹೇಳಿದರೋ ಗೊತ್ತಿಲ್ಲ, ಆದರೆ ಲಂಕೇಶರು ಆದಾದನಂತರ ಎಂದೂ ತಾವೇ ಡಿಸೈನ್ ಮಾಡಿದ್ದ ಉಡುಪುಗಳನ್ನು ತೊಡಲಿಲ್ಲ. ಸ್ವಲ್ಪ ದಿನಗಳ ನಂತರ ಅವನ್ನೆಲ್ಲ ತೋಟದಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕೊಟ್ಟರು.

ಅಂದಹಾಗೆ ಅವುಗಳಲ್ಲಿ ಒಂದನ್ನು ಲಂಕೇಶರು ತಮ್ಮ ಆಪ್ತ ಮಿತ್ರರಾದ ರಾಮದಾಸ್ ಅವರಿಗೆ ಕೊಟ್ಟಿದ್ದರು. ಅದು ಅಪ್ಪಟ ಕೇಸರಿ ಬಣ್ಣದ್ದು. ಒಮ್ಮೆ ಅದನ್ನು ಗೌರಿಗೆ ತೋರಿಸಿದ ರಾಮದಾಸ್ ಅವರು "ಲಂಕೇಶರು ತುಂಬಾ ಪ್ರೀತಿಯಿಂದ ಇದನ್ನು ನನಗೆ ಕೊಟ್ಟಿದ್ದರು. ಆದರೆ ಇದನ್ನು ನಾನು ತೊಟ್ಟು ಹೀಗೆ ಮನೆಯಿಂದ ಹೊರಗೆ ಹೋಗಲಿ?" ಎಂದಿದ್ದರು. ಆದರೂ ರಾಮದಾಸರು ಅದನ್ನು ಪ್ರೀತಿಯಿಂದ ಇಟ್ಟುಕೊಂಡಿದ್ದರು.



ಇನ್ನೊಂದು ಉದಾಹರಣೆ ಆಯಿಲ್ ಪುಲ್ಲಿಂಗ್‌ಗೆ ಸಂಬಂಧಿಸಿದ್ದು. ಪತ್ರಿಕೆಯಲ್ಲಿ ಆಯಿಲ್ ಪುಲ್ಲಿಂಗ್ ಬಗ್ಗೆ ಬರೆದಿದ್ದಲ್ಲದೆ ಎಲ್ಲರೂ ಅದನ್ನು ಪ್ರಯೋಗ ಮಾಡಬೇಕೆಂಬ ಅಭಿಪ್ರಾಯ ಅವರದ್ದಾಗಿತ್ತು, ಅದೇ ಹೊತ್ತಿಗೆ ಲಂಕೇಶರಲ್ಲೂ, "ನನ್ನಲ್ಲೂ ಸ್ವಲ್ಪ ಬ್ಲಡ್ ಪ್ರೆಷರ್ ಪ್ರಾರಂಭವಾಗಿದ್ದರಿಂದ ಅವರು ನನಗೂ ಪ್ರತಿ ಬೆಳಗ್ಗೆ ಆಯಿಲ್ ಪುಲ್ಲಿಂಗ್ ಮಾಡಲು ಹೇಳಿದರು. "ಅದರಿಂದ ಬ್ಲಡ್ ಪ್ರೆಶರ್ ಕಡಿಮೆ ಆಗೊಲ್ಲ, ಸುಮ್ಮನೆ ಮಾತ್ರೆ ತಗೊಳ್ಳಿ" ಎಂದು ನಾನು ಹೇಳಿದರೆ ಅವರು ಕೇಳಲಿಲ್ಲ, "ನಾನು ಮಾಡುತ್ತಿದ್ದೇನೆ. ನೀನೂ ಮಾಡಿ ನೋಡೆ" ಎಂದು ಒತ್ತಾಯ ಮಾಡಿದರು. ನಾನೂ ಪ್ರಯೋಗ ಮಾಡಿದೆ. ಪ್ರತಿ ದಿನ ಬೆಳಗ್ಗೆ ಲಂಕೇಶರು "ಆಯಿಲ್ ಪುಲ್ಲಿಂಗ್ ಮಾಡ್ತಿದ್ದೀಯಾ? ಅದರಿಂದ ನಿನ್ನ ರಕ್ತದ ಒತ್ತಡ ಕಡಿಮೆ ಆಗಿದೆಯಾ?" ಎಂದು ಕೇಳುತ್ತಿದ್ದರು. ಒಂದೆರಡು ವಾರ ಆಯಿಲ್ ಪುಲ್ಲಿಂಗ್ ಮಾಡಿದ ನಾನು ಅದರಿಂದ ಯಾವ ಪ್ರಯೋಜನವನ್ನೂ ಕಾಣದೆ ಅದನ್ನು ನಿಲ್ಲಿಸಿದೆ. ಅವರು ಮಾತ್ರ ಕೆಲವು ತಿಂಗಳುಗಳ ಕಾಲ ಅದನ್ನು ಮುಂದುವರೆಸಿದರು. ಕೊನೆಗೆ ಅವರು ಕೂಡ ಅದರಿಂದ ಯಾವ ಪ್ರಯೋಜನವನ್ನೂ ಪಡೆಯದೆ ಆಯಿಲ್ ಪುಲ್ಲಿಂಗ್‌ಅನ್ನು ನಿಲ್ಲಿಸಿ ಸುಮ್ಮನಾದರು.

ಲಂಕೇಶರ ಇಂತಹ ಹಲವಾರು ಪ್ರಯೋಗಗಳ ಬಗ್ಗೆ ಹೇಳುತ್ತಾ ಹೋಗಬಹುದು. ಆದರೆ ಲಂಕೇಶರು ತಮ್ಮ ಕೈಯಲ್ಲಿ ಆದಷ್ಟು ದಿನ ಪ್ರತಿ ದಿನ ಮಾಡಿದ್ದು ಶಿರಶಾಸನ. ಅದನ್ನು ಅವರು ನಮ್ಮ ಮದುವೆಗಿಂತಲೂ ಮೊದಲಿನಿಂದ ಮಾಡುತ್ತಿದ್ದರು. ಮದುವೆ, ಮಕ್ಕಳು ಇತ್ಯಾದಿಗಳೆಲ್ಲ ಆದ ನಂತರವೂ ಅದನ್ನು ಮುಂದುವರೆಸುತ್ತಿದ್ದರು. ಅವರು ಶಿರಶಾಸನವನ್ನು ಅದೆಷ್ಟು ಚೆನ್ನಾಗಿ ಮಾಡುತ್ತಿದ್ದರೆಂದರೆ ರೂಮಿನ ಮಧ್ಯದಲ್ಲೂ ಯಾವುದೇ ಆಸರೆ ಇಲ್ಲದೆ ತಲೆಕೆಳಗಾಗಿ ಹಲವಾರು ನಿಮಿಷಗಳ ಕಾಲ ನಿಲ್ಲಬಲ್ಲವರಾಗಿದ್ದರು. ಲಂಕೇಶರ ಕುಡಿತ ಹೆಚ್ಚಾದಾಗಲೂ ಅವರು ರಾತ್ರಿ ಊಟ ಮಾಡುವ ಮುನ್ನ ಒಂದೆರಡು ನಿಮಿಷ ಶಿರಶಾಸನ ಮಾಡಿಯೇ ತೀರುತ್ತಿದ್ದರು. ವಯಸ್ಸು ಮತ್ತು ಆರೋಗ್ಯ ಅವರಿಗೆ ಕೈಕೊಟ್ಟನಂತರವೇ ಅವರು ತಮ್ಮ ಬಹಳ ವರ್ಷದ ಅಭ್ಯಾಸವಾಗಿದ್ದ ಶಿರಶಾಸನವನ್ನು ನಿಲ್ಲಿಸಿದ್ದು.

* * * *

ಲಂಕೇಶರಿಗೆ ಕಾರ್ ಡ್ರೈವ್ ಮಾಡುವುದೆಂದರೆ ತುಂಬಾ ಇಷ್ಟ. ಅದೆಷ್ಟೇ ದೂರದ ಪ್ರಯಾಣವಾಗಲಿ ಅವರು ತಾವೇ ಡ್ರೈವ್ ಮಾಡುತ್ತಿದ್ದರು. ಅವರು ತಾವು ಓರ್ವ ಉತ್ತಮ ಡ್ರೈವರ್ ಎಂದೇ ನಂಬಿದ್ದರು. ಅದು ನಿಜ ಕೂಡ. ಆದರೆ ಹಲವೊಮ್ಮೆ ತುಂಬಾ ಫಾಸ್ಟ್ ಆಗಿ ಕಾರನ್ನು ಓಡಿಸುತ್ತಿದ್ದರು. ಅವರ ಆರೋಗ್ಯ ಕೆಟ್ಟ ನಂತರ ಅವರು ಇನ್ನು ಮುಂದೆ ಡ್ರೈವ್ ಮಾಡಕೂಡದೆಂದೂ, ಬದಲಾಗಿ ಒಬ್ಬ ಡ್ರೈವರ್‌ನನ್ನು ಇಟ್ಟುಕೊಳ್ಳಬೇಕೆಂದೂ ಮಕ್ಕಳು ಹಟಹಿಡಿದರು. ವಿಧಿ ಇಲ್ಲದೆ ಲಂಕೇಶರು ಒಪ್ಪಿಕೊಂಡರು. ಆಗ ಹಲವಾರು ಡ್ರೈವರ್‌ಗಳು ಬಂದು ಹೋದರು. ಕಾರಣ ಲಂಕೇಶರ ಕೋಪವನ್ನು ಎದುರಿಸಲಾಗದೆಯೋ, ಬೈಗುಳಗಳನ್ನು ಸಹಿಸಲಾಗದೆಯೋ, ಸಮಯಪ್ರಜ್ಞೆಯನ್ನು ಪಾಲಿಸಲಾಗದೆಯೋ ಒಂದೆರಡು ದಿನಗಳಲ್ಲಿ ಅವರು ಕೆಲಸ ಬಿಟ್ಟುಹೋಗುತ್ತಿದ್ದರು. ಲಂಕೇಶರ ಕೋಪ, ಸಿಡುಕು ಮತ್ತು ಸಮಯಪ್ರಜ್ಞೆಯನ್ನು ಚೆನ್ನಾಗಿ ನಿಭಾಯಿಸಿ ಅವರೊಂದಿಗೆ ಕಡೆಯವರೆಗೂ ಇದ್ದದ್ದು ಡ್ರೈವರ್ ರೇವಣ್ಣ.

ರೇವಣ್ಣ ಆಗೀಗ ರಜೆ ಮೇಲೆ ಹೋದಾಗ ಲಂಕೇಶರನ್ನು ಆಫೀಸಿಗೆ, ರೇಸ್ ಕೋರ್ಸ್‌ಗೆ, ತೋಟಕ್ಕೆ ಕರೆದುಕೊಂಡು ಹೋಗುವ ಜವಾಬ್ದಾರಿ ಮನೆಯ ಇತರರ ಮೇಲೆ ಬೀಳುತ್ತಿತ್ತು, ನಾನು ಮತ್ತು ಅವರು ಸಾಮಾನ್ಯವಾಗಿ ಬೆಳಗ್ಗೆ ಒಂದೇ ಸಮಯಕ್ಕೆ ಮನೆ ಬಿಡುತ್ತಿದ್ದರಿಂದ ಹಲವೊಮ್ಮೆ ನಾನು ಅವರನ್ನು ಆಫೀಸಿಗೆ ಬಿಟ್ಟು ನನ್ನ ಅಂಗಡಿಗೆ ಹೋಗುತ್ತಿದ್ದೆ. ಅವರನ್ನು ಕರೆದುಕೊಂಡು ಹೋಗುವಾಗ ನಾನು ಆದಷ್ಟು ಜೋಪಾನವಾಗಿ ನನ್ನ ಕಾರ್‌ಅನ್ನು ಡ್ರೈವ್ ಮಾಡುತ್ತಿದ್ದೆ. ಆದರೆ ಅವರು ಏನನ್ನಾದರೂ ಕಾಮೆಂಟ್ ಮಾಡುತ್ತಿದ್ದರು. ನಾನು ಅದನ್ನು ಕಿವಿಗೆ ಹಾಕಿಕೊಳ್ಳದೆ ನನ್ನ ಪಾಡಿಗೆ ಡ್ರೈವ್ ಮಾಡುತ್ತಿದ್ದೆ.

ಒಮ್ಮೆ ಬೇಬಿ ಅವರನ್ನು ಕರೆದುಕೊಂಡು ಹೋಗುತ್ತಿದ್ದಾಗ ಲಂಕೇಶರು ಎಂದಿನಂತೆ 'ನೀನು ಹಾಗೆ ಡ್ರೈವ್ ಮಾಡ್ತಿಯಾ, ಹೀಗೆ ಡ್ರೈವ್ ಮಾಡ್ತಿಯಾ' ಎಂದೆಲ್ಲ ಕಾಮೆಂಟ್‌ಗಳನ್ನು ಒಂದೇಸಮನೆ ಮಾಡುತ್ತಿದ್ದರಂತೆ. ಅದನ್ನೆಲ್ಲ ಕೇಳಿಸಿಕೊಳ್ಳುವಷ್ಟು ಕೇಳಿಸಿಕೊಂಡ ಬೇಬಿ ಕೊನೆಗೆ ತಾಳ್ಮೆ ಕಳೆದುಕೊಂಡು ಕಾರ್‌ಅನ್ನು ರೋಡ್ ಪಕ್ಕದಲ್ಲಿ ನಿಲ್ಲಿಸಿ "ನಾನು ಡ್ರೈವ್ ಮಾಡುವಾಗ ಸುಮ್ಮನಿರು. ಸುಮ್ಮನಿರಕ್ಕೆ ಆಗೋಲ್ಲ ಅಂದರೆ ಕಾರ್‌ನಿಂದ ಇಳಿದು ಆಟೋ ತಗೊಂಡು ಹೋಗು" ಎಂದು ಹೇಳಿದ್ದಾಳೆ. ಆಕೆ ತನ್ನ ಅಪ್ಪನನ್ನು ರಸ್ತೆಮಧ್ಯೆ ಬಿಟ್ಟು ಹೋಗುತ್ತಿರಲಿಲ್ಲ. ಆದರೆ ತಾನು ಮಾತ್ರ ಉತ್ತಮ ಡ್ರೈವರ್, ಇತರರೆಲ್ಲ ಕಳಪೆ ಡ್ರೈವರ್‌ಗಳೆಂಬ ಲಂಕೇಶರ ಧೋರಣೆಗೆ ಯಾರಾದರೊಬ್ಬರು ಕಡಿವಾ[ಣ] ಹಾಕಬೇಕಿತ್ತು, ಅದನ್ನು ಬೇಬಿ ಯಶಸ್ವಿಯಾಗಿ ಮಾಡಿದ[ಳು]. ಆನಂತರ ಲಂಕೇಶರು ನಮ್ಮ ಡ್ರೈವಿಂಗ್ ಬಗ್ಗೆ ಕಾಮೆಂ[ಟ್] ಮಾಡುವುದನ್ನು ನಿಲ್ಲಿಸಿದರು.

* * * *

ಆಗ ನಮ್ಮ ಮನೆಯಲ್ಲಿ ಸಾಮಾನ್ಯವಾಗಿ ರಾತ್ರಿ ಊ[ಟ]ದೊಂದಿಗೆ ಒಂದು ಸಿಹಿ ಇದ್ದೇ ಇರುತ್ತಿತ್ತು, ಜಾಮೂ[ನ್], ಪೇಡ, ಜಿಲೇಬಿ, ಸಿಹಿ ಉಂಡೆ, ಕೊನೆಗೆ ಏನಿಲ್ಲವೆಂದರೆ ಒಂದು ಚಿಕ್ಕ ಕೇಕ್ ಇದ್ದೇ ಇರುತ್ತಿತ್ತು. ಲಂಕೇಶರು ಮಧ್ಯಾ[ಹ್ನದ] ಊಟಕ್ಕೆ ಅನ್ನ, ಸಾರು, ಪಲ್ಯ, ಮೊಸರನ್ನ ತಿನ್ನುತ್ತಿದ್ದ[ರು]. ರಾತ್ರಿ ಊಟಕ್ಕೆ ರಾಗಿ ಮುದ್ದೆ ತಿನ್ನುತ್ತಿದ್ದರು. ಮು[ದ್ದೆ] ತಿನ್ನುವ ಮುನ್ನ ಅವರು ಸಿಹಿಯನ್ನು ತಿನ್ನುತ್ತಿದ್ದರು. ಆ[ದರೆ] ಅವರಲ್ಲಿ ಸಕ್ಕರೆ ಕಾಯಿಲೆ ಕಾಣಿಸಿಕೊಂಡ ನಂತರ ಅವ[ರಿಗೆ] ಸಿಹಿ ತಿನಿಸುಗಳನ್ನು ಕೊಡುವುದನ್ನು ನಾನು ನಿಲ್ಲಿಸಿದೆ.


* * * *

ಆಗ ಗೌರಿ ನಮ್ಮ ಮನೆಗೆ ವಾಪಸ್ ಬಂ[ದು] ನಮ್ಮೊಂದಿಗೆ ವಾಸಮಾಡಲು ಪ್ರಾರಂಭಿಸಿದ್ದಳು. ಪತ್ರಕ[ರ್ತೆ]ಯಾಗಿದ್ದ ಆಕೆ ಕೂಡ ತನ್ನ ಅಪ್ಪನಂತೆ ರಾತ್ರಿ ತಡವಾ[ಗಿ] ಮನೆಗೆ ಬರುತ್ತಿದ್ದರಿಂದ ನಾನು ಅವರಿಬ್ಬರಿಗೂ ಪ್ರತ್ಯೇ[ಕ] ತಟ್ಟೆಗಳಲ್ಲಿ ಅವರವರಿಗೆ ಅಗತ್ಯವಾದ ಮತ್ತು ಸೂಕ್ತವಾ[ದ] ಊಟವನ್ನು ಇಟ್ಟು, ಅವುಗಳ ಮೇಲೆ ಇನ್ನೊಂ[ದು] ತಟ್ಟೆಯನ್ನು ಮುಚ್ಚಿ ಡೈನಿಂಗ್ ಟೇಬಲ್ ಮೇಲೆ ಇಡುತ್ತಿ[ದ್ದೆ]. ಲಂಕೇಶರು ಡೈನಿಂಗ್ ಟೇಬಲ್‌ನ ಮುಖ್ಯ ಕುರ್ಚಿ[ಯ] ಮೇಲೆ ಕೂರುತ್ತಿದ್ದರಿಂದ ಆ ಕುರ್ಚಿಯ ಮುಂದೆ ಅ[ವರ] ತಟ್ಟೆ, ಅದರ ಬಗಲಲ್ಲಿದ್ದ ಕುರ್ಚಿಯ ಮುಂದೆ ಗೌರಿ[ಯ] ತಟ್ಟೆ ಇರುತ್ತಿದ್ದವು. ಅದೇ ಹೊತ್ತಿಗೆ ನಮ್ಮ ಮನೆಯ[ಲ್ಲಿ] ಬೆಕ್ಕಿನ ಕಾಟ ಪ್ರಾರಂಭವಾಗಿತ್ತು. ಅಡುಗೆ ಮನೆಯ ಕಿ[ಟಕಿ] ತೆರೆದಿದ್ದರೆ ಬೆಕ್ಕು ಮಧ್ಯ ರಾತ್ರಿ ಮನೆಯನ್ನು ಹೊಕ್ಕು ಹೆಪ್ಪಿಗೆ ಇಟ್ಟಿದ್ದ ಹಾಲನ್ನೆಲ್ಲ ಕುಡಿದು ಹೋಗುತ್ತಿತ್ತು.

ಹೀಗಿದ್ದಾಗ ಗೌರಿ ಒಂದೆರಡು ರಾತ್ರಿ ತನ್ನ ತಟ್ಟೆಯ[ಲ್ಲಿ] ಸಿಹಿ ತಿಂಡಿ ಇಲ್ಲದಿದ್ದದ್ದನ್ನು ಗಮನಿಸಿದರೂ ಮನೆಯ[ಲ್ಲಿ] ಯಾವುದೇ ಸಿಹಿ ಇರಲಿಲ್ಲವೇನೋ ಎಂದು ಭಾವಿ[ಸಿ] ಸುಮ್ಮನಾಗಿದ್ದಳು. ಆದರೆ ಒಂದು ರಾತ್ರಿ ಆಕೆ[ಯ] ತಟ್ಟೆಯಲ್ಲಿಟ್ಟಿದ್ದ ಕೇಕ್ ಮಾಯವಾಗಿ ಅದರ ಕ್ರೀ[ಮ್] ಮಾತ್ರ ತಟ್ಟೆಗೆ ಮೆತ್ತಿದ್ದನ್ನು ಆಕೆ ಗಮನಿಸಿದಳು. ಮಾ[ರನೆ ದಿನ] ಬೆಳಗ್ಗೆ ನಾನು ಅಂಗಡಿಗೆ ಹೋಗಲು ತಯಾರಾಗುತ್ತಿದ್[ದೆ]. ಡೈನಿಂಗ್ ಟೇಬಲ್ ಮುಂದೆ ಕೂತು ಪೇಪರ್ ಓದು[ತ್ತಾ] ಕಾಫಿ ಕುಡಿಯುತ್ತಿದ್ದ ಗೌರಿ "ಮೂರುನಾಲ್ಕು ದಿನದಿ[ಂದ] ನನಗೆ ಊಟದೊಂದಿಗೆ ಸ್ವೀಟ್ಸ್ ಯಾಕೆ ಇಟ್ಟಿರಲಿಲ್ಲ" ಎಂದು ಕೇಳಿದಳು. ಅದೇ ಹೊತ್ತಿಗೆ ಲಂಕೇಶರು ಕೂ[ಡ] ರೆಡಿಯಾಗಿ ಹಾಲ್ ರೂಮಿಗೆ ಬಂದರು. ನಾನು "ಯಾ[ಕೆ,] ಇಟ್ಟಿದ್ದೆನಲ್ಲಾ. ಬೆಕ್ಕು ಬಂದು ಅದನ್ನೂ ತಿಂದು ಹೋ[ಗಿರ]ಬಹುದಾ?" ಎಂದೆ. ಅದಕ್ಕೆ ಗೌರಿ "ಬೆಕ್ಕು ಬಂ[ದು] ತಿಂದಿದ್ದರೆ ಮುಚ್ಚಿದ ತಟ್ಟೆ ಸರಿದಿರುತ್ತಿತ್ತು, ಆದರೆ ಮೇ[ಲಿನ] ತಟ್ಟೆ ಸರಿಯಾಗಿತ್ತಲ್ಲಾ" ಎಂದಳು. ನಮ್ಮ ಸಂಭಾಷಣೆಯ[ನ್ನು] ಕೇಳಿಸಿಕೊಂಡ ಲಂಕೇಶರು ಸುಮ್ಮನೆ "ಮಿಯಾಂವ್" ಎಂದು ಹೇಳುತ್ತಾ ಸೀಟಿ ಹೊಡೆಯುತ್ತಾ ಮನೆಯಿ[ಂದ] ಹೊರಗೆ ನಡೆದರು.

ಆಗಲೇ ನಮಗೆ ಗೊತ್ತಾಗಿದ್ದು ಲಂಕೇಶರೇ ಗೌರಿ[ಯ] ತಟ್ಟೆಯಲ್ಲಿದ್ದ ಸಿಹಿಯನ್ನು ತಿನ್ನುತ್ತಿದ್ದ ಬೆಕ್ಕು ಎಂದು!

ಅವತ್ತಿನಿಂದ ನಮ್ಮ ಮನೆಯಲ್ಲಿ ರಾತ್ರಿ[ಯ] ಊಟದೊಂದಿಗೆ ಸಿಹಿ ತಿನ್ನುವ ಪದ್ಧತಿ ಕೊನೆಯಾಯಿ[ತು]. ಅದರ ಬದಲಿಗೆ ಎಲ್ಲರಿಗೂ ಮಧ್ಯಾಹ್ನದ ಊಟದೊಂ[ದಿಗೆ] ಸಿಹಿ ಇಟ್ಟು ಕಳುಹಿಸುವ ರೂಢಿ ಪ್ರಾರಂಭವಾಯಿ[ತು]. ಆದರೆ ಲಂಕೇಶರ ಊಟದ ಕ್ಯಾರಿಯರ್‌ನಲ್ಲಿ ಮಾ[ತ್ರ] ಯಾವುದೇ ಸಿಹಿ ತಿಂಡಿ ಇರುತ್ತಿರಲಿಲ್ಲ.



ನನ್ನ ಓದಿದವರು, ಬಲ್ಲವರು
ನೀನೊಬ್ಬ ತಾಯಿ ಎನ್ನುತ್ತಾರೆ
ಹಡೆದಿಲ್ಲ ನಾನು ಒಂದು ಕೂಸನ್ನೂ
'ಬಂಜೆ ಬೇನೆಯನ್ನರಿಯಳು'
ಮೂದಲಿಸುತ್ತದೆ ಲೋಕ!
ಆದರೆ ಲೋಕದ ತಾಯಂದಿರ ಬೇನೆ ನನ್ನೊಳಗೆ
ನೋವಿಗೆ ನೆಲವಾಗುತ್ತಾ ಹಸಿರಿಗೆ ತೊಟ್ಟಿಲಾಗುವ ಎದೆ
ತಣ್ಣಗೆ ಹರಿಯುತ್ತದೆ ಜುಳುಜುಳು.

ಸಿಡಿಲಂತೆ ಎರಗುತ್ತದೆ ಮತ್ತೊಂದು ಪ್ರಶ್ನೆ
ನನ್ನ ಪ್ರೀತಿಸದ ನೀನು ಲೋಕವನ್ನು ಹೇಗೆ ಪ್ರೀತಿಸುತ್ತೀ

ಕಡಲ ಮೊರೆತಕೆ ಅಲ್ಲೋಲಕಲ್ಲೋಲ ಅಲೆ
ಬಯಲ ಬಿಕ್ಕುಗಳನ್ನೆಲ್ಲ ಗಂಟಲಲಿ ಹೊತ್ತು
ಬರಿಗಾಲ ಕೆಳಗೆ ಮೆತ್ತನೆಯ ಹುಲ್ಲಾಗಿ
ಕ್ರಾಂತಿ ನೆತ್ತರಿನಿಂದ ಸಿಡಿದ ಗುಡುಗು- ಸಿಡಿಲು
ಈ ಲೋಕವೆಂದರೆ ನೀನೂ..........

ಕೆಸರ ಕಮಲಲಿ ಹಾವು, ಹಾವಿನೊಳಗಿನ ಹೂವು
ದೇಶಕ್ಕೆ ಧ್ವಜವಾಗುವ ನೋವು ಗೋರಿಯೊಳಗಿನ ಕೂಗು
ಬಣ್ಣ ಬಣ್ಣಗಳಲಿ ನರಳಿದ ನಿರಾಕಾರ ಹತ್ತಿ
ಉತ್ತಿ-ಬಿತ್ತಿದವರ ನೆತ್ತಿಯ ಮೇಲಾಡುವ ತಕ್ಕಡಿ-ಪರಡಿ
ಮಣ್ಣಿನ ಬಣ್ಣ ಅಳಿಸುತ್ತ ನೆಲ ನುಂಗಿ

ಅಂಗಳದ ಕೂಸುಗಳು ನನ್ನ ಮಡಿಲೊಳಗೆ

ನಿಂದಕನು ನೀನು ಮತ್ತೆ ಕೇಳುತ್ತಿ...
ಒಂದು ಮಗುವಿಗೆ ತಾಯಿಯಾಗದ ನೀನು
ಲೋಕದ ತಾಯಿ ಹೇಗೆ ಆಗುತ್ತಿ?

ಇದು ಪ್ರಶ್ನೆಯಲ್ಲ ಬಿಡು
ನದಿಗೊಂದು ತಡೆ
ತಾಯಿಗೊಂದು ಮುಳ್ಳು ಬೇಲಿ
ನಾನೊಂದು ಹರಿವ ನದಿ

• ಅನಸೂಯ ಕಾಂಬಳೆ

ಬ್ಲೂ ಫಿಲಂ ಅಂದ್ರೇನು ಅಂತ ಪೇಜಾವರ ಸ್ವಾಮಿಯು ಕೇಳಬೇಕಾಗಿತ್ತು

...ಇದ್ದಕ್ಕಿದ್ದಂತೆ ಇಲಿ ಪಾಷಾಣ ತಿಂದು ಸತ್ತ ಹೆಗ್ಗಣಗಳಂತೆ ...ರು ಜನ ಮಂತ್ರಿಗಳು ನಿಶರಾತ್ರಿಯಲ್ಲಿ ರಾಜೀನಾಮೆ ...ು ನಿರ್ಗಮಿಸಿದ. ನಿಜವಾದ ಕಾರಣ ಕಾಳಮಾವನಿಗೆ ...ರಲಿಲ್ಲ. ಜೊತೆಗೆ ಕೌರವ ಪಡೆಯ ದ್ರೋಣಾಚಾರಿ ...ತಿದ್ದ ಉಡುಪಿ ಆಚಾರಿಗಳ ನಿರ್ಗಮನ ಬೇರೆ. ...ವರು ಮಂತ್ರಿಗಳ ಕೃತ್ಯದಿಂದ ಆಘಾತಗೊಂಡ ಸಾವೆಂಬ ... ಬೇರೆ ಎಲ್ಲೆಡೆ ಹಬ್ಬಿ

ಕಪ್ಪೆ ಪುರಾಣ

ಬಿ. ಚಂದ್ರೇಗೌಡ

"ಇದೇನ್ಲ ಉಗ್ರಿ ಒಂದೇ ವಾರಕೆ ನಾಕಜನ ...ಗಿಬುಟ್ರು" ಎಂದ.

"ಉಡುಪಿ ಆಚಾರ್ರೇನೊ ಆಯುಸ್ಸು ...ಸಿಗಂಡೋದ್ರು. ಈ ಬಡ್ಡೆತ್ತವು ಬ್ಲೂ ಫಿಲಂ ನೋಡಿ ...ಗೋದೊ ಅತ್ತಗೆ."

"ಬುಲೂ ಫಿಲಮ್ಮು ಅಂದ್ರೇನ್ಲ?" ಎಂದಳು ಜುಮ್ಮಿ.

"ಕದಬಳ್ಳಿಲಿ ಒಂದು ಸತಿ ಹೆಂಗಸರ್ಯಲ್ಲ ನೋಡಿದ್ರಲ್ಲ ...ು ಕಣೆ."

"ಕದಬಳ್ಳಿಲ್ಯಾರು ನೋಡಕ್ಕೋಗಿದ್ರು ಸರಿಯಾಗೇಳ್ಳ."

"ಆ ವಾಟಿಸ್ಸೆ ಬಂದ್ರೇಳ್ತನೆ ಇರು."

"ನೀನೇ ಹೇಳ್ಳ."

"ನನಿಗನ್ನಿಸಿದಂಗೆ ನಿನಿಗೂ ಗೊತ್ತದೆ. ಆದ್ರು ಕೇಳ್ತಾಯಿದ್ದಿ. ...ಮಾವನಿಗೆ ಗೊತ್ತಿಲ್ಲ ಅಂತ ಹೇಳಬೇಕಷ್ಟೆಯ. ನೋಡು ...ವ, ನೀನು ಸಿನುಮ ನೋಡಿದ್ದಿಯಲವೆ?"

"ಊ ಕಣೇಳ್ಳ. ಬೇಕಾದೋಟು ನೋಡಿದ್ದಿನಿ."

"ಬೇಕಾದೋಟು ಎಲ್ಲಿ ನೋಡಿದ್ದಿ. ಲ್ಯಕ್ಕ ಹಾಕಿದ್ರೆ ...ಂಟು ಸಿನುಮಾ ನೋಡಿರಬವುದು. ಸಿನುಮಾ ತಗಿಯೋ ...ಿ ಕೆಲುವು ಪೋಲಿ ಬಡ್ಡೆತ್ತವು, ಹೆಣ್ಣು ಗಂಡ ಒಂದು ...ವೊಳಕೆ ಸೇರಿಸಿ, ಅವುರಿಬರು ಸೇರಿದ ಸಿನುಮ ...ತರೆ."

"ಅದ್ಯಾಕ್ ತಗೀತರೆ? ಆ ಸೂಳೆಮಕ್ಕಳಿಗೇನಾಗ್ಯದೆ?"

"ತಗದು ಮಾರ್ತರೆ ಕಣಮಾವ. ನಮ್ಮೊರಿಗಿಂತ್ಲುವೆ ...ನ್ನೊರು ಮದ್ದೆ ಅದನ್ನ ಮಾಡಿದ್ರು. ಹೇಳೋರು ...ೋರಿಲ್ದ ಬಿಕಾರಿ ನನ್ನ ಮಗನವು. ಅವುಕೆ ಕಾಸು ...ತ್ರೆ ಏನ್ನಾರ ಮಾಡ್ತವೆ. ಸುಮ್ಮನೆ ಖಯಾಲಿಗೂ ಮಾಡ್ತವೆ. ...ಹಿಡಕಂಡೂ ಸಿಡಿನೋ, ಕ್ಯಾಸೆಟ್ಟನೋ ಮಾಡಿ ಮಾರ್ತರೆ. ...ಿ ಒಂದು ದಂಧೆ ಮಾಡೋರು ಅವುರೆ."

"ಸರಿ, ಆದ ನೋಡೋರ್ಯಂತ ಸೂಳೆಮಕ್ಕಳು."

"ಅಯ್ಯೋ, ಎಲ್ಲಿದ್ದಿ ಮಾವ ನೀನು. ಯಂತ್ಯಂತೋರು ನೋಡ್ತರೆ ಗೊತ್ತಾ? ಕಾರೊಳಗಡೆ ಟಿವಿ ಮಡಿಕಂಡಿರೋ ಭಾಳ ಜನ ಅಂತದ್ನೆ ನೋಡದು. ಜನ ಹಾಳಾಗಿಬುಟ್ಟವುರೆ."

"ಯಾರೋ ಮಾಡಾಕ್ಯಾಗದೋರು ಕಂಡ್ಯ ಅಂಗೆ ನೋಡೋರು" ಎಂದ ಸೀರ ಮಾವ.

"ಕೊಡಗಿನ ಕಡೆ ಮಾರಾಜೊಬ್ಬ ಅಂಗೆ ಮಾಡೋನಂತೆ" ಎಂದ ಕಾಳಮಾವ.

"ಅದ್ಯಾವ ಮಾರಾಜನಪ್ಪಾ?" ಎಂದು ಜುಮ್ಮಿ ಅಚ್ಚರಿಗೊಂಡಳು.

"ನಮ್ಮ ಚವುರದ ದೊಡ್ಡಣ್ಣನ ತಮ್ಮ ಆಗಿನ ಕಾಲಕೆ ಸೋಮಾರಪೇಟೆಗೋಗಿ ಸೇರಿಕಂಡ ಕಂಡ್ಯೆ. ಆಗ ಅಲ್ಯಲ್ಲ ಅಂಗೆ ಮಾತಾಡೋರಂತೆ. ಅಲ್ಲಿ ರಾಜ ಅಂಗೆ ಇನ್ನೊಬ್ರು ಮಾಡದ ನೋಡ್ತ ಕುಂತಗಳನಂತೆ. ಅದು ಇಂಗ್ಲೀಸ್‌ನೋರಿಗೆ ಗೊತ್ತಾಗಿ ಬಂದು ಯುದ್ಧ ಮಾಡಿ ಸೋಲಿಸಿ ಅವುರ ದೇಸಕೆ ಕರಕಂಡೋದರಂತೆ" ಎಂದು ಕಾಳಮಾವ ಚಿಕವೀರ ರಾಜೇಂದ್ರನ ಕತೆಯನ್ನು ಹೇಳಿದ.

"ಅಂಗರಿದೇನು ಈ ಕಾಲದ ಕತಿಯಲ್ಲ ಬುಡು" ಎಂದ ಸೀರ.

"ಅನಾದಿಕಾಲದಿಂದ ಇರದೆ ಕಣಮಾವ ಇದು."

"ಯಾಕಪ್ಪ ಅಂದ್ರೆ, ದಿಸೀಸ್ ಸೆಕ್ಸೆ ಮಾಟ್ರು. ಆದ್ರಿಂದ ಇದು ಹೊಸಮ್ಯಾಟ್ರೇನು ಅಲ್ಲ" ಎನ್ನುತ್ತಾ ವಾಟಿಸ್ಸೆ ಬಂದು ಸರಿಯಾಗಿ ಕೂರುತ್ತಾ,

"ಆದ್ರೆ ವಿಧಾನಸೌಧದ ವಳಗಡೆ ಸೆಕ್ಸ್ ಫಿಲಂನ ಪ್ರಪಂಚದಲ್ಲಿ ಯಾರೂ ನೋಡಿಲ್ಲ, ಅಂತದೊಂದು ರೆಕಾರ್ಡಾಯ್ತು" ಎಂದ.

"ಅದ್ಯಂಗೆ ನೋಡಿದ ಅಂತ?"

"ಆದೇ ದೊಡಪ್ಪಾ, ಇತ್ತೀಚೆಗೆ ಮನುಸುರ ಕೈಗೆ ಪ್ರಪಂಚನೆ ಸಿಕ್ಯದಲ್ಲ, ಅಂದ್ರೆ ಮೊಬೈಲ್ ಸಿಕ್ಯದಲ್ಲಾ, ಅದ್ರೊಳಗೆ ಏನೇನದೇ ಅಂತೀ? ಕ್ಯಾಮರಾ, ಟೇಪ್ ರಿಕಾರ್ಡ್ರು, ಬ್ಲೂಫಿಲಂ ಸಿ.ಡಿ.ಯಲ್ಲಾ ಅದೆ. ನೀನು ಕುಂತಿರೋ ಜಾಗದಿಂದ್ಲೆ ನಿನ್ನ ಹೊಲ, ಮನೆ, ನಿನ್ನ ಆಡು, ಕುರಿ, ದನ ಎಲ್ಲಿ ಮೇಯ್ತಾವೆ. ಅವ್ನದ್ನೂ ನೋಡಬಹುದು ದ್ವಡಪ್ಪ."

"ಅಂತೆದ್ಯಲ್ಲ ಬಂದಿದ್ದತ್ತೇನ್ಲ?"

"ಬಂದು ಬಾಳ ದಿನಾಯ್ತು, ಅಂತದೊಂದು ಮೊಬೈಲ್ ಫೋನ್ ಲಕ್ಷ್ಮಣ ಸವದಿ ಅನ್ನೊ ಮಿನಿಸ್ಟ್ರು ತಗಂಡವುನೆ. ಎಲ್ಲೇ ಹೋಗ್ಲಿ ಯಾವಾಗ್ಲು ಅದ ಹಾಯ್ಕಂಡು ನೋಡತಿದ್ದ. ಯಾಕಪ್ಪ ಅಂದ್ರೆ, ಆ ಸೀಡಿನೆ ಅಂಗದೆ."

"ನೀನು ನೋಡಿದ್ದೇನೊ ಅದ?" ಎಂದ ಉಗ್ರಿ.


"ಊ ಕಣೊ. ಅದು ಪಾರಿನ್ ಸಿ.ಡಿ.ಯಾದ್ರಿಂದ ಬಿಜೆಪಿ ಮಿನಿಸ್ಟ್ರತ ಇರತದೆ. ಕೆಲವು ಕಾಂಗ್ರೈ ದಳದೋರತ್ರನೂ ಸಿಗತದೆ ನೋಡಬವುದು. ನಮ್ಮ ಪೇಜಾವರ ಸ್ವಾಮಿನೆ ಯಲ್ಲಾ ಕ್ಯಲಸನೂ ಬುಟ್ಟು ಮೂರು ದಿನ ನೋಡಿದ್ರು ಅಂದ್ರೆ, ಇನ್ಯಾರು ನೋಡದಿಲ್ಲ ಹೇಳು."

"ಲೋ ಥೂತ್, ಪೇಜಾವರ ಸ್ವಾಮಿ ವ್ಯಾಲೆ ಅನ್ಯಾಯದ ಮಾತಾಡಬ್ಯಾಡ ಕಂಡ್ಯ. ಏನಂತ ತಿಳಕಂಡಿದ್ದಿ ಅವುರ."

"ಅಂಗಲ್ಲಾ ದೊಡಪ್ಪಾ, ಅವುರ್ಯಂಗೇಳ್ಯವುರೆ ಗೊತ್ತೆ? ವಿಧಾನಸೌಧದಲ್ಲಿ ಸವದಿ ಅಂಡ್ ಟೀಮು ಸೆಕ್ಸ್ ಸಿಡಿ ನೋಡಿದ್ದು ತಪ್ಪು, ಮಾಧ್ಯಮಗಳು ಅದನ್ನ ಮೂರು ದಿನ ತೋರಿಸಿದ್ದೂ ತಪ್ಪು ಅಂದವುರೆ. ಅಲ್ಲಿಗೆ ಜಗತ್ ಗುರುಗಳು ಮೂರು ದಿನ ನೋಡಿದ್ರು ಅಂತ ತಾನೆ."

"ಯಾರೊ ಹೇಳಿದನ್ನ ಕೇಳಿರಬವುದು."

"ಅಂಗೂ ಇರಬವುದು. ನಾನು ಅಲ್ಲಗಳಿಯದಿಲ್ಲ. ಮೂರು ದಿನ ಟಿವಿ ತೋರಿದ್ಮೆ ಸವದಿ, ಪಾಟೀಲ್, ಪಾಲೇಮಾರ್ ಕಡೆಯೋರೆ ಸುಮ್ಮನವುರೆ. ಆದ್ರೆ ಈ ಪೇಜಾವರಿಗೇನಾಯ್ತು, ಇವರ ಮಾತ ನೋಡಿದ್ರೆ, ಕೆಟ್ಟ ಕೆಲಸ ಮಾಡದಕಿಂತ, ಅದನ್ನ ಬಹಿರಂಗ ಮಾಡದು ತಪ್ಪು, ಇಂತ ವಿಷಯದಲ್ಲಿ ಸ್ವಾಮಿಯಾದೋನು ಮಾತಾಡಬಾರ್ದು ಅನ್ನದೂ ಗೊತ್ತಿಲ್ಲ, ಪಾಪ ಪೂಲಿಷ್ ಫೆಲೊ."



"ಅವರು ಬಿಜೆಪಿ ಕಾರ್ಯಕರ್ತ ಆಗಿ ಅದ್ಯಂಗೆ ಸುಮ್ಮನಿರತರೊ. ಅವರ ಪಾರ್ಟಿ ಮರಿಯಾದಿ ಈತರ ಹಾಳಾಗಿ ಮಾನಹೋಯ್ತುಲ್ಲಾ, ಅದ್ಕೆ ಟಿವಿಯೋರೆ ಕಾರಣ ಅಂತ ಅಂಗಂದಿರಬವುದು ಬುಡು."

"ಪೇಜಾವರ ಸ್ವಾಮಿಗೆ ಬ್ಲೂಫಿಲಂ ಅಂದ್ರೇನು ಸ್ವಾಮಿ ಅಂತ ಕೇಳಬೇಕಾಗಿತ್ತು."

"ಗೊತ್ತಿರತದೆ ಕಣೊ. ಅವರ ಮಠದಲ್ಲೇ ಒಬ್ಬ ಸ್ವಾಮಿ ಭಾರಿ ಕಿಲಾಡಿ ಇದ್ದನಂತೆ. ಅಂಥೋರಿಂದ ಸ್ವಾಮೀಜಿಗೆ ಗೊತ್ತಾಗಿರತದೆ."

"ಅದೋಗ್ಲಿ ಕಣೊ ಉಗ್ರಿ, ಇಸ್ಪಿಟ್ ಆಡಕ್ಕೋದೋನು ಸಾಯಂಕಾಲಕೆ ಹಾಳಾದ, ನೋಡಕ್ಕೋದೋನು ಮದ್ದನಿಕ್ಕೆ ಹಾಳಾದ್ದು ಅಂತ ಪಾಟೀಲ, ಪಾಲೇಮಾರ ಹಾಳಾದ್ರಲ್ಲ ಹೇಳು."

"ಪಾಟೀಲ ಇಣುಕಿ ನೋಡಿ ಹಾಳಾದ, ಆದ್ರೆ ಪಾಲೇಮಾರ್ ಸುಮ್ಮಸುಮ್ಮನೆ ಹಾಳಾಗೋದ ಅತ್ತಗೆ."

"ಅವುರ್ಯಾಕಾಳಾದ್ರುಲ?"

"ಅದು ಹಿಂಗಾಯ್ತು ದೊಡ್ಡಪ್ಪಾ. ಈ ಸವದಿ ಬ್ಲೂಫಿಲಂ ನೋಡುವಾಗ ಪಾಟೀಲ ಇಣುಕಿ ನೋಡಿದ. ಸವದಿ ಸಿಗಾಯ್ಕಂಡಾಗ ಇದು ಪಾಲೇಮಾರನ ಮೊಬೈಲಿತ್ತು ಅಂದ. ಅಲ್ಲಿಗೆ ಮೂರು ಜನ ಮಗುಚಿಗಂಡ್ರು."

"ಅಂತ ಮುಂಡೆಮಕ್ಕಳ ಕಿವಿಗೆ ಯಕ್ಕಡ ಕಟ್ಟಿ ಊರಲ್ಲಿ ಮ್ಯರವಣಿಗೆ ಮಾಡಿ ಊರು ಬುಟ್ಟು ಓಡುಸಬೇಕು ಕಂಡ್ಯ."

"ನಿಜ ದೊಡಪ್ಪ. ನಾವು ಪಾರಿನ್‌ಗೋದಾಗ ಇಂಡಿಯಾ, ಅದರಲ್ಲೂ ಕರ್ನಾಟಕದವರು ಅಂತ ಹೇಳಿಕಳದಂಗೆ ಮಾಡಿಬುಟ್ರು."

"ನೀನ್ಯಾವ ಪಾರಿನ್‌ಗೋದಿಯೋ?"

"ಅಕಸ್ಮಾತ್ ನಿಮ್ಮ ರೈತರು ಟೂರೋದಾಗ ಅವುರ ಜೊತೆ ನಾವೂ ಹೋದ್ರೆ ಅಂತ ಅಂಗಂದೆ ಕಣೊ."

"ಆ ರೈತ ಸಂಘದವೇನು ಸದಾನಂದ ಗೌಡನ್ನ ಕರದು ಬೈಸಿಗಂಡವುರಲ್ಲ?"

"ಬೋದಿಲ್ಲ ಕಣೊ. ಆ ಪಾಂಡುಪುರದ ಪುಟ್ಟಣ್ಣಯ್ಯ ಸದಾನಂದಗೌಡ ಯಾವಾಗ್ಲು ನಗತರೆ, ಯಲ್ಲರೂ ನಗಂಗೆ ಮಾಡಬೇಕು ಅಂದನಂತೆ. ಅದ್ಕೆ ಸದಾನಂದಗೌಡ ಸಿಟ್ಟಾಗಿ 'ನಾನು ಯಾವಾಗಲೂ ನಗುವುದಕ್ಕೆ ಹುಚ್ಚ ಅಲ್ಲ, ನಮ್ಮ ತಂದೆ ತಾಯಿ ಇಬ್ಬರೂ ನಗುತ್ತಿದ್ದರು. ನಗುತ್ತಲೇ ಅವರು ನನ್ನ ಪಡೆದಿರುವುದರಿಂದ ನಾನು ನಗುತ್ತೇನೆ. ಅದನ್ನ ಯಾರಾದರೂ ಆಡಿಕೊಂಡರೆ ನಾನು ಸಹಿಸುವುದಿಲ್ಲ' ಅಂದವುನೆ."

"ಆಹಾ ಅಂಗನ್ನಕ್ಕೋಗಿದ್ನೇನ್ಲ ಅವುನು?"

"ನಿಜವಾಗ್ಲು ಇದೇತರ ಕಣಕ್ಕ ಅವುನಂದಿರದು. ನನಿಗೇನು ಫೀಲಾಯ್ತು ಅಂದ್ರೆ, ರಾಜಕಾರಣಿಗಳು ನಂಜುಂಡಸ್ವಾಮಿ ಅತ್ರಕೋಗಕ್ಕೆ ಹೆದರತಿದ್ರು. ಆ ದೇವೇಗೌಡ, ಹೆಗಡೆ, ಪಟೇಲ ಯಲ್ಲಾರು ಹೆದರೋರು. ಅಂತ ಸಂಘದ ರೈತರ ಲೀಡ್ರು ಮುಖ್ಯಮಂತ್ರಿ ಕರದು ಹೊಗಳತರಲ್ಲಾ, ಇವುರು ಗ್ಯಾರಂಟಿ ಉದ್ದಾರಾಗದಿಲ್ಲ. ಯೂಜ್ ಲೆಸ್ ಫೆಲೋಸ್."

ಬಂಡಾಯದ ಅವಶ್ಯಕತೆ ಮತ್ತು ಮಿತಿ'

ಸಾಹಿತ್ಯದಲ್ಲಿ ಬಂಡಾಯ ಬೇಕೇಬೇಕೆಂದು ವಾದಿಸುವವರಲ್ಲಿ ನಾನು ಒಬ್ಬ. ಜೀವನವೇ ವಿಚಿತ್ರ. ಇದರಲ್ಲಿ ಸ್ಥಿರತೆ ...ತ್ತು ಸಂಪ್ರದಾಯವನ್ನು ಬಹಳ ಜನ ಇಷ್ಟಪಡುತ್ತಾರೆ. ಒಂದು ಪಾಳೇಗಾರಿಕೆಯ ಜೀವನಕ್ರಮವನ್ನೇ ನೋಡಿ: ಒಬ್ಬ ...ಜಮಾನ, ಅವನ ಹೆಂಡತಿ, ಮಕ್ಕಳು, ಅವನ ರಕ್ಷಣೆಯಲ್ಲಿರುವ ನಿರ್ವಹಣಾಕಾರರು, ಯಜಮಾನನಿಗಿಂತ ಕಡಿಮೆ ...ಮಂತರಾದ ಗೆಳೆಯರು, ಕೆಲಸಗಾರರು. ಇವರನ್ನು ಅನೇಕ ಸೂಕ್ಷ್ಮ ಗುಂಪುಗಳಾಗಿ ಮತ್ತೂ ವಿಂಗಡಿಸಬಹುದು. ...ಕನಾಗಿ ಯಜಮಾನನಿಗಾಗಿ ದುಡಿಯುವವ ಒಬ್ಬನಾದರೆ ಈ ಕೃಷಿಕನ ನೆರವಿನ ಬಡಗಿ, ಕುಂಬಾರ, ಕಮ್ಮಾರ, ...ಜಾರಿ, ಹರಿಕತೆಯವ, ಗುಮಾಸ್ತ ಮುಂತಾದವರಿರುತ್ತಾರೆ. ಕೃಷಿಕ, ಕುಂಬಾರ ...ತ್ಯಾದಿ ಜನಗಳ ವೃತ್ತಿ ಕೂಡ ವಂಶಪಾರಂಪರ್ಯವಾಗಿರುವುದರಿಂದ ಯಜಮಾನನ ...ನ ಅವನ ಮಕ್ಕಳಲ್ಲಿ, ಮಿಕ್ಕವರ ವೃತ್ತಿ ಅವರ ಮಕ್ಕಳಲ್ಲಿ ಮುಂದುವರೆಯುತ್ತದೆ.



ಇಂಥ ವ್ಯವಸ್ಥೆ ನಿಜಕ್ಕೂ ಆದರ್ಶ ವ್ಯವಸ್ಥೆಯಾದರೆ ಯಜಮಾನ ದೈಹಿಕವಾಗಿ, ...ನಸಿಕವಾಗಿ, ಮಿಕ್ಕೆಲ್ಲರಿಗಿಂತ ಶ್ರೇಷ್ಠನಾಗಿರಬೇಕು; ಆತನಿಗೆ ಸಾಮಾನ್ಯವಾಗಿ ತಗಲುವ ...ಂಪ್ಪು, ರೋಗ ಮುಂತಾದವು ಬರಕೂಡದು. ಆದರೆ ಹಾಗಾಗುವುದಿಲ್ಲ. ಕ್ರಮೇಣ ...ಜಮಾನ ಮಿಕ್ಕೆಲ್ಲರಂತೆ ಭಯ, ಗೊಂದಲದಿಂದ ತತ್ತರಿಸುತ್ತಿರುವುದು ತಿಳಿಯುತ್ತದೆ. ...ಜಮಾನನ ಸ್ಥಾನ ಎಲ್ಲರೂ ತಮ್ಮ ಮೌಢ್ಯದಲ್ಲಿ ಕೊಟ್ಟದ್ದು ಎಂಬುದು ...ಿಯುತ್ತದೆ.

ಇಷ್ಟಾದರೂ ಯಜಮಾನ ತನ್ನ ಸ್ಥಾನ ತನಗೆ ದೇವರು ಕೊಟ್ಟದ್ದು ಎಂದು ...ವಿಸುತ್ತಾನೆ; ತನ್ನ ಸ್ಥಾನವೇ ತನಗೆ ಜಾಡ್ಯ ಮತ್ತು ಬಂಧನವಾಗಿದ್ದರೂ ಆತ ಅದನ್ನು ...ಟ್ಟುಕೊಡುವುದಿಲ್ಲ. ಜನಸಾಮಾನ್ಯನಾದ ಕಾರ್ಮಿಕನ ಸ್ಥಿತಿಯೂ ಹಾಗೆಯೇ ಇರುತ್ತದೆ. ...ಜಮಾನನ ರಕ್ಷಣೆ ಮತ್ತು ಸಂಪ್ರದಾಯದ ಮಾರ್ಗದರ್ಶನ ಅವನಿಗೆ ಅಗತ್ಯವೆನ್ನಿಸುತ್ತದೆ; ...ದರೆ ಅದು ಉಸಿರುಗಟ್ಟಿಸುತ್ತದೆ. ತನಗೆ ಈ ಸಂಪ್ರದಾಯ ಮತ್ತು ಯಜಮಾನನಿಂದ ಬಿಡುಗಡೆಯಾಗದಿದ್ದರೆ, ತನಗೆ ...ಸ್ವಾತಂತ್ರ್ಯ ಸಿಗದಿದ್ದರೆ ತನ್ನ ವಿನಾಶ ನಿಶ್ಚಿತ ಅನ್ನಿಸುತ್ತದೆ. ಇದು ಸಾವು- ಬದುಕಿನ ಪ್ರಶ್ನೆಯಾಗಿ ಬೆಳೆದಾಗ ಯಜಮಾನ ...ತ್ತು ಸಂಪ್ರದಾಯದ ವಿರುದ್ಧ ಆತ ಸೊಲ್ಲೆತ್ತುವುದು ಅನಿವಾರ್ಯವಾಗುತ್ತದೆ.

ಇದು ಹಸಿದ ಹುಲಿ ಜಿಂಕೆಯ ಮೇಲೆ ಹಾರಿ ಕಿತ್ತುತಿನ್ನುವಷ್ಟೇ ಸಹಜ. ಆದರೆ ಮಾನವ ಸಮಾಜದಲ್ಲಿ ...ದಲಾವಣೆಯನ್ನು ಎದುರಿಸಬೇಕಾದಾಗ ಅನೇಕ ಬಗೆಯ ನೆನಪು, ರೋದನ ಉದ್ವೇಗವನ್ನು ನೋಡುತ್ತೇವೆ. ಬದಲಾವಣೆ ...ಿಸಿಯನ್ನುಂಟುಮಾಡುವುದರಿಂದ ಈ ಭಾವೋದ್ವೇಗ ಇರುತ್ತದೆ. ಯಜಮಾನನ ಯಾಜಮಾನಿಕೆ ಮುಗಿದು ...ಿಸಿಕೊಬ್ಬ ಕೆಲಸಗಾರನೂ ಸ್ವಾತಂತ್ರ್ಯ ಮತ್ತು ನೆಮ್ಮದಿ ಪಡೆಯುತ್ತಾನೆ; ಯಜಮಾನ ನಡೆಸುತ್ತಿದ್ದ ವ್ಯವಸ್ಥೆ ಇನ್ನೊಂದು ...ಗೆ ಕಾರಣವಾಗುವುದು ಸ್ವಾಭಾವಿಕ. ಅದು ಮನುಷ್ಯರು ತಮ್ಮನ್ನು ತಾವು ಸಜೀವಗೊಳಿಸಿಕೊಳ್ಳುವ ಪರಿ.

ಆದರೆ ಬರವಣಿಗೆಯ ಬಿಸಿ ಕಾವ್ಯಕ್ಕೆ ಬೇಕಾಗುವ ಬಿಸಿಯಾಗದೇ ಇರಬಹುದು. ಅದಕ್ಕೆ ಮತ್ತೆ ಹಾಡು ರಚಿಸುವ ಶಾಂತಿ, ಸಂತೋಷ ಬೇಕು; ಎಲ್ಲರನ್ನೂ ಪ್ರೀತಿಸುವ ವ್ಯವಧಾನ ಬೇಕು. ಆದ್ದರಿಂದಲೇ ಕ್ರಾಂತಿಕಾಲದ ಸಾಹಿತ್ಯ ವಕ್ರವಾಗಿರುವ ಸಾಧ್ಯತೆಯಿದೆ; ಕ್ರಾಂತಿ ಪಕ್ವವಾದ ಮೇಲೆ ಉತ್ತಮ ಸಾಹಿತ್ಯ ಸಾಧ್ಯವಾಗುತ್ತದೆ.

ಬಂಡಾಯದಲ್ಲಿ ತೊಡಗುವ ಪ್ರತಿಯೊಬ್ಬನಿಗೂ ಬಂಡಾಯ ಮತ್ತು ಬದಲಾವಣೆ- ಸಾವುಬದುಕಿನ ಪ್ರಶ್ನೆಯಾಗಿದ್ದಾಗ ಅದಕ್ಕೆ ಅರ್ಥ ಬರುತ್ತದೆ; ಹಾಗೆಯೇ ಬಂಡಾಯಗಾರನಿಗೆ ತಾನು (ಒಡೆದು) ಹೊಡೆದು ಬೀಳಿಸುತ್ತಿರುವ ವ್ಯವಸ್ಥೆ ಯಾವ ರೀತಿಯಲ್ಲಿ ಕೆಲಕಾಲವಾದರೂ ಜೀವನವನ್ನು ಪೊರೆದಿತ್ತು ಎಂಬ ಅರಿವಿರಬೇಕು. ಜೀವನ್ಮರಣದ ಪ್ರಶ್ನೆಯಾದಾಗಲೇ ಬಂಡಾಯ ಮನುಷ್ಯನಾಳದ ಮೌನ ಕೂಡ ಆಗುತ್ತದೆ; ಹಾಗಾದಾಗಲೇ ಅದು ಬಂಡಾಯಗಾರನ ಬೊಬ್ಬೆ, ಘೋಷಣೆಗಳಿಗೆ ಶಕ್ತಿ ಕೂಡ ಒದಗಿಸುತ್ತದೆ.

ಪ್ರತಿಭಟನೆ ಒಬ್ಬರನ್ನು ಪೆದ್ದನನ್ನಾಗಿಸ ಬಲ್ಲದು. ಪ್ರತಿಭಟಿಸುತ್ತಲೇ ಇರುವವ ಮಗುವಿಗೆ ಮುತ್ತು ಕೊಡುವ ಪ್ರೀತಿ ಕೂಡ ಇಲ್ಲದವನಾಗಬಹುದು. ಆದ್ದರಿಂದ 'ಪ್ರತಿಭಟನೆ' ಮತ್ತು 'ಎಚ್ಚರ' ಎಂಬ ಸ್ಥಿತಿಗಳ ವ್ಯತ್ಯಾಸವನ್ನು ಅವನು ಅರಿಯಬೇಕು. ಒಬ್ಬ ಎಚ್ಚರವಾಗಿದ್ದೂ ಸುಪ್ತಲೋಕವನ್ನು ಪ್ರವೇಶಿಸಬಲ್ಲ; ತನ್ನ ಸುತ್ತಣ ಜಡತ್ವವನ್ನರಿತು ಜೀವಂತಿಕೆಗಾಗಿ ಪ್ರಯತ್ನಿಸಬಲ್ಲ. ಆದರೆ ಪ್ರತಿಭಟನೆಯವನು ಒಂದೇ ಸ್ವರದಲ್ಲಿ ಉಳಿಯುವ ಅಪಾಯವಿದೆ.




ಸಾಹಿತ್ಯದಲ್ಲಿ ಇದು ಜೀವನ, ಸಂಪ್ರದಾಯ ಮತ್ತು ಹೊಸತನ ಎಲ್ಲವನ್ನೂ ಒಳಗೊಂಡ ಸಮಸ್ಯೆಯಾಗಿದೆ. ಜೀವನದಲ್ಲಿ ಮಹಾ ಗೊಡ್ಡು ವ್ಯಕ್ತಿಯಾಗಿದ್ದವ ಭಾಷೆಯಲ್ಲಿ ಕ್ರಾಂತಿಕಾರಿಯಾಗಲು ಸಾಧ್ಯವಿಲ್ಲ. ಇನ್ನೊಂದು ವಿಶೇಷವೇನೆಂದರೆ, ಅತಿ ವೇಗದ ಬದಲಾವಣೆಯ ವಿರುದ್ಧ ಕಣ್ಣಿಗೆ ಕಟ್ಟುವ ನಿರರ್ಥಕ ಆಧುನಿಕತೆಯ ವಿರುದ್ಧ ಪ್ರತಿಭಟಿಸುವವನು ಕೂಡ ಕ್ರಾಂತಿಕಾರಿ. ಎಲಿಯಟ್ ಎಂಬ ಸಂಪ್ರದಾಯವಾದಿ ಕ್ರಾಂತಿಕಾರಿಯಂತೆ ಕಂಡದ್ದು ಅದಕ್ಕೇ.

ಹೀಗೆ ಯೋಚಿಸುವಾಗ ನಾವು ಬಂಡಾಯ, ಅದರ ಅಗತ್ಯ ಮತ್ತು ಮಿತಿಗಳ ಬಗ್ಗೆ ಯೋಚಿಸುತ್ತಿರುತ್ತೇವೆ.

(ಚಿಕ್ಕಮಗಳೂರಿನ ಪತ್ರಿಕೆಯೊಂದಕ್ಕೆ ಕಳಿಸಿದ ಪುಟ್ಟ ಲೇಖನ. ಆ ಪತ್ರಿಕೆ ಅಚ್ಚು ಮಾಡಿದ್ದರಲ್ಲಿ ಲೆಕ್ಕವಿಲ್ಲದಷ್ಟು ತಪ್ಪುಗಳಿದ್ದುದರಿಂದ ಇಲ್ಲಿ ಸಂಕ್ಷಿಪ್ತಗೊಳಿಸಿ ಕೊಡುತ್ತಿದ್ದೇನೆ)

ಜನವರಿ 29, 1997

ಬೇಲಿ ಎದ್ದು ಹೊಲ ಮೇಯ್ತು



ಎಚ್.ಎಲ್. ಕೇಶವಮೂರ್ತಿ

ಅಣಕ

ಅಡಿ ಅಸ್ರುದುಕು ಅವಳೇ ಇಲ್ಲೈ, ಪುಳ್ಳೆ ಪೇರು ರಾಮಕೃಷ್ಣ ಅಂತ ತಮಿಳಿನಲ್ಲಿ ಒಂದು ಮಾತು ಇದೆ. ಇದರ ಅರ್ಥ ತಿಲೇ ಅನ್ನೋಕೆ ಹೆಂಡತೀಗೆ ಗತಿ ಇಲ್ಲ, ಮಗನ ಹೆಸರು ರಾಮಕೃಷ್ಣ ಅಂತ ಅಂತೆ. ಆಂಧ್ರಪ್ರದೇಶ



ಕೈದಿಗಳ ಪಾಡು ಈ ಮಾತಿನ ಹಾಗೆ ಆಗಿದೆಯಂತೆ. ಕೈದಿಗಳು ಅಂದರೆ ದಿಕ್ಕು ದೆಸೆ ಇಲ್ಲದ ಪರದೇಸಿಗಳಲ್ಲ, ಅವರಿಗೂ ಮನೆ, ಮಠ, ಸಂಸಾರ ಇರುತ್ತವೆ. ಸಾವುನೋವು ಇರುತ್ತವೆ. ಕಷ್ಟ ಸಂದರ್ಭಗಳಲ್ಲಿ ಶಿಕ್ಷೆಗೊಳಗಾದ ಕೈದಿಗಳಿಗೆ ಪರೋಲ್ ನೀಡುವ ವ್ಯವಸ್ಥೆ ಇದೆ. ಪಾಪ ಅವರೂ ಹೋಗಿ ಹೆಂಡತಿಮಕ್ಕಳು, ಬಂಧುಬಳಗದ ಜೊತೆ ಕಷ್ಟ ಸುಖ ಹಂಚಿಕೊಂಡು ಬರಲಿ ಅಂತಾವ. ಪರೋಲ್ ಪಡೆಯೋದು ಅಂದರೆ ಒಂದು **Hurdles race** ನಲ್ಲಿ ಗೆದ್ದು ಬಂದಂಗೆ. ಇರೋ ಅಡೆತಡೆಗಳನ್ನ ಹೆಂಗೋ ನಿಭಾಯಿಸಿ ಕೊನೆಯ ಹಂತಕ್ಕೆ ಬಂದರು ಅನ್ನಿ. ಅಲ್ಲಿ ಗೃಹ ಕಾರ್ಯದರ್ಶಿ ಸಾಹೇಬರ ಗುದ್ದಲಿ ಮಾರ್ಕು ಬೀಳಬೇಕು.

ಈಗ ಈ ಕೊನೆಹಂತದ್ದೇ ಅಲ್ಲಿನ ಕೈದಿಗಳಿಗೆ ಕಾಟಕೊಡುತ್ತಿದೆಯಂತೆ. ಯಾಕೆ ಅವನ ಬಾಯಿಗೂ ಏನಾದರೂ ಎಸೀಬೇಕ ಅಂದರೆ ಛೇ ಅಂತಹ ಸಣ್ಣ ಪುಟ್ಟದ್ದಕ್ಕೆಲ್ಲ ಕೈ ಚಾಚುವ ಆಸಾಮಿ ಅಲ್ಲವಂತೆ. ಮತ್ತೇನು ತೊಂದರೆ ಅಂದರೆ ಹೀಗೆ ಸಹಿಹಾಕಬೇಕಾದ ಸಾಹೇಬರೆ ಚಂಚಲಗುಡ ಜೈಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರಂತೆ!

ಅರೆ ಊರಿಗೆಲ್ಲ ಒಬ್ಬಳೇ ಪದ್ಮಾವತಿಯೆ. ಇವನು ಜೈಲಿಗೆ ಹೋದರೆ ಬೇರೆಯವರನ್ನ ಈ ಕಾರ್ಯನಿರ್ವಹಿಸಲು ನೇಮಿಸಬಹುದಲ್ಲಾ ಅಂದರೆ ನೇಮಿಸಬಹುದು. ಬಹುದು ಏನು ಬಂತು, ನೇಮಿಸಿಯೂ ಇದ್ದಾರೆ. ಆದರೆ ಈ ಸಾಹೇಬನಿಗೆ ಅನುಮಾನದ ರೋಗ ಅಂತೆ. ಕೈಕೆಳಗಿನವರನ್ನ ನಂಬೋದೆ ಇಲ್ವಂತೆ. ಹಿಂದಿನ ಸಾಹೇಬ ಜೈಲಿನಲ್ಲಿ ವಿಶ್ರಾಂತಿ ಪಡೀತಿರೋದಕ್ಕೂ ಇವರೇ ಕಾರಣ ಅನ್ನೊ ಅನುಮಾನವೋ ಏನೋ. ಹೊಸ ಸಾಹೇಬ ಬಂದವ್ನೆ ಒಳ್ಳೇ ಸಮಯ ಸಿಕ್ಕದೆ ಅಂತ ಯಾರು ಯಾರನ್ನೋ ಪರೋಲ್ ಮೇಲೆ ಕಳುಹಿಸಿ ತನ್ನ ತಲೆಗೆ ತಂದಾರು ಅನ್ನೊ ಗುಮಾನಿ ಇರಬೇಕು. ಯಾವ ಹೊಸ ಪರೇಲ್ ಅರ್ಜೀನೂ ತಿರುಗಿಯೂ ನೋಡುತ್ತಿಲ್ಲವಂತೆ!

ಇದಪ್ಪ ಆಡಳಿತ ಅಂದರೆ!

ಯೇನ ಕೇನ ಪ್ರಕಾರೇಣ......

ಕರ್ನಾಟಕದ ಮೂರು ವಿಕೆಟ್ ಉರುಳಿತು.

ಯಾತಕ್ಕಾಗಿ ಈ ಶಿಕ್ಷೆ?

ಅಶ್ಲೀಲ ಚಿತ್ರ ನೋಡಿದ್ದಕ್ಕಾಗಿ!

ಅಶ್ಲೀಲ ಚಿತ್ರ ವೀಕ್ಷಣೆಯೇ ಅಪರಾಧವೆ?

ಸದನ ಕಲಾಪ ನಡೆಯುವಾಗ ನೋಡಿದ್ದು ಅಪರಾಧ.

ಅಂದರೆ ಕರ್ತವ್ಯಲೋಪ ಎಸಗಿದ್ದೆ?

ಹೌದು.

ಅಲ್ಲಿಗೆ ಅಶ್ಲೀಲ ಚಿತ್ರ ವೀಕ್ಷಣೆ ಅಪರಾಧ ಅಲ್ಲ ಅಂದ ಹಾಗಾಯಿತು?

ಅಲ್ಲ ಅಲ್ಲ, ಸದನ ಎಂದರೆ ದೇಗುಲ

ತಿರುಪತಿ ದೇವಾಲಯ ಇದ್ದಂತೆ?

ಹೌದು. ಅಲ್ಲಿ ಅಂತಹದ್ದರ ವೀಕ್ಷಣೆ ಅಪರಾಧ.

ತಿರುಪತಿ ದೇವಸ್ಥಾನದಲ್ಲಿ ಇದೇ ಕೆಲಸ ಮಾಡಿದ್ದರೆ ಇಂತಹದ್ದೇ

ಶಿಕ್ಷೆ ಇರುತ್ತಿತ್ತೆ?

ಸಂಸ್ಕೃತಿ ರಕ್ಷಕರನ್ನು ಇಂತಹ ಗೊಂದಲ ಕಾಡುತ್ತಿದೆಯಂತೆ!


ಅವರ ದುಃಖದ ಪರಿಯ ಏನೆಂದು ಹೇಳಲಿ.

'ಉಡುಪೇ ರೇಪಿಗೆ ಮೂಲ' ಎಂಬುದು ಅವರು ನಂಬಿರುವ ಸಿದ್ಧಾಂತ.

ಮಹಿಳಾ ಮತ್ತು ಮಕ್ಕಳ ಸಚಿವರೂ ಇದನ್ನೇ ಪ್ರತಿಪಾದಿಸಿದ್ದರು. ತಮ್ಮ ಸಿದ್ಧಾಂತ ಪುಷ್ಟೀಕರಿಸಲು ಸನ್ಮಾನ್ಯರು ಪ್ರಾಯೋಗಿಕ ಪರೀಕ್ಷೆ ನಡೆಸುತ್ತಿದ್ದರು. ತಮ್ಮನ್ನು ತಾವೇ ಪರೀಕ್ಷೆಗೆ ಒಡ್ಡಿಕೊಂಡದ್ದು ಅವರ ದೊಡ್ಡತನ. ಸ್ತ್ರೀಯ ವಿವಿಧ ಭಂಗಿಗಳು ಪುರುಷ ಲೈಂಗಿಕ ಗ್ರಂಥಿಗಳ ಮೇಲೆ ಉಂಟುಮಾಡುವ ಪರಿಣಾಮವೇನು ಎಂಬುದರ ಪರೀಕ್ಷೆಯಲ್ಲಿ ಮಗ್ನರಾಗಿದ್ದರು. ತಮ್ಮ ಪ್ರಾಯೋಗಿಕ ಪರೀಕ್ಷೆಯ ಫಲಿತಾಂಶವನ್ನು ಇತರರೊಡನೆ ಹಂಚಿಕೊಳ್ಳುತ್ತಿದ್ದರು. ಅದನ್ನೇ ಅಶ್ಲೀಲ ಚಿತ್ರ ವೀಕ್ಷಣೆ ಎಂದು ಬಿಂಬಿಸಿ ಅವಮಾನ ಮಾಡುತ್ತಿದ್ದಾರಲ್ಲ ಎಂಬುದು ಅವರ ಚಿಂತೆಯಾಗಿತ್ತು.

ನಾನು ಅವರೊಡನೆ ಸಹಮತ ತೋರಿಸಿದೆ. 'ಛೇ ಹೀಗಾಗಬಾರದಿತ್ತು' ಎಂದು ಸಂತಾಪ ಸೂಚಿಸಿ ಬರುತ್ತಿದ್ದೆ. ದಾರಿಯಲ್ಲಿ ಓರ್ವ ಜೋಳಿಗೆಯವರು ಎದುರಾದರು. ನನ್ನ ಬಳಿ ಬಂದ ತಕ್ಷಣ 'ಪುರುಷ

ಘನಂದಾರಿ ಕೆಲಸಗಳಿಂದ ಬಿಜೆಪಿ ಮಾನ-ಮರ್ಯಾದೆ ಬಲು ಎತ್ತರಕ್ಕೇರಿದೆ!




ಬಿಜೆಪಿ ಆಡಳಿತಕ್ಕೆ ಬಂದಂದಿನಿಂದ ಜಾತಿಗಳ ಪುನರುತ್ಥಾನ ಆಗಿದೆ. ಕೋಮು ದಳ್ಳುರಿಗೆ ಬಿಸಿ ತುಪ್ಪ ಸವರಲಾಗಿದೆ. ಜನರಿಗೆ ಅರೆಗಳಿಗೆ ನಿದ್ದೆಯಿಲ್ಲ, ಕಮಲದ ಮುಳ್ಳುಗಳು ಪರಚಿ ರಕ್ತಗಾಯಗಳೇ ತುಂಬಿಹೋಗಿವೆ. ಕೂಲಂಕಷವಾಗಿ ತಾಳೆಹಾಕಿದಾಗ ಮುಖ್ಯಮಂತ್ರಿಯಿಂದ ಹಿಡಿದು ಎಲ್ಲಾ ಸಚಿವರಿಗೆ ತಿಂಗಳಿಗೆ ಕನಿಷ್ಠ ಹಗರಣಗಳನ್ನು ಸೃಷ್ಟಿಸುವಂತೆ ಯಾರೋ ಆದೇಶಿಸಿರುವಂತಿದೆ. ಬೆಟ್ಟಗುಡ್ಡಗಳನ್ನೇ ನುಂಗಿದ ಗಣಿಗಳ್ಳರು, ಸರ್ಕಾರಿ ಆಸ್ತಿಯನ್ನೇ ಲಪಟಾಯಿಸಿದ ನಯವಂಚಕರು, ಸ್ನೇಹಿತನ ಹೆಂಡತಿಯ ಮೇಲೆಯೇ ಅತ್ಯಾಚಾರವೆಸಗಿದ ದ್ರೋಹಿಗಳು, ಸದನದಲ್ಲೇ ಕುಳಿತು ಅಶ್ಲೀಲ ಚಿತ್ರ ನೋಡಿದ ಸಚಿವರು ಎಲ್ಲಿ ಸಿಗುತ್ತಾರೆ ಎಂದರೆ ಸೀದಾ ಕರ್ನಾಟಕದ ಬಿಜೆಪಿ ಪಕ್ಷದ ಕಡೆಗೇ ಯಾರಾದರೂ ಬೊಟ್ಟು ಮಾಡಿ ತೋರಿಸಬಹುದು. ಇಂತಹ ಘನಂದಾರಿ ಕೆಲಸಗಳ ಮೂಲಕ ಬಿಜೆಪಿ ತನ್ನ ಮಾನ-ಮರ್ಯಾದೆಯನ್ನು ಬಹು ಎತ್ತರಕ್ಕೆ ಏರಿಸಿಕೊಂಡಿದೆ.

ಎಂಜಲೆಲೆಯ ಮೇಲೆ ಉರುಳಿಸುವುದನ್ನೇ ಕಾಯಕ ಮಾಡಿಕೊಂಡ ಮನುವಾದಿಗಳಿಗೆ ಸಲಾಂ ಹೊಡೆಯುತ್ತಾ, ಜನರ ಶ್ರಮದ ಕೋಟಿ ಕೋಟಿ ಹಣವನ್ನು ಮಠಮಾನ್ಯಗಳಿಗೆ ಕೊಡುತ್ತಾ ಆನೆ ನಡೆದದ್ದೇ ದಾರಿ ಎನ್ನುವಂತೆ ನಡೆಯುತ್ತಿರುವ ಬಿಜೆಪಿ ಪಕ್ಷಕ್ಕೆ ಜನರ ಬಗೆಗೆ ಕನಿಷ್ಠ ಕಾಳಜಿ ಇದೆಯಾ? ಇಂತಹ ಕಾಳಜಿ ಇದ್ದಿದ್ದರೆ ಪ್ರಜಾ ದೇಗುಲವಾದ ಸದನದಲ್ಲಿ ಲಜ್ಜೆಗೇಡಿ ಲಕ್ಷ್ಮಣ ಸವದಿ, ಸಿ.ಸಿ.ಪಾಟೀಲ್, ಕೃಷ್ಣ ಪಾಲೇಮಾರ್ ಅಶ್ಲೀಲ ಚಿತ್ರಗಳನ್ನು ನೋಡಿ ಪ್ರಪಂಚಕ್ಕೆ ನಾಡಿನ ಮಾನ ಹರಾಜು ಹಾಕುತ್ತಿರಲಿಲ್ಲ.

ಉಗುರಿಗೆ ಹೋಗುವ ಘಟನೆಗೂ ತ್ರಿಶೂಲ ಹಿಡಿದು ನಿಲ್ಲುತ್ತಿದ್ದ ಆರ್.ಎಸ್.ಎಸ್. ಹಾಗೂ ಇನ್ನಿತರ ಹಿಂದೂಪರ ಸಂಘಟನೆಗಳು ಅವರದೇ ಪಕ್ಷದ ಬಿಳಲುಗಳು ಸದನದಲ್ಲೇ ಅಶ್ಲೀಲ ಚಿತ್ರ ವೀಕ್ಷಿಸಿ ಸಿಕ್ಕಿಬಿದ್ದಿರುವಾಗ ಮುಕುಳಿ, ಬಾಯಿ ಮುಚ್ಚಿಕೊಂಡಿರುವುದೇಕೆ ಎನ್ನುವುದು ಗೊತ್ತಾಗುತ್ತಿಲ್ಲ. ಇವರ ಢೋಂಗಿ ದೇಶಭಕ್ತಿ ಮಹಿಳೆಯರ ಬಗೆಗಿನ ಕಾಳಜಿ ಜಗಜ್ಜಾಹೀರಾಗಿದೆ. ಸದನಕ್ಕೆ ಅಪಮಾನ ಮಾಡಿ, ಸಂವಿಧಾನದ ಮೂಲಾಶಯಗಳಿಗೆ ಬೆಂಕಿಯಿಟ್ಟಿರುವ ಆರೋಪಿ ಶಾಸಕರಿಗೆ ಜೈಲಿನ ರುಚಿ ತೋರಿಸಬೇಕಿದೆ. ಇಲ್ಲದಿದ್ದರೆ ಬಡವರ ಶ್ರಮದ ಬೆವರುಗಳು ಗೋಲಿಗಳಾಗಿ ಸಿಡಿಯುವುದಂತೂ ಗ್ಯಾರಂಟಿ.

- ಬಸವರಾಜ ಹಳ್ಳಿ ಹಸ್ಮಾಲ್

ಗೌರಿ ಮೇಡಮ್ ಮತ್ತು ಅವರ ತಂಡಕ್ಕೆ ಅಭಿನಂದನೆಗಳು. ಈ ವಾರದ ಪತ್ರಿಕೆ ತುಂಬಾ ಚೆನ್ನಾಗಿದೆ. ತಲೆಹಿಡುಕರ ಮತ್ತು ಮಿಂಡರ ಗುಂಪಾದ ಸಂಘ ಪರಿವಾರದ ಸತ್ಯಗಳನ್ನು ಪತ್ರಿಕೆ ಚೆನ್ನಾಗಿ ತೆರೆದಿಟ್ಟಿದೆ.



ಅಂದಹಾಗೆ ವಿಧಾನಸಭೆಯಲ್ಲಿ ಕೂತು ಬ್ಲೂಫಿಲಂ ನೋಡುವ ಮೂಲಕ ರಾಜ್ಯದ ಮಾನ, ಮರ್ಯಾದೆಯನ್ನು ಬಿಜೆಪಿಯ ಮೂವರು ಸಚಿವರು ಜಾಗತಿಕ ಮಟ್ಟದಲ್ಲಿ ಹರಾಜು ಹಾಕಿರುವಾಗ ರವಿಶಂಕರ್ 'ಗುರೂಜಿ', ಪೇಜಾವರ ಸ್ವಾಮಿ ಮತ್ತು ಬಾಬಾ ರಾಮ್‌ದೇವ್ ಅವರೆಲ್ಲ ಯಾಕೆ ತುಟಿಪಿಟಕ್ ಎನ್ನದೆ ಸುಮ್ಮನಿದ್ದಾರೆ?

ಸದಾ ಸಂಸ್ಕೃತಿ, ನೈತಿಕತೆ, ಆರ್ಟ್ ಆಫ್ ಲಿವಿಂಗ್, ಯೋಗ ಇತ್ಯಾದಿಗಳ ಬಗ್ಗೆ ಮಾತನಾಡುವ ಇವರೆಲ್ಲರೊ ಇಷ್ಟು ಹೊತ್ತಿಗೆ ಈ ಮೂವರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



'ಕಾಮುಕ' ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳಬೇಕಿತ್ತಲ್ಲವೇ?

- ರವಿ, ಹಾಸನ

ಆರೆಸ್ಸೆಸ್ಸಿನ ಧೂರ್ತತೆ ಹಾಗೂ ಕ್ರೂರ ಭಂಡತನ ಯಾವ ಮಟ್ಟದ್ದು ಎಂದರೆ ಇವರು ತಮ್ಮ ವಿರುದ್ಧ ಏಳುವ ಪ್ರಬಲ ಟೀಕೆಯನ್ನೂ ನಿರ್ಲಜ್ಜ ಮೆಚ್ಚುಗೆಯಾಗಿ ಪರಿವರ್ತಿಸಿಕೊಳ್ಳಬಲ್ಲರು. ಹೀಗೆ ಮಾಡಬಲ್ಲ 'ಅಪೂರ್ವ ಶಿಕ್ಷಣ' ಆರೆಸ್ಸೆಸ್ ಶಾಖೆಯಲ್ಲಿ ಮಾತ್ರ ಸಿಗುತ್ತೆ.

ಹಿಟ್ಲರ್‌ನ ನಾಜಿಗಳು ಬೇರೆಯವರಿಗೆಲ್ಲ ನೀತಿಬೋಧನೆ ಮಾಡುತ್ತಿದ್ದರು. ಆದರೆ ತಮ್ಮ ವಿಷಯಕ್ಕೆ ಬಂದಾಗ ಎಲ್ಲವನ್ನು ಗಾಳಿಗೆ ತೂರುತ್ತಿದ್ದರು. ಆರೆಸ್ಸೆಸ್ಸಿನವರು ಎಷ್ಟಾದರೂ ಹಿಟ್ಲರ್‌ನ ಹಿಂದೂ ಕ್ಯಾಟೆಗರಿ ಅವರಲ್ಲವೇ?



ಕರ್ನಾಟಕದ ಹೆಸರನ್ನು ವಿಶ್ವ ಪ್ರಸಿದ್ಧಿಗೊಳಿಸಿದ ಈ ಪಾಲೇಮಾರ್, ಸಿ.ಸಿ.ಪಾಟಿಲ್, ಲಕ್ಷ್ಮಣ ಸವದಿಯಲ್ಲಿ ಒಬ್ಬರು ಆರೆಸ್ಸೆಸ್ಸಿನ ರಾಷ್ಟ್ರೀಯ ಅಧ್ಯಕ್ಷನಾಗಿ, ಇನ್ನೊಬ್ಬರು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷನಾಗಿ, ಮತ್ತೊಬ್ಬ ಕೇಂದ್ರದಲ್ಲಿ ಪ್ರಧಾನಿ ಆದರೆ ಅವರೆಲ್ಲರೂ ಜೊತೆಗೂಡಿ ನಮ್ಮ ದೇಶದಲ್ಲಿ ನಿತ್ಯ ಕಾಮನ ಹಬ್ಬವನ್ನು ಆಚರಿಸುತ್ತಾರೇನೋ. ಥೂ... ಇವರಿಗೆ ನಾಚಿಕೆ ಆಗಬೇಕು.

- ತೀವ್ರ ಮುಜುಗರವನ್ನು ಅನುಭವಿಸುತ್ತಿರುವ ಓರ್ವ ಕನ್ನಡಿಗ ಮತ್ತು ಭಾರತೀಯ

ರಾಮನ ಭಕ್ತರು ಮತ್ತು ಭಜರಂಗಿಗಳು ದ್ರೌಪದಿಯ ಸೀರೆಯನ್ನು ಸೆಳೆದು ಆನಂದಿಸುತ್ತಿದ್ದರೆ ಪೇಜಾವರ ಸ್ವಾಮಿ ಯಾಕೆ ಇನ್ನೂ ನಿದ್ದೆಯಲ್ಲಿದ್ದಾರೆ?

- ಎ.ಜೆ.ಸೂರ್ಯವಂಶಿ, ಎಸ್‌ಎಂಎಸ್ ಮೂಲಕ

ಅವತ್ತು ಎಚ್.ಡಿ. ಕುಮಾರಸ್ವಾಮಿಯವರು ಒಪ್ಪಂದದ ಪ್ರಕಾರ ಯಡಿಯೂರಪ್ಪನವರಿಗೆ ಅಧಿಕಾರ ಹಸ್ತಾಂತರ ಮಾಡಲಿಲ್ಲ ಎಂದು ಬಿಜೆಪಿಗಳು ರಾಜ್ಯದ ಸಮಸ್ತ ಜನರ ಮುಂದೆ "ನಮಗೆ ಅವರು ಹೀಗೆ ಮಾಡಿದರೆ, ಹಾಗೆ ಮಾಡಿದರು, ಮೋಸ ಮಾಡಿದರು" ಎಂದೆಲ್ಲ ಅರಚಾಡಿದ್ದರು. ಅಷ್ಟೇ ಅಲ್ಲ "ನಮಗೆ ಅಧಿಕಾರ ಕೊಟ್ಟರೆ ನಾವು ಇಲ್ಲಿ ರಾಮರಾಜ್ಯ ಕಟ್ಟುತ್ತೇವೆ. ನಮಗೆ ಒಂದು ಅವಕಾಶ ಮಾಡಿಕೊಡಿ, ನಾವು ಹಾಂಗೆ, ಹಿಂಗೆ" ಎಂದೆಲ್ಲ ಹೇಳಿದ್ದರು.

ಆದರೆ ಈಗ ಈ ಬಿಜೆಪಿಗಳು ಮಾಡುತ್ತಿರುವುದು ಏನನ್ನು? "ಬೇರೆ ಪಕ್ಷಗಳಲ್ಲಿ ಭ್ರಷ್ಟರಿಲ್ಲವೆ? ಕಳ್ಳರಿಲ್ಲವೆ?" ಎಂದು ತಮ್ಮ ಕಳ್ಳತನವನ್ನು ಸಮರ್ಥಿಸಿಕೊಂಡಿದ್ದಲ್ಲದೆ ತಾವು ಇತರರಿಗಿಂತ ಅತಿ ಭ್ರಷ್ಟರು, ಅತಿ ನೀಚರು, ಕಳ್ಳ ನಾಯಕರು ಎಂಬುದನ್ನು ಪ್ರತಿದಿನ ಸಾಬೀತುಪಡಿಸುತ್ತಿದ್ದಾರೆ. ಇಂತಹವರಿಗೆ ಮತ ನೀಡಿದ್ದ ನಾವು ಇವತ್ತು ತಲೆ ಚಚ್ಚಿಕೊಳ್ಳುವಂತಾಗಿದೆ.

ಸದನದಲ್ಲಿ ಅಶ್ಲೀಲ ಚಿತ್ರಗಳನ್ನು ನೋಡಿದ ಪಾಲೇಮಾರ್, ಪಾಟೀಲ್ ಮತು ಸವದಿ ಇಡೀ ರಾಜ್ಯಕ್ಕೆ ಅವಮಾನ ಮಾಡಿದ್ದಾರೆ. ಅವರಿಗೆ ಕಾನೂನಿನ ಪ್ರಕಾರ ಸೂಕ್ತ ಶಿಕ್ಷೆ ಆಗಬೇಕು.

- ಈರೇಶ್ ಕುಮಾರ್.ಎಸ್.ಎಂ, ಬಳ್ಳಾರಿ

ನಿಮ್ಮ ಪತ್ರಿಕೆ ಪ್ರಾರಂಭವಾದಾಗಿನಿಂದಲೂ ಕಾಯಂ ಓದುಗ ಹಾಗೂ ತಮ್ಮ ಪತ್ರಿಕೆಯ ನೆಚ್ಚಿನ ಅಭಿಮಾನಿ. ತಮ್ಮ ಪತ್ರಿಕೆಯ ಮುದ್ರಣ ಇತ್ತೀಚಿನ ದಿನಗಳಲ್ಲಿ ತುಂಬಾ ದೋಷದಿಂದ ಕೂಡಿರುತ್ತದೆ ಹಾಗೂ ವರ್ಣಚಿತ್ರಗಳು ಸರಿಯಾಗಿ ಕಾಣುವುದಿಲ್ಲ, ಮುಂದಿನ ಮುದ್ರಿಕೆಯಲ್ಲಿ ಎಲ್ಲವೂ ಸರಿಯಾಗಲಿವೆ ಎಂದು ಭಾವಿಸುತ್ತೇನೆ.

ಸುಮಾರು ಎಂಟು ವರ್ಷಗಳ ಹಿಂದೆ ತಾವು ಹಾಗೂ ಚಂದನ್ ಗೌಡ ನಮ್ಮ ತೋಟಕ್ಕೆ ಬಂದು ಆತ್ಮೀಯವಾಗಿ ಮಾತನಾಡಿದ್ದು, ನಮ್ಮ ಆತಿಥ್ಯ ಸ್ವೀಕರಿಸಿದ್ದು ಇನ್ನೂ ಹಚ್ಚಹಸಿರಾಗಿದೆ.

"ದೇವೆರಿ' ಮಂಜನ ಜರ್ಮನಿಯಾನ' ಲೇಖನ ಓದಿ ತುಂಬಾ ಖುಷಿಯಾಯಿತು. ಮಂಜನ ಪ್ರತಿಭೆಯನ್ನು ಗುರುತಿಸಿದ ಕವಿತಾ ಲಂಕೇಶ್ ಅವರಿಗೆ ನನ್ನ ಅನಂತ ಧನ್ಯವಾದಗಳು. ಜರ್ಮನಿಯಲ್ಲಿ ಮಂಜನಿಗೆ ಯಶಸ್ಸು ದೊರೆಯಲಿ, ಮಂಜುನ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸುತ್ತೇನೆ.

- ದಿನೇಶ್ ಗುಡ್ಡಮೂರು, ಆಲ್ದೂರು, ಚಿಕ್ಕಮಗಳೂರು

ಾಟಕಕ್ಕೆ ಜಯವಾಗಲಿ' ಎಂದರು. ಸುತ್ತ ಮುತ್ತ ನೋಡಿದೆ. ಯಾರೂ ಲ್ಲ. 'ನಿಮಗೇರಿ ಹೇಳಿದ್ದು' ಅಂದರು. ಮುಖಮುಖ ನೋಡಿದೆ. ಮ್ಮಂತಹವರನ್ನೆಲ್ಲ ಪುರುಷ ಸಿಂಹ ಮಾಡಿದ್ದಾರೆ ಕಣ್ರೀ' ಅಂದರು. ರ್ಣವಾಗಲಿಲ್ಲ ಸ್ವಾಮಿ' ಅಂದೆ. ನನ್ನ ಅಜ್ಞಾನಕ್ಕಾಗಿ ಮರುಗಿದರು. ಪಂಚದಾದ್ಯಂತ ನಮ್ಮ ರಾಜ್ಯದ ಹೆಸರು ಮೆರೀತ ಇದೆ ಕಣ್ರೆ' ಅಂದರು. ಾಟಕ ಅಂದರೆ ನಮ್ಮ ದೇಶದಲ್ಲೇ ಲಕ್ಷಾಂತರ ಜನರಿಗೆ ಗೊತ್ತಿಲ್ಲ, ಇನ್ನು ಪಂಚಕ್ಕೆಲ್ಲ ತಿಳೀತು ಅಂದರೆ ಸಾಹಸದ ಕೆಲಸವೇ ಸರಿ. ಸಂತೋಷ ಯಿತು. 'ಹೇಗಾಯಿತು ಸ್ವಾಮಿ ಈ ಪವಾಡ' ಅಂತ ಕೇಳಿದೆ. 'ಲೈಂಗಿಕ ರಣ ಕಣ್ರೀ ಲೈಂಗಿಕ ಹಗರಣ' ಅಂತ ಎದೆ ಉಬ್ಬಿಸಿಕೊಂಡು 'ಎಲ್ಲ ಕಡೆ ್ದಿ ಆಗಿದೆ ಕಣ್ರೆ' ಅಂದರು. ಮುಖ ಮುಚ್ಚಿಕೊಳ್ಳುವಂತಹ ಕೆಲಸಕ್ಕೇ ಹೀಗೆ ಾಡುತ್ತಾ ಇದಾರಲ್ಲ ಈ ಸ್ವಾಮಿಗಳು ಅನ್ನಿಸಿತು. ಅದನ್ನೇ ಹೇಳಿದೆ. ಮಗೆ ಸಂಸತ ಗೊತ್ತೆ' ಅಂದರು. 'ಇಲ್ಲ' ಅಂತ ಇರುವ ವಿಷಯ ತಿಳಿಸಿದೆ. ದಕ್ಕೇ ಭೈರಪ್ಪನೋರು ಶಾಲೆಗಳಲ್ಲಿ ಸಂಸ್ಕೃತ ಕಲಿಕೆ ಕಡ್ಡಾಯ ಮಾಡಬೇಕು ರೋದು' ಅಂದರು. ಅವರು ಯಾಕೆ ಹಾಗೆ ಅಂದರೊ? ಇವರು ಏನು ಮಕೊಂಡರೋ ಒಂದೂ ತಿಳಿಯಲಿಲ್ಲ, ನನ್ನ ಮುಖದ ಪೆದ್ದು ಕಳೆ ಎದ್ದು ತಿರಬೇಕು. 'ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಜನ' ಅಂದರು. ಾದರೇನು ಅಂತ ಕೇಳಲಿಲ್ಲ, ಅವರು ಹೇಳಲಿಲ್ಲ, ಸಂಸ್ಕೃತದಲ್ಲಿ ಿದ್ದಲ್ಲವಾ. ಸತ್ಯವೇ ಇರಬೇಕು ಅಂದುಕೊಂಡೆ!

ಭೇ ಪ್ರಪಂಚದಲ್ಲೆಲ್ಲ ಕರ್ನಾಟಕದ ಹೆಸರು ಹರಿದಾಡುವಂತಹ ಪುಣ್ಯ ರ್ಯ ಮಾಡಿರೋ ಮಂತ್ರಿಗಳನ್ನೇ ಜಗದ ಜನವೆಲ್ಲ ಆಡಿಕೊಂಡು ತ್ತಾ ಬಿದ್ದದಲ್ಲಾ ವಸಿನಾದ್ರೂ ಮಾನಮರ್ಯಾದೆ ಬ್ಯಾಡವಾ ಅಂತೀನಿ. ಲ್ಲ ಕಟ್ಟಿಕೊಂಡ ಹೆಂಡ್ತಿ ಎಲ್ಲೋ ಕೊಳೆಯಾಕೆ ಬಿಟ್ಟು ಾವುಯಾವುದೋ ಹೆಂಗಸರನ್ನ ಸರ್ಕಾರ ಕೊಟ್ಟಿರೋ ಮನೇಲಿ ಬಿಟ್ಟು ಮಜಾಮಾಡ್ತಾ ಅವ್ರೆ ಅಂತಾರಲ್ಲ ಇದು ಯಾರಾದರೂ ್ಯಾದಸ್ತರು ಆಡೋ ಮಾತ. ಪಾಪ ಮಂತ್ರಿಗಳು ಪರಂಪರೆಯಲ್ಲಿ ುಖೆ ಇರೋರು. ಅಲ್ಲಿ ಏನು ಹೇಳದೆ ಅಂದ್ರೆ 'ವೇಶ್ಯಾದರ್ಶನಂ ಪಾಪ ಾಶನಂ' ಅಂದದೆ. ಮಾಡಿದ ಪಾಪವ ಕಳ್ಕೋಬೇಕು ಅಂದ್ರೆ ಶ್ಯೆಯರ ಮೊಕ ನೋಡಬೇಕು ಅಂತ ತಾನೆಯ ಹೇಳಿರೋದು. ಂತ್ರಿಗಳು ಅಂದ್ಮೇಲೆ ಪುರುಸೊತ್ತು ಅಂತ ಎಲ್ಲಿರ್ತದೆ. ಅದ್ಕೇಯ ದಿನಾ ತೋರ ದರ್ಶನ ತಗೋಬೇಕು ಅಂತಾವ ಮನೇಲೇ ಇಟ್ಕಂಡವ್ರೆ. ಸ ಅರೀದ ಮುಖ್ಯಗಳು ಇದೇ ಬೋ ತೆಪ್ಪು ಅಂತ ಆಡ್ತಾ ಬಿದ್ದಾವಲ್ಲ ವರಿಗೆ ಕರಿ ನಾಗ ಕಡೀದೆ ಬುಟ್ಟಾತಾ.....

❖

ಕಬ್ಬಿಣ ಕದ್ದರು ಬೆಳ್ಳಾರಿಯಲ್ಲಿ,

ಚೆಡ್ಡಿ ತೊಟ್ಟರು ಹುಬ್ಬಳ್ಳಿಯಲ್ಲಿ,

ಹಾರಿಸಿದರು ಬಾವುಟ ಸಿಂದಗಿಯಲ್ಲಿ,

ಭೂಮಿ ಕಬಳಿಸಿದರು ಕರ್ನಾಟಕದಲ್ಲಿ,

ಸೆಕ್ಸ್ ಪಾರ್ಟಿ ಮಾಡಿಸಿದರು ಸೇಂಟ್ ಮೇರೀಸ್‌ನಲ್ಲಿ,

ಕದ್ದು ನೋಡಿದರು ಅಸೆಂಬ್ಲಿಯಲ್ಲಿ,

ಬಿಡಿಸಿ ಈ ಒಗಟ, ಯಾರಿವರು ಹೇಳಿ!

- ಎಸ್‌ಎಂಎಸ್ ಮೂಲಕ

ಬಳ್ಳಾರಿಯಿಂದ ಬೆಂಗಳೂರಿಗೆ ವಲಸೆ ಬಂದು ಕೂಲಿಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ದಂಪತಿಗಳ ಆರು ವರ್ಷದ ಎಳೆ ಕಂದಮ್ಮನ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣವು ನಾಗರಿಕ ಸಮಾಜಕ್ಕೆ ಕಳಂಕತರುವ ವಿಷಯ.

ಇತರರಿಗೆಂದು ಬಹು ಮಹಡಿಗಳಿರುವ ಕಟ್ಟಡಗಳನ್ನು ಕಟ್ಟುವ ಮಂದಿ ತಮ್ಮ ತಲೆಯ ಮೇಲೆ ಒಂದು ಸೂರಿಲ್ಲದೆ, ವಿವಿಧ ಬವಣೆಗಳನ್ನು ಸಹಿಸಿ, ಒಂದು ಹೊತ್ತಿನ ಕೂಳಿಗಾಗಿ, ಒಂದು ಚಿಕ್ಕ ಕನಸಿನ ಸಾಕಾರಕ್ಕಾಗಿ ದೂರದೂರಿಗೆ ಬಂದರೆ ಇಲ್ಲಿನ ದುಷ್ಟ ಶಕ್ತಿಗಳು ಅಂತಹವರ ಜೀವಕ್ಕೂ ಸಂಚಕಾರ ತರುತ್ತವೆ.

ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಇದ್ದರೂ ತಮ್ಮ 'ವಿವಿಧ ತೀಟೆ'ಗಳನ್ನು ಈಡೇರಿಸಿಕೊಳ್ಳುವುದರಲ್ಲೇ ಮಗ್ನರಾಗಿರುವ ಆಳುವ ಮಂದಿಗೆ ಜನರ ನೋವುಗಳನ್ನು ನಿವಾರಿಸಲು ಸಮಯವಾದರೂ ಎಲ್ಲಿಂದ ಸಿಗಬೇಕು?

- ಎನ್. ಶರವಣ, ಬೆಂಗಳೂರು




ಕೆಲ ಢೋಂಗಿ ದೇಶಭಕ್ತರು ಹಾಗೂ ಹೇಡಿ ಚೆಡ್ಡಿಗಳು ಈಗ ಒಂದು ಎಸ್‌ಎಂಎಸ್‌ಅನ್ನು ಎಲ್ಲರಿಗೆ ರವಾನಿಸುತ್ತಿದ್ದಾರೆ. ದುರದೃಷ್ಟವಶಾತ್ ಆ ಎಸ್‌ಎಂಎಸ್‌ನ ಅಸಲೀಯತ್ತು ಗೊತ್ತಿಲ್ಲದವರು ಅದನ್ನು ತಮ್ಮ ಮಿತ್ರರಿಗೆ ಫಾರ್ವರ್ಡ್ ಮಾಡುತ್ತಿದ್ದಾರೆ.

ಆ ಎಸ್‌ಎಂಎಸ್‌ನಲ್ಲಿ ಹೀಗೊಂದು ಸುಳ್ಳನ್ನು ಹೇಳಲಾಗಿದೆ: "ನಮ್ಮ ಕ್ರಾಂತಿಕಾರಿ ನಾಯಕ ಭಗತ್ ಸಿಂಗ್ ಅವರನ್ನು ಬ್ರಿಟಿಷರು 1931ರ ಫೆಬ್ರವರಿ 14ರಂದು ಗಲ್ಲಿಗೇರಿಸಿದರು. ಭಗತ್ ಸಿಂಗ್ ಅವರ ಬಲಿದಾನವನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುವ ಬದಲು ನಮ್ಮ ಭಾರತೀಯರು ಅದೇ ದಿನ ವ್ಯಾಲೆಂಟೈನ್ ಡೇ ಅನ್ನು ಆಚರಿಸುತ್ತಿದ್ದಾರೆ."

ಆದರೆ ವಾಸ್ತವವಾಗಿ ಭಗತ್‌ಸಿಂಗ್ ಅವರನ್ನು ಗಲ್ಲಿಗೇರಿಸಿದ್ದು 1931ರ ಮಾರ್ಚ್ 23ರಂದು. ಹೀಗೆ ಸತ್ಯವನ್ನೇ ತಿರುಚುವ ಮೂಲಕ ಈ ಢೋಂಗಿ ದೇಶಭಕ್ತರು ತಮ್ಮ ಅಜೆಂಡಾವನ್ನು ಜನರ ಮೈಮೇಲೆ ಹೇರಲು ಕ್ರಾಂತಿಕಾರಿ ಭಗತ್ ಸಿಂಗ್ ಅವರನ್ನೂ ಅಸಹ್ಯವಾಗಿ ಬಳಸಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ.

- ಓದುಗ, ಎಸ್‌ಎಂಎಸ್ ಮೂಲಕ



ಪ್ರಸಾದ್ ಎಂಬ ಹೊಸ ಪವರ್

ಗಾಂಧಿನಗರದ ಹಂಚಿಕೆದಾರರು ಈಗ ಪ್ರಸಾದ್ ಎಂಬ ಹೆಸರನ್ನು ಕೇಳಿದರೆ ಬೆಚ್ಚಿಬೀಳುತ್ತಾರೆ. ಪ್ರಸಾದ್ ಈಗಷ್ಟೇ ಹಂಚಿಕೆದಾರರಾಗಿ ಕಾಲಿಟ್ಟಿರುವವರು. ಅವರ ಸಂಸ್ಥೆಯ ಹೆಸರು 'ಸಮರ್ಥ್ ಎಂಟರ್‌ಪ್ರೈಸಸ್'. ಕ್ರಿಕೆಟ್‌ನಲ್ಲಿ ಹೊಸ ಆಟಗಾರನೊಬ್ಬ ಮೊದಲ ಬಾರಿಗೆ ಬ್ಯಾಟ್ ಹಿಡಿದು ಹೇಗೆ ಬೌಂಡ್ರಿ ಸಿಕ್ಸರ್‌ಗಳ ಸುರಿಮಳೆ ಸುರಿಸಿ ಎಲ್ಲರ ಗಮನ ಸೆಳೆಯುತ್ತಾನೋ, ಹಾಗೆಯೇ ಈ ಪ್ರಸಾದ್ ಗಾಂಧಿನಗರದಲ್ಲಿರುವ ನೂರಾರು ಹಂಚಿಕೆದಾರರ ನಡುವೆ ವಿಶೇಷವಾಗಿ ಗಮನ ಸೆಳೆಯಲು ಕಾರಣವೂ ಇದೆ.

ಇವರು ಸುದೀಪ್ ನಟಿಸಿರುವ 'ವಿಷ್ಣುವರ್ಧನ್' ಚಿತ್ರದ ಮೈಸೂರು ವಲಯದ ಹಕ್ಕನ್ನು ದುಬಾರಿ ಬೆಲೆ ಕೊಟ್ಟು ಖರೀದಿಸಿದರು. ಆನಂತರ ಸುದೀಪ್‌ರವರ ಶಿಫಾರಸ್‌ನ ಮೇರೆಗೆ ದರ್ಶನ್ ನಟಿಸಿರುವ 'ಚಿಂಗಾರಿ' ಚಿತ್ರದ ಇಡೀ ಕರ್ನಾಟಕದ ಹಕ್ಕನ್ನು ದಾಖಲೆಯ ಹತ್ತೂವರೆ ಕೋಟಿ ರೂಪಾಯಿಗಳಿಗೆ ಖರೀದಿಸಿ ಎಲ್ಲರನ್ನು ಬೆಚ್ಚಿಬೀಳಿಸಿದರು. ಈ ಚಿತ್ರ ಬಿಡುಗಡೆಯಾಗುವ ಮೊದಲೆ ಇನ್ನೂ ಚಿತ್ರೀಕರಣ ಹಂತದಲ್ಲೇ ಇರುವ ಪುನೀತ್ ರಾಜ್‌ಕುಮಾರ್ ಅಭಿನಯದ 'ಅಣ್ಣಾ ಬಾಂಡ್' ಚಿತ್ರದ ಅಖಂಡ ಕರ್ನಾಟಕದ ಹಕ್ಕನ್ನು ದಾಖಲೆಯ 16 ಕೋಟಿ ರೂ.ಗಳಿಗೆ ಖರೀದಿಸಿ ಮತ್ತೊಮ್ಮೆ ಇಡೀ ಗಾಂಧಿನಗರ ಇವರ ಕಡೆಗೆ ತಿರುಗಿ ನೋಡುವಂತೆ ಮಾಡಿದರು. ಅವರ ಖರೀದಿ ಪ್ರಕ್ರಿಯೆ ಅಷ್ಟಕ್ಕೇ ಮುಗಿಯಲಿಲ್ಲ. ದುನಿಯಾ ಖ್ಯಾತಿಯ ವಿಜಯ್ ನಟಿಸಿರುವ 'ಭೀಮಾ ತೀರದ ದಡದಲ್ಲಿ' ಚಿತ್ರದ ಇಡೀ ಕರ್ನಾಟಕದ ಹಕ್ಕನ್ನೂ ಪ್ರಸಾದ್ ಸುಮಾರು 6 ಕೋಟಿ ರೂ.ಗಳನ್ನು ನೀಡಿ ಖರೀದಿಸಿದ್ದಾರೆ.

ಇತ್ತೀಚೆಗೆ ಸಿನಿಮಾ ಸಂಪೂರ್ಣಗೊಂಡ ನಂತರ ಎಷ್ಟೇ ಪ್ರೀಮಿಯರ್ ಶೋಗಳನ್ನು ಇಟ್ಟುಕೊಂಡರೂ ಹಂಚಿಕೆದಾರರು ಆ ಚಿತ್ರವನ್ನು ಖರೀದಿಸುವುದೇ ಇಲ್ಲ. ಇಂತಹ ದುಸ್ಥಿತಿಯಲ್ಲಿ ಕನ್ನಡ ಚಿತ್ರರಂಗ ಇರುವಾಗ ಒಬ್ಬ ಹಂಚಿಕೆದಾರ ಎರಡೆರಡು ಸಿನಿಮಾಗಳನ್ನು ಅವು ಸಂಪೂರ್ಣಗೊಳ್ಳುವ ಮೊದಲೇ ಅವುಗಳ ಇಡೀ ಕರ್ನಾಟಕದ ಹಕ್ಕನ್ನು ಖರೀದಿಸಿದ್ದನ್ನು ನೋಡಿ ಸಹಜವಾಗಿ ಎಲ್ಲರೂ ಬೆಚ್ಚಿಬಿದ್ದಿದ್ದಾರೆ.


ಪ್ರಸಾದ್‌ಗೆ ಇದೆಲ್ಲ ಸಾಧ್ಯವಾಗಿದ್ದು ಹೇಗೆ ಗೊತ್ತಾ? ಪ್ರಸಾದ್ ಮೂಲತಃ ಷೇರು ಮಾರ್ಕೆಟ್‌ನಲ್ಲಿ ಹಣವನ್ನು ಹೂಡುವ ಬಾಜಿದಾರ. ಕಳೆದ ಹಲವಾರು ವರ್ಷಗಳಿಂದ ಷೇರು ಮಾರುಕಟ್ಟೆಯಲ್ಲಿ ಸಾವಿರಾರು ಕೋಟಿ ರೂ. ವ್ಯವಹಾರವನ್ನು ಮಾಡಿದ್ದಾರೆ. ಒಂದೇ ದಿನದಲ್ಲಿ ಅವರು ಷೇರು ಮಾರುಕಟ್ಟೆಯಲ್ಲಿ 10-15 ಕೋಟಿ ರೂ.ಗಳನ್ನು ಕಳೆದುಕೊಂಡ ಉದಾಹರಣೆಗಳೂ ಇವೆ. ಇಂತಹ ವ್ಯಾಪಾರದಲ್ಲಿರುವ ಪ್ರಸಾದ್‌ಗೆ ತಮ್ಮ ಸಂಸ್ಥೆಯಿಂದ ಸಿನಿಮಾ ನಿರ್ಮಾಣವನ್ನೋ ಅಥವಾ ಹಂಚಿಕೆಯನ್ನೋ ಯಾಕೆ ಮಾಡಬಾರದು ಎಂದೆನಿಸಿದೆ. ಸಿನಿಮಾ ಲೋಕದಲ್ಲಿ ಲೆಕ್ಕಾಚಾರ ತಿರುಗುಮುರುಗಾದರೂ ಒಂದೆರಡು ಕೋಟಿ ರೂ. ನಷ್ಟವಾಗಬಹುದಷ್ಟೇ ಎಂಬ ಲೆಕ್ಕಾಚಾರದೊಂದಿಗೆ ಅವರೀಗ ಸಿನಿಮಾ ಉದ್ಯಮಕ್ಕೆ ಕಾಲಿಟ್ಟಿದ್ದಾರೆ.

ವಾಸ್ತವವಾಗಿ ತಮ್ಮ 'ಸಮರ್ಥ್ ಎಂಟರ್‌ಪ್ರೈಸಸ್' ಸಂಸ್ಥೆಯ ಮುಖಾಂತರ ಸಿನಿಮಾ ನಿರ್ಮಾಣ ಮಾಡುವ ಯೋಜನೆ ಪ್ರಸಾದ್ ಅವರಿಗಿದೆ. ಆದರೆ ನಿರ್ಮಾಣಕ್ಕೆ ಕೈಹಾಕುವ ಮುನ್ನ ಹಂಚಿಕೆದಾರರಾಗಿ 'ಚಿಂಗಾರಿ', 'ವಿಷ್ಣುವರ್ಧನ', 'ಅಣ್ಣಾ ಬಾಂಡ್', 'ಭೀಮಾ ತೀರದಲ್ಲಿ' ಚಿತ್ರಗಳ ಮುಖಾಂತರ ಅನುಭವ ಪಡೆದಿದ್ದಾರೆ. ಇನ್ನೆರಡು ತಿಂಗಳಲ್ಲಿ ಅವರ ಸ್ವಂತ ನಿರ್ಮಾಣದ ಚಿತ್ರ ಸೆಟ್ಟೇರಲಿದ್ದು, ಈಗಾಗಲೇ ದಾಖಲೆಯ ಒಂದು ಕೋಟಿ ರೂ. ಸಂಭಾವನೆ ನೀಡಿ ಎರಡೂ ಚಿತ್ರಗಳಿಗೆ ಯಶ್‌ನನ್ನು ನಾಯಕನನ್ನಾಗಿ ಬುಕ್ ಮಾಡಿದ್ದಾರೆ.

ಷೇರು ಮಾರುಕಟ್ಟೆಯ ಈ ವ್ಯಾಪಾರಸ್ಥ ಗಾಂಧಿನಗರಕ್ಕೆ ಕಾಲಿಟ್ಟು ಒಂದು ಸಣ್ಣ ರೀತಿಯಲ್ಲಿ ಅಲ್ಲೋಲಕಲ್ಲೋಲ ಮಾಡಿದ್ದಾರೆ. ಇವರ ಬಿರುಸಿನ ವ್ಯಾಪಾರದ ಶೈಲಿಯ ಮುಂದೆ ಗಾಂಧಿನಗರದ ಸಾಂಪ್ರದಾಯಿಕ ಹಂಚಿಕೆದಾರರು ತರಗೆಲೆಯಂತೆ ಉರುಳಿಹೋದರೂ ಆಶ್ಚರ್ಯಪಡಬೇಕಾಗಿಲ್ಲ. ಅದೇನೇ ಇದ್ದರೂ ಇಂತಹ ಗಟ್ಟಿ ಕುಳ ಉದ್ಯಮಕ್ಕೆ ಬಂದಿದ್ದನ್ನು ನೋಡಿ ನಿರ್ಮಾಪಕರೆಲ್ಲ ಸಂತೋಷಪಡುತ್ತಿದ್ದಾರೆ.

❖

ನಟಿಸಿದ ಒಂದು ದೃಶ್ಯವೂ ಇಲ್ಲ!



ನಟ ಶ್ರೀನಿವಾಸಮೂರ್ತಿ ಅವರು 25 ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ ಈಗ ಸುಪ್ರೀಂ ಕೋರ್ಟ್‌ನಿಂದ ನ್ಯಾಯಪಡೆದ ಸಮಾಧಾನದಲ್ಲಿರುವುದು ನಿಮಗೆಲ್ಲ ಗೊತ್ತಿರುವ ವಿಷಯ. ಅಂದರೆ 'ಬಾಳನೌಕೆ' ಚಿತ್ರಕ್ಕೆ ಸಂಬಂಧಪಟ್ಟಂತೆ ನಿರ್ಮಾಪಕ ಶಾಂತಾರಾಂ ಮತ್ತು ಶ್ರೀನಿವಾಸಮೂರ್ತಿ ನಡುವಿನ ವಿವಾದಕ್ಕೆ ಕೊನೆಗೂ ತೆರೆಬಿದ್ದಿದೆ. ಈ ವಿಷಯವನ್ನು ಹೇಳಲು ಪತ್ರಿಕಾಗೋಷ್ಠಿ ಕರೆದಿದ್ದ ಶ್ರೀನಿವಾಸಮೂರ್ತಿ ಅದೇ ಸಮಯದಲ್ಲಿ ಇತ್ತೀಚೆಗೆ ತಮ್ಮ ವೃತ್ತಿ ಜೀವನದಲ್ಲಿ ಹಿಂದೆಂದೂ ಆಗದಂತಹ ಒಂದು ಅಪಮಾನದ ಸಂಗತಿ ನಡೆದದ್ದನ್ನು ಕೂಡ ನೋವಿನಿಂದ ತೋಡಿಕೊಂಡರು. ಅದು ಮೊನ್ನೆ ತಾನೆ ಬಿಡುಗಡೆಯಾಗಿರುವ 'ಎ.ಕೆ-56' ಚಿತ್ರಕ್ಕೆ ಸಂಬಂಧಿಸಿದ್ದು.

ಈ ಚಿತ್ರದಲ್ಲಿ ಶ್ರೀನಿವಾಸಮೂರ್ತಿ ಮುಖ್ಯಮಂತ್ರಿ ಪಾತ್ರದಲ್ಲಿ ನಟಿಸಿದ್ದರಂತೆ. ಅದಕ್ಕಾಗಿ ನೂರಾರು ವಾಹನಗಳು, ಸಾವಿರಾರು ಜನರ ಸಮ್ಮುಖದಲ್ಲಿ ಸುಮಾರು ಮೂರು ದಿನಗಳ ಕಾಲ ಚಿತ್ರೀಕರಣವೂ ನಡೆದಿತ್ತು. ಆ ಚಿತ್ರದಲ್ಲಿ ನಟಿಸಿದ್ದಕ್ಕೆ ಕೈತುಂಬ ಸಂಭಾವನೆಯನ್ನು ಕೂಡ ನಿರ್ದೇಶಕ ಓಂಪ್ರಕಾಶ್ ಕೊಡಿಸಿದ್ದರಂತೆ.

ಆದರೆ ಈಗ ಚಿತ್ರ ಬಿಡುಗಡೆಯಾದಾಗ ಶ್ರೀನಿವಾಸಮೂರ್ತಿ ಮುಖ್ಯಮಂತ್ರಿಯಾಗಿ ನಟಿಸಿದ ಒಂದೇ ಒಂದು ಚಿಕ್ಕ ತುಣುಕು ಕೂಡ ಚಿತ್ರದಲ್ಲಿಲ್ಲವಂತೆ. ಆ ಇಡೀ ದೃಶ್ಯಕ್ಕೆ ನಿರ್ದೇಶಕ ಓಂಪ್ರಕಾಶ್ ನಿರ್ದಾಕ್ಷಿಣ್ಯವಾಗಿ ಕತ್ತರಿ ಪ್ರಯೋಗವನ್ನು ಮಾಡಿದ್ದಾರೆ. "ನನ್ನ 35 ವರ್ಷಗಳ ವೃತ್ತಿಜೀವನದಲ್ಲಿ ಯಾವತ್ತೂ ಈ ತರಹದ ದುರ್ಘಟನೆ ನಡೆದದ್ದೇ ಇಲ್ಲ, ಇದೂ ಕೂಡ ಒಂದು ರೀತಿಯ ಹೊಸ ಅನುಭವ" ಎನ್ನುತ್ತಾರೆ ಶ್ರೀನಿವಾಸಮೂರ್ತಿ. "ಆದರೆ ಈ ಬಗ್ಗೆ ನಾನು ಓಂಪ್ರಕಾಶ್ ಅವರನ್ನು ಖಂಡಿತವಾಗಿ ದೂರುವುದಿಲ್ಲ, ನಾನು ಮಾಡಿದ ಕೆಲಸಕ್ಕೆ ಒಳ್ಳೆಯ ಸಂಭಾವನೆ ನೀಡಿದ್ದರೂ ಕೂಡ ಒಬ್ಬ ಕಲಾವಿದನಾಗಿ ಯಾರೇ ಆಗಲಿ, ಅಂತಿಮವಾಗಿ ಬೆಳ್ಳಿ ತೆರೆಯ ಮೇಲೆ ತಮ್ಮ ಪಾತ್ರವನ್ನು ನಿರೀಕ್ಷಿಸುತ್ತಾರೆಯೇ ವಿನಃ ಸಂಭಾವನೆಯನ್ನಲ್ಲ" ಎಂದವರು ಹೇಳಿದರು. ಅಂತೂ ಒಂದು ಸುದೀರ್ಘ ನೋವಿನ ಸರಪಳಿಯಿಂದ ಶ್ರೀನಿವಾಸಮೂರ್ತಿ ಹೊರಬರುತ್ತಿರುವ ಸಂದರ್ಭದಲ್ಲೇ ಮತ್ತೊಂದು ನೋವಿನ ಸಂಗತಿಯನ್ನು ಅವರು ಎದುರಿಸುವಂತಾಗಿದ್ದನ್ನು ನೋಡಿದರೆ ಅವರಿಗೂ, ವಿವಾದಕ್ಕೂ ನಿಕಟ ಸಂಬಂಧವಿದ್ದಂತೆ ಕಾಣಿಸುತ್ತದೆ.

❖

ಕಿರುತೆರೆಯಲ್ಲೂ ಕೋಮಲ್ ಕಾಮಿಡಿ



ನವರಸ ನಾಯಕ ಜಗ್ಗೇಶ್‌ರವರ ಸಹೋದರ ಕೋಮಲ್ ಕೂಡ ಆಗಾಗ ಹೊಸ ಅವತಾರದಲ್ಲಿ ಪ್ರೇಕ್ಷಕರ ಎದುರು ಕಾಣಿಸಿಕೊಳ್ಳುತ್ತಲೇ ಇರುತ್ತಾರೆ. ಕೋಮಲ್ ಅವರ ಲೇಟೆಸ್ಟ್ ಅವತಾರವೆಂದರೆ 'ರಿಝಿ' ಟಿ.ವಿಯಲ್ಲಿ ಸದ್ಯದಲ್ಲೇ ಪ್ರಸಾರವಾಗಲಿರುವ ಒಂದು ಹಾಸ್ಯ ಕಾರ್ಯಕ್ರಮ. ಇತ್ತೀಚೆಗಷ್ಟೇ ಬೆಳ್ಳಿ ತೆರೆಯಲ್ಲಿ ನಾಯಕ ನಟನಾಗಿ ಬಡ್ತಿ ಪಡೆದಿರುವ ಕೋಮಲ್ ಈ ಕಾರ್ಯಕ್ರಮದ ಮುಖಾಂತರ ಕಿರುತೆರೆಗೆ ಪಾದಾರ್ಪಣೆ ಮಾಡಿದಂತಾಗಿದೆ. "ಸಾರ್! ಇವತ್ತು ಕಿರುತೆರೆಯಲ್ಲೇ ಹಣ ಇರುವುದು, ಇಲ್ಲೇ ಹೆಚ್ಚು ಗೌರವವೂ ಸಿಗುವುದು" ಎಂದು ಟೀವಿಗೆ ಬಂದ ಬಗ್ಗೆ ಕೋಮಲ್ ಪ್ರತಿಕ್ರಿಯಿಸಿದ್ದಾರೆ.

ಖಂಡಿತವಾಗಿಯೂ ಕೋಮಲ್ ಒಬ್ಬ ಪ್ರತಿಭಾವಂತ ನಟ. ಆತ ನಡೆಸಿಕೊಡುವ ಈ ಕಾರ್ಯಕ್ರಮ ಜನರನ್ನು ನಕ್ಕು ನಲಿಸುವುದರಲ್ಲಿ ಆಶ್ಚರ್ಯವಿಲ್ಲ. ಅದರಲ್ಲೂ ಇತ್ತೀಚೆಗೆ ಪಾರ್ಟ್ ಟೈಮ್ ಹಾಸ್ಯ ಕಲಾವಿದರಾದ ಕೃಷ್ಣೇಗೌಡ, ಪ್ರಾಣೇಶ್, ರಿಚರ್ಡ್ ಲೂಯಿಸ್ ಮೊದಲಾದವರು ಟಿ.ವಿ. ಕಾರ್ಯಕ್ರಮಗಳ ಮೂಲಕ ತಾರಾ ಪಟ್ಟವನ್ನೇ ಪಡೆದಿರುವಾಗ ಕೋಮಲ್‌ನಂತಹ ನಟ ಪ್ರೇಕ್ಷಕರ ಮನಸ್ಸು ಗೆಲ್ಲುವುದರಲ್ಲಿ ಆಶ್ಚರ್ಯವಿಲ್ಲ.

ಇದೇ ಕೋಮಲ್ ಈಗ ಮತ್ತೊಂದು 'ಮಾರ್ಗ'ವನ್ನು ಹಿಡಿದಿದ್ದಾರೆ. ಅದೇನೆಂದರೆ ಇನ್ನು ಮುಂದೆ ಕೋಮಲ್ ತನ್ನ ಸಂಭಾವನೆಯಾಗಿ ಹಣ ಪಡೆಯುವ ಬದಲು ತಾನು ನಟಿಸಿರುವ ಸಿನಿಮಾದ ಒಂದೊಂದು ವಲಯದ ಹಂಚಿಕೆಯ ಹಕ್ಕನ್ನು ಪಡೆಯುತ್ತಾರಂತೆ. ಅಂದರೆ, ಇನ್ನು ಮುಂದೆ ಕೋಮಲ್‌ರನ್ನು ಹಾಕಿಕೊಂಡು ಚಿತ್ರ ಮಾಡುವ ನಿರ್ಮಾಪಕರು ಆತನ ಸಂಭಾವನೆಯಾಗಿ ಹಣವನ್ನು ಮುಂಗಡವಾಗಿ ನೀಡುವ ಅಗತ್ಯವಿಲ್ಲ, ಅದಕ್ಕೆ ಬದಲಾಗಿ ನಿಮ್ಮ ಸಿನಿಮಾದ ಒಂದು ವಲಯದ ಹಂಚಿಕೆಯನ್ನು ಕೋಮಲ್‌ಗೆ ನೀಡಬಹುದು. ಸಾಮಾನ್ಯವಾಗಿ ಇಂತಹ ಹಂಚಿಕೆಯ ಹಕ್ಕನ್ನು ರಜನಿಕಾಂತ್, ಚಿರಂಜೀವಿ ತರಹದ ಮೆಘಾಸ್ಟಾರ್‌ಗಳು ಮಾತ್ರ ಪಡೆಯುತ್ತಿದ್ದರು. ಆದರೀಗ ಕೋಮಲ್ ಎಂಬ ಹಾಸ್ಯ ನಟ ಆ ಮಾರ್ಗವನ್ನು ಹಿಡಿಯಲು ಮುಂದಾಗಿದ್ದಾರೆ. ಇದನ್ನು ನಿರ್ಮಾಪಕರು ಹೇಗೆ ಸ್ವಾಗತಿಸುತ್ತಾರೆ ಎಂಬುದನ್ನು ಮುಂಬರುವ ದಿನಗಳಲ್ಲಿ ನೋಡಬಹುದು. ಸದ್ಯಕ್ಕೆ ಕೋಮಲ್ ಅವರು 'ಗೋವಿಂದಾಯನಮಃ' ಮತ್ತು 'ಕರೋಡ್‌ಪತಿ' ಚಿತ್ರಗಳಿಗೆ ಸಂಭಾವನೆ ಪಡೆಯುವ ಬದಲು ಒಂದೊಂದು ಏರಿಯಾದ ಮಾರಾಟದ ಹಕ್ಕನ್ನು ಪಡೆದಿದ್ದಾರೆ.

ಹೀಗೆ ಏಕಕಾಲದಲ್ಲಿ, ಕಿರುತೆರೆಯಲ್ಲಿ ನಿರೂಪಕನಾಗಿಯೂ, ಚಿತ್ರರಂಗದಲ್ಲಿ ಪಾರ್ಟ್ ಟೈಮ್ ಹಂಚಿಕೆದಾರನಾಗಿಯೂ ಕೋಮಲ್ ಎರಡು ಹೊಸ ಅವತಾರಗಳನ್ನು ಎತ್ತಲು ಸಜ್ಜಾಗಿ ನಿಂತಿದ್ದಾರೆ...

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 29-02-2012

ಕುಮಾರಣ್ಣ ಪೂಜಾ ಗಾಂಧಿಗೆ ಮನೆ ಕೊಡಿಸಿದ್ದು...!



ಈಗ ತನೆ ಹೊತ್ತು ನಿಂತಿರುವ ಖುದ್ದು ಪೂಜಾ ಗಾಂಧಿಯೇ 'ಕುಮಾರಸ್ವಾಮಿ ಅವರಿಂದ ನನಗೆ ಒಂದು ಹೊಸ ಮನೆ ಸಿಕ್ಕಿದೆ. ನಾನು ಅವರಿಗೆ ಚಿರಋಣಿ ಆಗಿದ್ದೇನೆ' ಎಂದು ಅಚ್ಚ ಕನ್ನಡದಲ್ಲಿ ಟೀವಿ 9 ಚಾನೆಲ್‌ನ ಚಕ್ರವ್ಯೂಹ ಕಾರ್ಯಕ್ರಮದಲ್ಲಿ ಒದರಿಬಿಟ್ಟಳು.

ಪೂಜಾ ಗಾಂಧಿಯ ಈ ಮಾತನ್ನು ಕೇಳಿ ಇಡೀ ಕರ್ನಾಟಕಕ್ಕೆ ಕರ್ನಾಟಕವೇ ಮೂಗು, ಬಾಯಿ ಇತ್ಯಾದಿಯೆಡೆ ಬೆರಳಿಟ್ಟುಕೊಂಡಿತ್ತು! ಈಗಾಗಲೇ ಡಾಲರ್ಸ್ ಕಾಲನಿಯಲ್ಲಿ ರಾಧಿಕಾಗೆ ಮನೆ ಕೊಡಿಸಿ ಚಿನ್ನವೀಡು ಆರಂಭಿಸಿರುವ ಕುಮಾರಣ್ಣ ಪೂಜಾಳಿಗೂ ಮನೆ ಕೊಡಿಸಿದ್ದಾರೆ ಎಂಬ ವಿಚಾರ ಕೇಳಿದ್ದೇ ಎಲ್ಲರೂ ದಿಗ್ಭ್ರಾಂತರಾದರು.

ಪತ್ರಕರ್ತರು ಸಹ ಪೂಜಾ ಗಾಂಧಿಗೆ ಕುಮಾರಣ್ಣ ಕೊಡಿಸಿದ ಮನೆ ಎಲ್ಲಿ? ಎಂಥದ್ದು? ಯಾವ ವಿಸ್ತೀರ್ಣ, ಎಷ್ಟು ಅಂತಸ್ತಿನದ್ದು? ಎಂಬಿತ್ಯಾದಿ ತನಿಖೆ ಆರಂಭಿಸಿದ್ದರು. ಮನೆಯ ವಿಳಾಸಕ್ಕಾಗಿ ಎಲ್ಲೆಂದರಲ್ಲಿ ವಿಚಾರಿಸಿದ್ದೂ ಆಯಿತು. ಆದರೂ ಯಾರಿಗೂ ಆ ಮನೆಯ ಸುಳಿವು ಮಾತ್ರ ಸಿಗಲಿಲ್ಲ. ಕಟ್ಟಕಡೆಯ ಪ್ರಯತ್ನ ಎಂಬಂತೆ ಸ್ವತಃ ಪೂಜಾಳನ್ನೇ 'ಕುಮಾರಣ್ಣ ಕೊಡಿಸಿದ ಮನೆ ಯಾವ ಏರಿಯಾದಲ್ಲಿದೆ?' ಎಂದು ಕೇಳಿದರು.

ಆಗ ಪೂಜಾ ಗಾಂಧಿ "ನಿಮಗೆ ನೆಟ್ಟಗೆ ಕನ್ನಡ ಬರಲ್ವಾ? ನಾನು ಐದು ವರ್ಷದಲ್ಲಿ ಇಷ್ಟು ಚೆನ್ನಾಗಿ ಮಾತಾಡ್ತೀನಿ. ನಿಮಗೆ ಅದನ್ನು ಅರ್ಥ ಮಾಡ್ಕೊಳ್ಳಕ್ಕೂ ಬರೋದಿಲ್ವಲ್ಲ...' ಎಂದು ಪ್ರಶ್ನಿಸಿದ ಪತ್ರಕರ್ತರನ್ನೇ ಕಿಚಾಯಿಸಿದಳು.

ಅಸಲಿಗೆ ಪೂಜಾ ಗಾಂಧಿ ಮಾತಿನ ವಿಸ್ತೃತ ರೂಪ ಹೀಗಿದೆ: 'ನನಗೆ ದೇವೇಗೌಡರ ಮತ್ತು ಕುಮಾರಸ್ವಾಮಿಯವರ ಜನತಾದಳದ ಜಾತ್ಯತೀತ ಕುಟುಂಬ ಸಿಕ್ಕಿದೆ. ಅದು ನನಗೆ ಮನೆಯಿದ್ದಂತೆ'. ಆದರೆ ಪೂಜಾಳ ಮಾತು ಸ್ವಲ್ಪ ಅಪಾರ್ಥವಾಗಿ 'ಪೂಜಾ ಗಾಂಧಿಗೆ ಕುಮಾರಣ್ಣ ಮನೆ ಕೊಡ್ಸಿದ್ರಂತೆ...' ಎಂಬುದಾಗಿ ಪ್ರಚಾರಾಗಿತ್ತು..!

ಚಿತ್ರೋದ್ಯಮ ಬಂದ್!

ಕೇಂದ್ರ ಸರ್ಕಾರ ಸಿನಿಮಾ ಪ್ರದರ್ಶನದ ಮೇಲೆ ಶೇ. 10.3ರಷ್ಟು ತೆರಿಗೆ ಹೆಚ್ಚಿಸಿ ಮೊದಲೇ ತತ್ತರಿಸುತ್ತಿರುವ ಚಿತ್ರರಂಗದ ಮೇಲೆ ಮತ್ತೊಂದು ಬರೆ ಹಾಕಿದೆ.

ಸರ್ಕಾರದ ಈ ಹೊಸ ತೆರಿಗೆ ಪದ್ಧತಿ ಜಾರಿಗೆ ಬಂದರೆ ಚಿತ್ರ ನಿರ್ಮಾಪಕರು ಹೀರೋಗಳ ಸಂಭಾವನೆಯಿಂದ ಹಿಡಿದು ಲೈಟ್‌ಬಾಯ್ಸ್, ಯೂನಿಟ್ ಕೆಲಸಗಾರರ ತನಕ ಇರುವ ಹದಿಮೂರೂ ಡಿಪಾರ್ಟ್‌ಮೆಂಟಿನವರಿಗೆ 10 ಪರ್ಸೆಂಟ್ ಸಂಭಾವನೆ ಕಡಿತಗೊಳಿಸಬೇಕಾಗುತ್ತದೆ. ಹೀರೋ, ಹೀರೋಯಿನ್ನುಗಳು ಈಗಾಗಲೇ ತಮ್ಮ ಸಂಭಾವನೆಯನ್ನು ದುಪ್ಪಟ್ಟು ಪಡೆಯುತ್ತಿರುವುದರಿಂದ ಅವರಿಗೆ ಈ ತೆರಿಗೆ ಅಂಥ ನಷ್ಟವನ್ನೇನೂ ಮಾಡುವುದಿಲ್ಲ. ಆದರೆ ಈಗಾಗಲೇ ಕಡಿಮೆ ವೇತನ ಪಡೆದು ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಸಿನಿಮಾ ಕಾರ್ಮಿಕರಿಗೆ ಈಗ ಬರುತ್ತಿರುವ ಸಂಬಳದಲ್ಲೂ ಶೇ.10ರಷ್ಟು ಕಡಿತಗೊಂಡರೆ ಅವರ ಬದುಕು ಮೂರಾಬಟ್ಟೆಯಾಗುವುದರಲ್ಲಿ ಸಂಶಯವಿಲ್ಲ. ಇದರೊಂದಿಗೆ ಟಿಕೇಟ್ ದರ ಕೂಡಾ ಹೆಚ್ಚಿಸಬೇಕಾಗುವುದರಿಂದ ಸಿನಿಮಾ ನೋಡುವ ಪ್ರೇಕ್ಷಕರ ಜೇಬಿಗೂ ಕತ್ತರಿ ಬೀಳುತ್ತದೆ.

ಹೀಗಾಗಿ ಚಿತ್ರರಂಗದವರೆಲ್ಲಾ ಒಟ್ಟು ಸೇರಿ ಇದೇ ಫೆಬ್ರವರಿ 23ರಂದು ಚಿತ್ರೋದ್ಯಮ ಬಂದ್ ಮಾಡಲು ನಿರ್ಧರಿಸಿದ್ದಾರೆ. ಒಂದುವೇಳೆ ಕೇಂದ್ರ ಸರ್ಕಾರ ಅಷ್ಟರಲ್ಲೇನಾದರೂ ಹೊಸ ತೆರಿಗೆ ನೀತಿಯನ್ನು ಹಿಂಪಡೆದಲ್ಲಿ ಬಂದ್‌ಅನ್ನು ಕೈಬಿಡುತ್ತಾರಂತೆ.

'ಚಿಂಗಾರಿ' ಚುಟ್ಟ ಬಾಂಬು ಇಡ!



ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತೊಮ್ಮೆ ವಿವಾದದಲ್ಲಿ ಸಿಲುಕಿಕೊಂಡಿದ್ದಾರೆ. ಆದರೆ ಈ ಬಾರಿ ಇದು ಅವರ ಸ್ವಂತ ಫ್ಯಾಮಿಲಿಯ ವಿಷಯ ಅಲ್ಲ. ಬದಲಿಗೆ ದರ್ಶನ್ ನಟಿಸಿರುವ 'ಚಿಂಗಾರಿ' ಚಿತ್ರದ ಕುಟುಂಬಕ್ಕೆ ಸಂಬಂಧಪಟ್ಟದ್ದು. ಈಗ ಈ ಕುಟುಂಬದೊಂದಿಗೆ ದರ್ಶನ್ ಕಿರಿಕ್ ಆರಂಭಿಸಿದ್ದಾರೆ ಎಂಬ ಸುದ್ದಿ ಕೇಳಿಬಂದಿದೆ. ಈ ಚಿತ್ರದ ನಿರ್ಮಾಪಕ ಮಹದೇವ್ ಮತ್ತು ದರ್ಶನ್ ನಡುವೆ ಮಾತಿನ ಚಕಮಕಿ ನಡೆದು ಇಬ್ಬರೂ ಟೂ ಬಿಟ್ಟಿದ್ದಾರೆ.



ಡ್ಯಾಶಿಂಗ್ ಹೀರೋ, ಗಾಂಧಿನಗರದ ಬಾಕ್ಸ್ ಆಫೀಸ್ ಡಾರ್ಲಿಂಗ್, ಚಾಲೆಂಜಿಂಗ್ ಸ್ಟಾರ್ ಮೊದಲಾದ 'ಗೌರವ'ಗಳನ್ನು ಹೊಂದಿರುವ ದರ್ಶನ್ ನಟಿಸಿರುವ 'ಚಿಂಗಾರಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಮೊದಲ ವಾರದಲ್ಲೇ ಅದ್ಭುತವಾದ ಜಯಭೇರಿ ಕಂಡಿದ್ದರೂ ಇವರಿಬ್ಬರ ನಡುವಿನ ಭಿನ್ನಾಭಿಪ್ರಾಯದ ಸುದ್ದಿ ಗಾಂಧಿನಗರದಲ್ಲಿ ಅಚ್ಚರಿ ಮೂಡಿಸಿದೆ. ದರ್ಶನ್ ಮತ್ತು ಮಹದೇವ್‌ರ ನಡುವೆ ಚಿತ್ರ ಬಿಡುಗಡೆಯಾದ ನಂತರ ಹಣಕಾಸು ವಿಷಯದಲ್ಲಿ ದೊಡ್ಡ ರಂಪಾಟವೇ ಆಗಿದೆಯಂತೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ 'ಚಿಂಗಾರಿ' ಚಿತ್ರದ ಯಶಸ್ಸಿನ ಸಂತೋಷಕೂಟದಲ್ಲಿ ನಿರ್ಮಾಪಕ ಮಹದೇವ ಗೌಡ ಅವರ ಗೈರುಹಾಜರಿ ಎದ್ದುಕಾಣುತ್ತಿತ್ತು. ಇವರಿಬ್ಬರ ನಡುವಿನ ಸಂಬಂಧ ಎಷ್ಟೊಂದು ಹಳಸಿಹೋಗಿದೆಯೆಂದರೆ "ದರ್ಶನ್ ಹಾಜರಿರುವ ಯಾವುದೇ ಸಮಾರಂಭದಲ್ಲಿ ಅಥವಾ ಸಂತೋಷಕೂಟದಲ್ಲಿ ನಾನು ಭಾಗವಹಿಸುವುದಿಲ್ಲ" ಎಂದು ಮಹದೇವ್ ತನ್ನ ಆಪ್ತರಲ್ಲಿ ಹೇಳಿಕೊಂಡಿದ್ದಾರಂತೆ. ಅಷ್ಟೇ ಅಲ್ಲ, ಸದ್ಯದಲ್ಲೇ ಸ್ವತಃ ತಾನೇ ಒಂದು ಪತ್ರಿಕಾಗೋಷ್ಠಿ ಕರೆದು "ದರ್ಶನ್ ಮತ್ತು ನನ್ನ ನಡುವಿನ ಭಿನ್ನಾಭಿಪ್ರಾಯಗಳು ಹೇಗೆ ಹುಟ್ಟಿದವು? ಆತ ನನಗೆ ಎಷ್ಟೊಂದು ತೊಂದರೆ ಕೊಟ್ಟಿದ್ದಾನೆ" ಎಂಬಿತ್ಯಾದಿ ವಿಷಯಗಳನ್ನು ಸವಿವರವಾಗಿ ಪತ್ರಕರ್ತರ ಮುಂದೆ ಬಿಚ್ಚಿಡಲಿದ್ದಾರಂತೆ.

ಈತನಕ ಒಂದು ಚಿತ್ರ ಸೋತಾಗ ಮಾತ್ರ ಆದರ ನಟ, ನಿರ್ದೇಶಕ ಮತ್ತು ನಿರ್ಮಾಪಕ ನಡುವೆ ದೋಷಾರೋಪಣೆ ಮಾತು ಕೇಳಿದ್ದೆವು. ಈಗ ಒಂದು ಚಿತ್ರ ಭಾರೀ ಯಶಸ್ಸು ಕಂಡ ನಂತರವೂ ಇಂತಹ ಕೋಳಿಜಗಳ ಆರಂಭವಾಗಿರುವುದು ಗಾಂಧಿನಗರದ ಪಾಲಿಗೆ ಒಂದು ಹೊಸ ಅಧ್ಯಾಯವೆಂದೇ ಹೇಳಬೇಕು.


ಕ್ಯಾಲೆಂಡರ್‌ಗೆ ಬೆಣ್ಣೆ ಗಾಂಧಿನಗರಕ್ಕೆ ಸುಣ್ಣ!



ಇತ್ತೀಚೆಗೆ ಸಿಸಿಎಲ್ ಕ್ಯಾಲೆಂಡರ್‌ಗಾಗಿ ಬಿಕಿನಿ ತೊಟ್ಟು ಸುದ್ದಿ ಮಾಡಿದ್ದ ಐಂದ್ರಿತಾ ರೇ ಗಾಂಧಿನಗರದವರನ್ನು ಮಾತ್ರ ನಿರಾಸೆಗೆ ದೂಡಿದ್ದಾಳೆ. "ನಾನು ಸಿನಿಮಾದಲ್ಲಿ ಯಾವ ಕಾರಣಕ್ಕೂ ಬಿಕಿನಿ ಹಾಕೋದಿಲ್ಲ, ಅಂತಹ ಹುಡುಗಿ ನಾನಂತೂ ಅಲ್ಲ" ಎಂದು ಸ್ವತಃ ಐಂದ್ರಿತಾ ಹೇಳಿಕೊಂಡಿದ್ದಾಳೆ. ಎಲ್ಲೋ ಚೂರು ಪಾರು ಬಟ್ಟೆ ಕಾಣಿಸುವಂತೆ ಕ್ಯಾಲೆಂಡರ್‌ಗೆ ಪೋಸು ಕೊಟ್ಟಿದ್ದ ಐಂದ್ರಿತಾಳನ್ನು ನೋಡಿದ ಗಾಂಧಿನಗರದ ನಿರ್ಮಾಪಕರು ಖುಷಿಯಿದ್ದು ಹೋಗಿದ್ದರು. ಸಿನಿಮಾಗಳಲ್ಲೂ ಇಂತಹುದೇ ಭರ್ಜರಿ ದೃಶ್ಯಗಳಲ್ಲಿ ಆಕೆಯನ್ನು ತೋರಿಸಬಹುದು ಎಂಬ ಬಯಕೆ ನಿರ್ಮಾಪಕ, ನಿರ್ದೇಶಕರದ್ದಾಗಿತ್ತು. ಈ ಕಾರಣಕ್ಕೇ ಒಂದಷ್ಟು ಮಂದಿ ಸಿಕ್ಕಾಪಟ್ಟೆ ಗ್ಲಾಮರಸ್ ಆದ ಕತೆಗಳನ್ನು ಕೂಡಾ ಹೇಳಿಬಂದಿದ್ದರು.

ಆದರೆ ಅವೆಲ್ಲದಕ್ಕೂ ಐಂದ್ರಿತಾ ತಣ್ಣೀರೆರಚಿದ್ದಾಳೆ. ಕ್ಯಾಲೆಂಡರ್‌ಗೆ ಹಾಗೆ ಪೋಸು ಕೊಟ್ಟ ಮಾತ್ರಕ್ಕೆ, ಸಿನಿಮಾಗಳಿಗೂ ಬಿಕಿನಿ ಹಾಕುತ್ತೇನೆ ಎಂದು ಅರ್ಥವಲ್ಲ ಎಂದು ಪ್ಲೇಟು ಬದಲಿಸಿಬಿಟ್ಟಿದ್ದಾಳೆ. ಅಲ್ಲಿ ತೊಟ್ಟಿದ್ದನ್ನು ಇಲ್ಲಿ ಯಾಕೆ ತೊಡುವುದಿಲ್ಲ ಎಂದು ಪ್ರಶ್ನಿಸಿದರೆ "ನಾನು ಫೋಟೋ ಶೂಟ್‌ಗಾಗಿ ಬಿಕಿನಿ ಹಾಕಿ ನಿಂತುಕೊಂಡದ್ದು ಒಂದು ಸುಂದರವಾದ, ಹಿತವೆನಿಸುವ ವಾತಾವರಣದಲ್ಲಿ. ಆದರೆ ನೂರಾರು ಜನ ತಂತ್ರಜ್ಞರ ಮುಂದೆ ಹಾಗೆ ಬಟ್ಟೆ ಬಿಚ್ಚಿ ನಿಲ್ಲುವುದು ನನ್ನಿಂತ ಅಸಾಧ್ಯ" ಎಂದು ಬಿಡೋದೇ? ಮಾತ್ರವಲ್ಲ "ಈ ದೇಶದಲ್ಲಿ, ರಾಜ್ಯದಲ್ಲಿ ದೊಡ್ಡ ದೊಡ್ಡ ಸಮಸ್ಯೆಗಳಿರುವಾಗ ಈ ಬಿಕಿನಿ ಸಂಗತಿ ಯಾಕೆ? ನಮ್ಮ ಸುತ್ತ ಮುತ್ತ ಸಾಕಷ್ಟು ಬಡತನ, ಅಸಮಾನತೆ ಇದೆ. ಬಿಕಿನಿಯಂತಹ ಸಿಲ್ಲಿ ವಿಚಾರದ ಬಗ್ಗೆ ಹೆಚ್ಚು ಮಾತಾಡಬೇಡಿ" ಎಂದು ಉಪದೇಶವನ್ನೂ ನೀಡುತ್ತಿದ್ದಾಳೆ.

12 ಕೋಟಿಯ ಹೊಸ ಸಿದ್ಧಾಂತ!



ಬರೋಬ್ಬರಿ ಹನ್ನೆರಡು ಕೋಟಿ ರೂಪಾಯಿ ಬಜೆಟ್‌ನ 'ಎಕೆ 56' ತೆರೆಗೆ ಬಂದಿದೆ. ಈ ಹಿಂದೆ 'ಮಿಂಚು' ಚಿತ್ರದಲ್ಲಿ ನಟಿಸಿದ್ದ ಸಿದ್ಧಾಂತ್ ನಾಯಕನಾಗಿರುವ ಎರಡನೇ ಚಿತ್ರವಿದು. ಮೊದಲ ಚಿತ್ರದಲ್ಲಿನ ತಪ್ಪುಗಳನ್ನೆಲ್ಲಾ ತಿದ್ದಿಕೊಂಡಂತೆ ನಟಿಸಿರುವ ಸಿದ್ಧಾಂತ್ ಬಹುತೇಕ ದೃಶ್ಯಗಳಲ್ಲಿ ಥೇಟು ಟೈಗರ್ ಪ್ರಭಾಕರ್‌ರನ್ನು ನೆನಪಿಸಿಕೊಳ್ಳುವಂತೆ ಮಾಡಿದ್ದಾರೆ. ಪ್ರಭಾಕರ್ ಪುತ್ರ ವಿನೋದ್ ಪ್ರಭಾಕರ್ ಏಳೆಂಟು ಚಿತ್ರಗಳಲ್ಲಿ ಕಾಣಿಸಿಕೊಂಡ ನಂತರವೂ ಇನ್ನೂ ನಟನೆಯಲ್ಲಿ ಸೈಕಲ್ ಹೊಡೆಯುತ್ತಿದ್ದಾನೆ. ಆದರೆ ಸಿದ್ಧಾಂತ್ ಹೆಚ್ಚೂ ಕಮ್ಮಿ ಪ್ರಭಾಕರ್ ರೇಂಜಿಗೆ ನಟಿಸಿದ್ದಾರೆ. ಜೊತೆಗೆ ನವೀನ್ ಕೃಷ್ಣರ ಕಂಠ ಸಿದ್ಧಾಂತ್‌ಗೆ ಪರ್ಫೆಕ್ಟ್ ಆಗಿ ಹೊಂದಿಕೊಂಡಿದೆ. ಇದೆಲ್ಲದರ ಪರಿಣಾಮವಾಗಿ ಸಿನಿಮಾ ಕೂಡಾ ಒಂದು ಮಟ್ಟಕ್ಕೆ ಥಿಯೇಟರಿನಲ್ಲಿ ಕಚ್ಚಿಕೊಳ್ಳುವಂತಾಗಿದೆ.

ಈ 'ಎಕೆ 56' ಚಿತ್ರಕ್ಕೆ ಹನ್ನೆರಡು ಕೋಟಿ ರೂಪಾಯಿಗಳನ್ನು ನಿರ್ಮಾಪಕರು ಸುರಿದಿರಬಹುದು. ಆದರೆ ಅಷ್ಟು ಕೋಟಿಗಳು ಖರ್ಚಾಗಿರುವುದಂತೂ ನಿರ್ದೇಶಕರ ಮೇಲಾಣೆ ಸುಳ್ಳು. ಹಾಗೆಂದು ಖರ್ಚೇ ಆಗಿಲ್ಲವೆಂದೇನೂ ಅಲ್ಲ. ಸುಮಾರು ಆರೇಳು ಕೋಟಿ ವ್ಯಯವಾಗಿರುವುದು ತೆರೆಯ ಮೇಲೆ ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ಮಿಕ್ಕ ಕೋಟಿಗಳು ಏನಾದವು ಎಂದು ಕೇಳಿದರೆ ಹೀರೋ ಸಿದ್ಧಾಂತ್ ನಿರ್ದೇಶಕ ಓಂ ಪ್ರಕಾಶ್ ಕಡೆ ಮುಖ ತಿರುಗಿಸುತ್ತಿದ್ದಾರೆ.

ಈ ಚಿತ್ರದಲ್ಲಿ ದುಡಿದಿರುವ ನಿರ್ದೇಶಕನಿಂದ ಹಿಡಿದು ಪ್ರೊಡಕ್ಷನ್ ಮ್ಯಾನೇಜರ್‌ಗಳ ತನಕ ಪ್ರತಿಯೊಬ್ಬರೂ ಭರ್ಜರಿಯಾಗಿ ಉಂಡಿದ್ದಾರೆ. ಗಾಂಧಿನಗರದವರು ನಿರ್ದೇಶಕ ಓಂಪ್ರಕಾಶ್ ಒಬ್ಬರೇ ಆರ್ಟಿಸ್ಟ್ ಕಮಿಷನ್ನು, ಲೊಕೇಶನ್ನು, ಸೆಟ್ ಕಮಿಷನ್ನು ಎಂದೆಲ್ಲ ಎರಡು ಕೋಟಿಗೂ ಅಧಿಕ ಮೊತ್ತವನ್ನು ಜೇಬಿಗಿಳಿಸಿಕೊಂಡಿದ್ದಾರೆ ಎಂದು ಆರೋಪಿಸುತ್ತಿದ್ದಾರೆ.

ಸಿನಿಮಾ ನಿರ್ಮಿಸಬೇಕು, ನಟಿಸಬೇಕು ಎಂಬ ಆಸೆಯಿಂದ ಬರುವ ಸ್ಥಿತಿವಂತ ನಿರ್ಮಾಪಕರನ್ನು ಈ ಗಾಂಧಿನಗರದವರು ದುರುಪಯೋಗ ಮಾಡಿಕೊಳ್ಳುವುದೇ ಹೀಗೆ. ಇನ್ನೆಂದೂ ಸಿನಿಮಾ ನಿರ್ಮಿಸಬಾರದು ಎನ್ನುವ ಮಟ್ಟಕ್ಕೆ ಹೊಸ ನಿರ್ಮಾಪಕರನ್ನು ಸುಣ್ಣಗೆ ಮಾಡಿ ಕಳಿಸುತ್ತಾರೆ. ಇನ್ನು ಚಿತ್ರರಂಗ ಉದ್ಧಾರವಾಗುವ ಸಾಧ್ಯತೆಯಾದರೂ ಯಾವುದು?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com